

ದಾಸಗಾನಸೌರಭ

(ವಿವಿಧ ಹರಿದಾಸರ ಕೃತಿಗಳು)

ದಾಸಗಾನಸೌರಭ

(ವಿವಿಧ ಹರಿದಾಸರ ಕೀರ್ತನೆಗಳು)

ಸಂಗ್ರಾಹಕರು

ರಮಾಕೇಶವಮೂರ್ತಿ

ಸಂಪಾದಕರು

ಪ್ರೊ|| ಜಿ. ಅಶ್ವತ್ಥನಾರಾಯಣ

ಪ್ರಕಾಶಕರು

ಶ್ರೀ ರಂಗನಾಥ ಪ್ರಕಾಶನ

ಹಿ. ಭಾಸ್ಕರ.
001 ಉದಯ್ ರೆಸಿಡೆನ್ಸಿ, #255, ಅಂಕಪ್ಪ ಲೇಔಟ್,
ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು 560061.
ದೂ: 90080 18330.

2012

Dasaganasowrabha - (Vividha Haridasara Kirthanegalu)

Collected by: Smt. Ramakeshavamurthy.

Edited by: Prof. G. Ashwathanarayana. #95, 34th 'B' Cross, 16th Main, 4th 'T' Block, Jayanagar, Bangalore 560041.

Published by: Sri Ranganatha Prakashana, 001, Uday Residency, # 255, Ankappa Layout, Uttarahalli Main Road, Bangalore 560061.

Printers: Sanjay Joshi, Printmark, 16/28, Gangamma Temple Street, Ashoknagar, BSK I Stage, Bangalore - 560050

Pages: 198 Size: 1/8 Demy Paper: Maplitho 80 GSM

First Edition: 2012 2000 Copies Price : Shastradaana

ದಾಸಗಾನಸೌರಭ – (ವಿವಿಧ ಹರಿದಾಸರ ಕೀರ್ತನೆಗಳು)

ಸಂಗ್ರಾಹಕರು: ಶ್ರೀಮತಿ ರಮಾಕೇಶವಮೂರ್ತಿ

ಸಂಪಾದಕರು: ಪ್ರೊ॥ ಜಿ. ಅಶ್ವತ್ಥನಾರಾಯಣ, #95, 34ನೇ 'ಬಿ' ಅಡ್ಡರಸ್ತೆ, 16ನೇ ಮುಖ್ಯರಸ್ತೆ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು 560041.

ಪ್ರಕಾಶಕರು: ಶ್ರೀ ರಂಗನಾಥ ಪ್ರಕಾಶನ, 001 ಉದಯ್ ರೆಸಿಡೆನ್ಸಿ, #255, ಅಂಕಪ್ಪ ಲೇಔಟ್, ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು 560061.

ಮುದ್ರಕರು: ಶ್ರೀ ಸಂಜಯ್ ಜೋಶಿ, ಪ್ರಿಂಟ್‌ಮಾರ್ಕ್, 16/28, ಗಂಗಮ್ಮ ದೇವಸ್ಥಾನ ಬೀದಿ, ಅಶೋಕನಗರ, ಬನಶಂಕರಿ 1ನೇ ಹಂತ, ಬೆಂಗಳೂರು 560050.

ಪುಟಗಳು: 198 ಅಳತೆ: 1/8 ಡೆಮ್ಮಿ ಕಾಗದ: ಮ್ಯಾಪ್ಲಿಥೋ 80 ಜಿಎಸ್ಎಂ.

ಪ್ರಥಮಮುದ್ರಣ : 2012

ಬೆಲೆ: **ಶಾಸ್ತ್ರದಾನ.**

ಪುಸ್ತಕ ಮತ್ತು ಮುಖಪುಟ ವಿನ್ಯಾಸ: ಬಿ. ಮೋಹನ್, ರಿವರ್ ಡಿಸೈನ್ ಸಲ್ಯುಶನ್ಸ್

ಪ್ರಕಾಶಕರು

ಶ್ರೀ ರಂಗನಾಥ ಪ್ರಕಾಶನ

001, ಉದಯ ರೆಸಿಡೆನ್ಸಿ

#255, ಅಂಕಪ್ಪ ಲೇಔಟ್, ಉತ್ತರಹಳ್ಳಿ ಮುಖ್ಯರಸ್ತೆ,

ಬೆಂಗಳೂರು 560061

ದೂ: 90080 18330.

ಸಂಪಾದಕರ ನುಡಿ

ಶ್ರೀಮತಿ ರಮಾಕೇಶವಮೂರ್ತಿ ಅವರು ಕನ್ನಡಭಕ್ತರು ಸಂಗೀತಾರಾಧಕರು; ಹರಿದಾಸ ಕೀರ್ತನೆಗಳ, ಭಜನಾಸಕ್ತರು; ಇತರರಿಗೂ ಕೀರ್ತನೆಗಳನ್ನು ಹೇಳಿಕೊಟ್ಟು ದಾಸಸಾಹಿತ್ಯ ಪ್ರಸಾರಕ್ಕೆ ಭಕ್ತಿಪ್ರಚಾರಕ್ಕೆ ಸದಾ ಸೇವಾನಿರತರು. ಇವರು ತಾವು ಹಾಡಿಕೊಳ್ಳಲು, ಇತರರಿಗೆ ಹೇಳಿಕೊಡಲು ಬರೆದಿಟ್ಟುಕೊಂಡಿದ್ದ ಹಾಡುಗಳ ಸಂಗ್ರಹ ಈ ಗ್ರಂಥ.

ಹೀಗೆ ನಮ್ಮಲ್ಲಿ ಅನೇಕ ಭಜನಾಸಕ್ತರು, ಸಂಗೀತಾಭ್ಯಾಸಿಗಳು, ಬರೆದಿಟ್ಟುಕೊಂಡ ಪುಸ್ತಕಗಳು ಇವೆ. ಕೆಲವರು ಅಚ್ಚುಮಾಡಿಸಿದ್ದಾರೆ, ಹೀಗೆ ಸಂಗ್ರಹಮಾಡಿಕೊಂಡವರು ತಮಗೆ ಹಾಡಿಕೊಳ್ಳಲು ಅನುವಾಗುವಂತೆ ಪದಬಿಡಿಸಿಕೊಂಡು ಬರೆದಿಟ್ಟುಕೊಂಡಿರುತ್ತಾರೆ, ತಾವು ಓದಿದಪುಸ್ತಕದಿಂದ ತಾವು ಕೇಳಿದ ಅಥವಾ ತಮಗೆ ಹೇಳಿಕೊಟ್ಟವರು ಹೇಳಿದಂತೆ ಸಾಹಿತ್ಯವನ್ನು ಬರೆದಿಟ್ಟುಕೊಂಡಿರುತ್ತಾರೆ. ಹೀಗೆ ಬರೆದಿಟ್ಟುಕೊಂಡ ಗ್ರಂಥಗಳಲ್ಲಿ ಬರಹದ ದೋಷಗಳು ಭಾಷಾದೋಷಗಳು ಅಕ್ಷರದೋಷಗಳು ಸಹಜ. ಪಾಠಾಂತರಗಳು ಸಾಮಾನ್ಯ, ಎಲ್ಲಕಿಂತ ಹೆಚ್ಚಾಗಿ ಪೂರ್ತಿಕೀರ್ತನೆ ಬರೆದಿಟ್ಟುಕೊಳ್ಳದೆ ಹಾಡಿನಲ್ಲಿ ತಾವು ಹಾಡಿದಷ್ಟು ಅಥವಾ ಗುರುಗಳು ಹೇಳಿಕೊಟ್ಟಷ್ಟನ್ನು ಬರೆದಿಟ್ಟುಕೊಳ್ಳುತ್ತಾರೆ ಹೇಳಿಕೊಡುವವರಾಗಲಿ ಹೇಳಿಸಿಕೊಳ್ಳುವವರಾಗಲಿ ಬರೆದಿಟ್ಟುಕೊಳ್ಳುವವರಾಗಲಿ ಪೂರ್ತಿಹಾಡನ್ನು ಎಷ್ಟೋಬಾರಿ ಬರೆದಿಟ್ಟುಕೊಳ್ಳುವುದಿಲ್ಲ. ಏಕೆಂದರೆ ನಮ್ಮಲ್ಲಿ ಅನೇಕರು ನೂರಕ್ಕೆ ತೊಂಬತ್ತುಮಂದಿ ಪೂರ್ತಿಕೀರ್ತನೆ ಹಾಡುವುದಿಲ್ಲ. ಪಲ್ಲವಿ, ಅನುಪಲ್ಲವಿ, ಮೊದಲಚರಣ, ಕೊನೆಯಚರಣ ಮಾತ್ರ ಹಾಡಿ ಮಧ್ಯದ ಚರಣಗಳನ್ನು ಕೈಬಿಡುತ್ತಾರೆ. ಇದಕ್ಕೆ ಹಲವಾರು ಕಾರಣಗಳುಉಂಟು. ಸಭೆಯಲ್ಲಿ ಕಾಲಾವಕಾಶ ಇಲ್ಲದಿರುವುದು, ಬೇರೆಬೇರೆ ಕೀರ್ತನೆಗಳನ್ನು ಬೇರೆಬೇರೆ ರಾಗಗಳಲ್ಲಿ ಹಾಡುವ; ಕೇಳುಗರಿಗೆ ವೈವಿಧ್ಯ ಇರಬೇಕೆಂದು ಹಂಬಲ ಇತ್ಯಾದಿ ಕಾರಣಗಳಿಂದ ಅಪೂರ್ಣ ಕೀರ್ತನೆಗಳನ್ನು ಹಾಡುವವರೇ ಬಹುಮಂದಿ. ಇದು ಒಂದು ರೀತಿಯಲ್ಲಿ ದಾಸಸಾಹಿತ್ಯಕ್ಕೆ ಅಪಚಾರವೆಂದರೆ ತಪ್ಪಲ್ಲ. ಸಂಪ್ರದಾಯನಿಷ್ಠ ಪರಂಪರೆಯ ಹರಿದಾಸರು ಪೂರ್ತಿಕೀರ್ತನೆ ಹಾಡುತ್ತಾರೆ. ಹರಿದಾಸರು ಬರೆದದ್ದು ಚರಣಗಳನ್ನು ಬಿಟ್ಟು ಹಾಡಲಿಕ್ಕೆ ಅಲ್ಲ. ಆದಕಾರಣ ಸಾಹಿತ್ಯಾಸಕ್ತರಿಗೆ ಗಾಯನಾಸಕ್ತರಿಗೆ ಪೂರ್ತಿ ಹಾಡುಗಳನ್ನು ಇಲ್ಲಿ ಕೊಟ್ಟಿದೆ

ಇನ್ನು ಹರಿದಾಸರ ಕೀರ್ತನೆಗಳು ಮೌಖಿಕ ಪರಂಪರೆಗೆ ಸೇರಿದವು. ಜನರ ಬಾಯಿಂದಬಾಯಿಗೆ ಕಿವಿಯಿಂದಕಿವಿಗೆ ಹರಿದಾಡುವ ಸಾಹಿತ್ಯಇದು, ಆದ್ದರಿಂದ ಪದವ್ಯತ್ಯಾಸಗಳು, ಪಾಠಾಂತರಗಳು, ಕೆಲವೊಮ್ಮೆ ಸಾಲುಗಳು, ಚರಣಗಳ ವ್ಯತ್ಯಾಸ ಸಾಕಷ್ಟಿದೆ, ಉದಾಹರಣೆಗೆ, ಪುರಂದರದಾಸರ ಕೀರ್ತನೆಗಳು ಇದಕ್ಕೆ ಸಾಕ್ಷಿ, ಒಂದೇ ಕೀರ್ತನೆ ಹತ್ತಾರುಮಂದಿ ಬಾಯಲ್ಲಿ ಹತ್ತಾರುರೂಪ

ಹೊಂದಿರುವುದನ್ನು, ಅಂಕಿತವಿಲ್ಲದವುಗಳನ್ನು ಕಾಣಬಹುದು, ಇಲ್ಲಿ ರಮಾಕೇಶವಮೂರ್ತಿ ಅವರು ಸಂಗ್ರಹಿಸಿದ ಪಠ್ಯದ ಪಾಠಗಳನ್ನು ಇಟ್ಟುಕೊಂಡಿದೆ. ಸ್ವಂತಕ್ಕೆ ಇಟ್ಟುಕೊಂಡಿದ್ದ ಹಸ್ತಪ್ರತಿ ಆದುದರಿಂದ ಸಹಜವಾಗಿ ಸಾಲುಗಳು ಚರಣಗಳ ವಿಂಗಡಣೆ ಶಾಸ್ತ್ರೀಯವಾಗಿ ಕಂಡುಬರದಿದ್ದರೆ ಅಚ್ಚರಿಯೇನಿಲ್ಲ, ಅವುಗಳನ್ನೆಲ್ಲಾ ಸಾಧ್ಯವಾದಷ್ಟು ಇಲ್ಲಿ ಸರಿಪಡಿಸಿದೆ ಈ ಕೆಲಸದಲ್ಲಿ ಭಾಸ್ಕರ್‌ರವರು ಸಾಕಷ್ಟು ನೆರವಾಗಿದ್ದಾರೆ.

ಕೀರ್ತನೆಗಳಿಗೆ ಕ್ರಮಸಂಖ್ಯೆನೀಡಲಾಗಿದೆ ಪ್ರತಿಹಾಡಿಗೂ ಮೊದಲನೇಸಾಲಿನ ಶೀರ್ಷಿಕೆ ನೀಡಲಾಗಿದೆ, ಸಾಮಾನ್ಯವಾಗಿ ಭಜನಸಂಗ್ರಹಗಳಲ್ಲಿ ತಾರತಮ್ಯೋಕ್ತವಾಗಿ ಕೀರ್ತನೆಗಳನ್ನು ಬರೆದಿಟ್ಟುಕೊಳ್ಳುವುದುಂಟು, ಅದೇರೀತಿ ಹಾಡುವುದು ಪದ್ಧತಿ. ಈ ಗ್ರಂಥದಲ್ಲಿ ಹರಿದಾಸರ ಕಾಲಾನುಕ್ರಮಣಿಕೆಯಲ್ಲಿ ಕೀರ್ತನೆಗಳನ್ನು ಕೊಡಲಾಗಿದೆ, ಇಲ್ಲಿ ಎಲ್ಲದಾಸರ ಪ್ರಾತಿನಿಧಿಕ ಕೀರ್ತನೆಗಳು ಬಂದಿಲ್ಲ; ತಮಗೆಸಿಕ್ಕಷ್ಟನ್ನು ಸಿಕ್ಕಂತೆ ಸಂಗ್ರಾಹಕರು ಬರೆದಿಟ್ಟುಕೊಂಡಿದ್ದ **205** ಹಾಡುಗಳನ್ನಷ್ಟೇ ಸಂಪಾದನೆಮಾಡಿ ಪ್ರಕಟಿಸಲಾಗಿದೆ. ಸಾಧ್ಯವಾದಷ್ಟು ಹಾಡುವವರಿಗೆ ಅನುಕೂಲವಾಗುವಂತೆ ರಾಗ–ತಾಳಗಳನ್ನು ಸೂಚಿಸಿದೆ.

ಶಕ್ಯವಿದ್ದಷ್ಟು ಹರಿದಾಸರ ಕಾಲಾವಧಿಯನ್ನು ಕೊಡಲಾಗಿದೆ, ನಮ್ಮಲ್ಲಿ ಹರಿದಾಸರು 'ಲೌಕಿಕ ವಿವರಗಳಿಗೆ ಬದುಕಿನ ಸಂಗತಿಗಳಿಗೆ ಹರಿದಾಸರು ವೈರಾಗ್ಯಭಾವತಾಳಿದ್ದರಿಂದ, **ಇಲ್ಲಿ ಇರುವುದು ಸುಮ್ಮನೆ; ಅಲ್ಲಿರುವುದು ನಮ್ಮನೆ** ಎಂದು ತಿಳಿದಿದ್ದರಿಂದ ಲೌಕಿಕಲಾಭ, ಲೌಕಿಕಾಸಕ್ತಿ, ಕೀರ್ತಿಕಾಮನೆ ಇಲ್ಲದ್ದರಿಂದ ಎಷ್ಟೋ ಹರಿದಾಸರ ಜೀವನ, ಮರಣದ ಕಾಲ, ಸ್ಥಳ ಇತ್ಯಾದಿ ವಿವರಗಳೇ ತಿಳಿಯುವುದಿಲ್ಲ. ಊಹೆಗೆಬಿಟ್ಟ ವಿಚಾರವಾಗಿದೆ. ಇನ್ನು ಪ್ರಸಿದ್ಧ ಹರಿದಾಸರ ಕಾಲದಬಗ್ಗೆ ಸಾಕಷ್ಟು ಚರ್ಚೆಗಳಿವೆ. ಇಲ್ಲಿ ಸೂಚಿಸಿದ ಕಾಲ ಹರಿದಾಸ ಸಾಹಿತ್ಯ ವಿದ್ವಾಂಸರು ಸೂಚಿಸಿದ ಕಾಲವನ್ನು ಬಳಸಿದೆ. ವ್ಯತ್ಯಾಸ ಕಂಡುಬರುವುದು ಕೆಲವೊಮ್ಮೆ ಅನಿವಾರ್ಯ.

ಹಸ್ತಪ್ರತಿಯಲ್ಲಿ ಹಾಡಲು ಅನುಕೂಲವಾಗಲಿಎಂದು ಪದ ಬಿಡಿಸಿಟ್ಟುಕೊಂಡ ರೂಪಗಳನ್ನು–ಸಾಹಿತ್ಯದ ದೃಷ್ಟಿಯಿಂದ ಸರಿಪಡಿಸಿಕೊಡಲಾಗಿದೆ ಉದಾ; ಗುರು ಮೂರ್ತಿ ಪುರಂದರ ವಿಠಲನ್ನ ಗುರುಮೂರ್ತಿ ಪುರಂದರವಿಠಲನ್ನ ಎಂದು ಅಚ್ಚುಮಾಡಿದೆ.

ದೈವಭಕ್ತರೂ ಸಮಾಜಸೇವಾನಿರತರೂ ಆದ ಶಿವಶಂಕರ್ ಮತ್ತು ಭಾಸ್ಕರ ಸಹೋದರರು ಶ್ರೀಮತಿ ರಮಾಕೇಶವಮೂರ್ತಿ ಅವರು ಸಂಗ್ರಹಿಸಿದ ಕೀರ್ತನೆಗಳ ಸಂಗ್ರಹವನ್ನು ಅಚ್ಚುಮಾಡಿಸಿ ಉಚಿತವಾಗಿ ಅವರ ಮನೆತನದ ಹಿರಿಯರ ಹೆಸರಿನಲ್ಲಿ ಶಾಸ್ತ್ರದಾನವಾಗಿ ಹಂಚಲು ನಿರ್ಧರಿಸಿರುವುದು ಸಂತೋಷದಸಂಗತಿ, ಆದರ್ಶಪ್ರಾಯಸಂಗತಿ.

ಶ್ರೀಮತಿ ಸಾವಿತ್ರೀರಂಗನಾಥ್ ಅವರು ತಾವಷ್ಟೇ ಗಾನಸೇವೆ ಮಾಡುವುದಲ್ಲದೆ ದೀಪದಿಂದ ದೀಪವನ್ನು ಬೆಳಗುವಂತೆ ನೂರಾರುಮಂದಿ ಗಾನಾಸಕ್ತರಿಗೆ ದೇವರನಾಮಗಳನ್ನು ಹೇಳಿಕೊಟ್ಟಿದ್ದಾರೆ, ಬೇರೆಬೇರೆ ಬಡಾವಣೆಗಳಲ್ಲಿ ದೂರದೂರದಲ್ಲಿರುವವರು ಕಲಿಯುವ ಜಾಗಕ್ಕೆ ಬರಲಾಗದ್ದನ್ನು ತಿಳಿದು ಇಲ್ಲಿ ಕಲಿತವರು ಸ್ವಯಂಪ್ರೇರಿತರಾಗಿ ಉಳಿದ ಬಡಾವಣೆಗಳಲ್ಲಿರುವ ಗೃಹಿಣಿಯರಿಗೆ ಕಲಿಸಿಕೊಟ್ಟಿದ್ದಾರೆ ಹೀಗಾಗಿ ಇಂದು ನಾಡಿನಲ್ಲಿ ನೂರಾರು ಏಕೆ ಸಾವಿರಾರು ಮಂದಿ ಭಕ್ತರು ದೇವರನಾಮಗಳನ್ನು ಕಲಿತು ಧನ್ಯರಾಗಿದ್ದಾರೆ. ನಿಜವಾಗಿಯೂ ಸಾವಿತ್ರೀರಂಗನಾಥ್ ಹಾಗೂ ಅವರ ಶಿಷ್ಯೆಯರ ಈ ಸೇವೆ ಕನ್ನಡಸೇವೆ, ಭಕ್ತಿಸೇವೆ, ಹರಿದಾಸರ ಸಾಹಿತ್ಯಸೇವೆ, ಈ ಕಾರ್ಯಕ್ಕೆ ನೆರವಾದ ಕೇತಕೀ ಮಹಿಳಾ ಮಂಡಳಿ ಸೇವೆ ಸ್ತುತ್ಯಾರ್ಹವಾಗಿದೆ.

ಅಧಿಕ ವ್ಯತ್ಯಾಸಗಳ ಕೀರ್ತನೆಗಳು

ಹರಿದಾಸರ ಕೀರ್ತನೆಗಳು ಬಾಯಿಂದ ಬಾಯಿಗೆ ಬರುವಾಗ ನಾನಾ ಬಗೆಯ ವ್ಯತ್ಯಾಸಗಳು ಪ್ರಾದೇಶಿಕವಾಗಿ ಹಾಡುವವರ ಶಾಸ್ತ್ರಜ್ಞಾನ, ಸಾಹಿತ್ಯಜ್ಞಾನ, ಉಚ್ಚಾರರೀತಿ, ಹೇಳಿಕೊಡುವವರಿಗೆ ಇರುವ ಲಭ್ಯಸಾಹಿತ್ಯ ಇತ್ಯಾದಿ ಅವಲಂಬಿಸಿರುತ್ತದೆ ಒಂದು ಹಾಡು ಒಬ್ಬರ ಬಾಯಲ್ಲಿ ಒಂದುತರಹ ಇನ್ನೊಬ್ಬರ ಬಾಯಲಿ ಇನ್ನೊಂದುತರಹ ಮೂಡುತ್ತದೆ ರಾಗ-ತಾಳಗಳ ವ್ಯತ್ಯಾಸಗಳ ಜೊತೆಗೆ ಅಕ್ಷರವ್ಯತ್ಯಾಸ ಪಾಠವ್ಯತ್ಯಾಸಗಳ ಜೊತೆಗೆ ಚರಣಗಳೇ ವ್ಯತ್ಯಾಸಹೊಂದಿ ಇದು ಬೇರೆ ಹಾಡೇನೋ ಎನ್ನಿಸುತ್ತದೆ. ಕೆಲವು ಸಾಲುಗಳು ಮಾತ್ರಸಾಮ್ಯ ಇರುತ್ತದೆ. ಕೀರ್ತನೆಗಳಲ್ಲಿ ಇಂಥ ವ್ಯತ್ಯಾಸಗಳು ಜನಪ್ರಿಯದಾಸರ ಕೀರ್ತನೆಗಳಲ್ಲಿ ಹೆಚ್ಚು. ಉದಾಹರಣೆಗೆ ಕನಕದಾಸರ ಈ ಕೀರ್ತನೆಯನ್ನು ಗಮನಿಸಬಹುದು

ಉದಾ: ಸತ್ಯವಂತರ ಸಂಗವಿರಲು ತೀರ್ಥವೇತಕೆ
ನಿತ್ಯ ಅನ್ನದಾನವಿರಲು ಭಯವುವೇತಕೆ

ಎಂಬ ಕೀರ್ತನೆಯನ್ನು ಅರಳುಮಲ್ಲಿಗೆ ಪಾರ್ಥಸಾರಥಿ ಅವರ ಹರಿದಾಸರ **4500** ಕೀರ್ತನೆಗಳು ಸಂಗ್ರಹ ದಲ್ಲಿರುವ ರೀತಿಗೂ ಎ ವಿ ನಾವುಡ, ಗಾಯತ್ರಿ ನಾವಡ ಅವರ **1000** ಕೀರ್ತನೆಗಳು ಸಂಗ್ರಹಕ್ಕೂ ಹೋಲಿಸಿದಾಗ ವ್ಯತಾಸಗಳನ್ನು ಗಮನಿಸಬಹುದು.

ಉಚ್ಚಾರವ್ಯತ್ಯಾಸಕ್ಕೆ: ತೀರ್ಥವೇತಕೇ-ತೀರ್ಥವ್ಯೆತಕೆ-ತೀರ್ಥಏತಕೆ

ಸಾಲು ವ್ಯತ್ಯಾಸಕ್ಕೆ: ತಾನುಉಣ್ಣದೆ ಪರರಿಗಿಕ್ಕದ ಅನ್ನವಿದ್ಯಾತಕೆ

(ಪ್ರಕೃತ ಗ್ರಂಥ) ತಾನುಉಣ್ಣದ ಪರರಿಗಿಕ್ಕದ ಧನವಿದ್ಯೇತಕೆ

(ಸಾವಿರ ಕೀರ್ತನೆಗಳು) ಇದು ನಾಲ್ಕನೇಚರಣದಲ್ಲಿ ಒಂದು ಸಂಗ್ರಹದಲ್ಲಿದ್ದರೆ

4

ಇನ್ನೊಂದರಲ್ಲಿ ಒಂದನೇ ಚರಣದಲ್ಲಿದೆ

ಚರಣ ವ್ಯತ್ಯಾಸಕ್ಕೆ: ಕೆಲವುಕಡೆ ಮೂರು ಚರಣಗಳಿದ್ದರೇ
ಐದು ಚರಣಗಳಿವೆ ಬೇರೆ ಕಡೆ

ರಾಗ-ತಾಳ ವ್ಯತ್ಯಾಸ: ಈ ಗ್ರಂಥದಲ್ಲಿ ಹಂಸಾನಂದಿ ರಾಗ, ಆದಿತಾಳ ಇದ್ದರೆ ನಾವುಡರ ಗ್ರಂಥದಲ್ಲಿ ಪೂರ್ವಿರಾಗ-ರೂಪಕ ತಾಳದಲ್ಲಿದೆ. ಮತ್ತೆ ಕೆಲವು ಸಂಗ್ರಹಗಳಲ್ಲಿ ಈ ಕೀರ್ತನೆಯೇ ಇಲ್ಲ. ಕೆಲವು ಸಂಗ್ರಹಗಳಲ್ಲಿ ರಾಗ-ತಾಳಗಳನ್ನು ಸೂಚಿಸಿಯೇ ಇಲ್ಲ,

ಸಂಗ್ರಾಹಕಿ ಹಾಡುವ ದೃಷ್ಟಿಯಿಂದ ಮೊದಲಚರಣ ಕೊನೆಯಚರಣ ಕೊಟ್ಟು ಉಳಿದ ಚರಣಗಳನ್ನು ಬಿಟ್ಟಿರುವ ಕಡೆ ಇತರಸಂಗ್ರಹಗಳಿಂದ ಬಿಟ್ಟಚರಣಗಳನ್ನು ಸೇರಿಸಲಾಗಿದೆ. ಕೀರ್ತನೆ ಅಪೂರ್ಣವಾಗಿರಬಾರದು, ಅಧ್ಯಯನ ಮಾಡುವವರಿಗೆ ಇಷ್ಟೇ ಚರಣಗಳಿವೆ ಎಂಬ ತಪ್ಪುಭಾವನೆ ಬರಬಾರದು ಅಷ್ಟೇಅಲ್ಲದೆ ದಾಸಸಾಹಿತ್ಯದ ಕೀರ್ತನೆಗಳ ಪ್ರಮುಖ ಲಕ್ಷಣಗಳೆಂದರೆ ಸಾಮಾನ್ಯವಾಗಿ ಆದಿಪ್ರಾಸ ತಪ್ಪುವುದಿಲ್ಲ ಚರಣಗಳಸಂಖ್ಯೆ ಬೆಸಸಂಖ್ಯೆಯಲ್ಲಿರುತ್ತದೆ; ಕೊನೆಯಲ್ಲಿ ಅಂಕಿತವಿರುತ್ತದೆ, ಒಮ್ಮೊಮ್ಮೆ ಅಂಕಿತಪಲ್ಲಟವಾಗಿರುವುದುಂಟು: ಉದಾಹರಣೆಗೆ, ಕನಕದಾಸರ ಮತ್ತು ಪುರಂದರದಾಸರ ಕೀರ್ತನೆಗಳಲ್ಲಿ ಅಂಕಿತಪಲ್ಲಟದ ನಿದರ್ಶನಗಳನ್ನು ಕಾಣಬಹುದು, ಈ ಅಂಶಗಳನ್ನೆಲ್ಲಾ ಈ ಗ್ರಂಥದಲ್ಲಿ ಗಮನಿಸಿದೆ.

ಇನ್ನು ಕೀರ್ತನೆಗಳಲ್ಲಿ ವಿವಿಧ ಸಂಗ್ರಹಗಳಲ್ಲಿ ಚರಣಗಳ ಅನುಕ್ರಮಣಿಕೆ ಬದಲಾಗಿದೆ ಒಂದು ಸಂಗ್ರಹದಲ್ಲಿ 1ನೇ ಚರಣ ಇನ್ನೊಂದರಲ್ಲಿ 3ನೇದು ಮತ್ತೊಂದರಲ್ಲಿ 2ನೇದು ಹೀಗೆ ವ್ಯತ್ಯಾಸ ಹೊಂದಿರುತ್ತದೆ. ಇಲ್ಲಿ ಈ ಸಂಗ್ರಹದಲ್ಲಿರುವಂತೆ ಇರಿಸಿದೆ. ಉದಾಹರಣೆಗೆ; ಹರಿಯನು ನೆನೆಯದ ನರಜನ್ಮವೇಕೆ ಕೀರ್ತನೆಯಲ್ಲಿ ಮೊದಲಚರಣ ಈ ಸಂಗ್ರಹದಲ್ಲಿ ಮೊದಲನೇ ಚರಣವಾಗಿದೆ ನಾವಡ ದಂಪತಿಗಳ 1000 ಕೀರ್ತನೆಗಳ ಸಂಗ್ರಹದಲ್ಲಿ 2ನೇ ಚರಣವಾಗಿದೆ. ಈ ಸಂಗ್ರಹದಲ್ಲಿ 3ನೇ ಚರಣಬಿಟ್ಟಿದೆ ಅದನ್ನು ಇಲ್ಲಿ ಸೇರಿಸಿದೆ.

ಭಜನ ಪದ್ಧತಿ

ದಾಸಸಾಹಿತ್ಯವು ಇಂದಿಗೂ ಉಳಿದುಬಂದಿದೆ ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗೆ 500 ವರುಷಗಳಿಗೂ ಮಿಗಿಲಾಗಿ ಬೆಳೆದುಬಂದಿದೆ ಮಧ್ವಸಿದ್ಧಾಂತವನ್ನು ಮಧ್ವರು ಪ್ರತಿಪಾದಿಸಿದಮೇಲೆ ಅದನ್ನು ಸಂಸ್ಕೃತಭಾಷೆಯಲ್ಲಿ ವ್ಯಾಖ್ಯಾನಿಸಿ ಟೀಕಾಚಾರ್ಯರು ಬರೆದರು ಯತಿಪರಂಪರೆ ಶಾಸ್ತ್ರಾರ್ಥಗ್ರಂಥದ ಹೊಳೆಯನ್ನೇ ಹರಿಸಿತು ವ್ಯಾಸಕೂಟ ರೂಪಗೋಂಡಿತು.

ಅದನ್ನು ಜನಸಾಮಾನ್ಯರಿಗೆ ಮುಟ್ಟಿಸಲು ದಾಸಕೂಟ ಪ್ರಾರಂಭವಾಯಿತು ಹರಿದಾಸರು ಕನ್ನಡಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿದರು; ಯತಿಗಳೇ ಈ ಪರಂಪರರೆಯನ್ನು ಮೊದಲಿಗೆ ಪ್ರಾರಂಭಿಸಿದರು. ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರು ಮೊದಲಾದವರು ವ್ಯಾಸಕೂಟದವರಾಗಿ ಸಂಸ್ಕೃತಗ್ರಂಥರಚನೆ ಜೊತೆಗೆ ಕನ್ನಡಕೀರ್ತನೆಗಳನ್ನು ರಚಿಸಿ ಹಾಡಿದರು.

ಈ ಕೀರ್ತನೆಗಳು ಜನಸಾಮಾನ್ಯರಿಗೆ ಮುಟ್ಟುವಬಗೆ ಹೇಗೆ? ಅವರ ಶಿಷ್ಯರು ಗೃಹಸ್ಥರು ಹರಿದಾಸರಾಗಿ ಕನ್ನಡದಲ್ಲಿ ತಾವೂ ಕೀರ್ತನೆ ರಚಿಸುತ್ತಾ ತಮ್ಮಗುರುಗಳ ಕೀರ್ತನೆಗಳನ್ನು ಹಾಡುತ್ತಾ ದಾಸಸಾಹಿತ್ಯ ಪ್ರಚಾರಮಾಡಿದರು; ಮನೆಮನೆ ಬಾಗಿಲಿಗೆ ಬಂದು ಹಾಡಿದರು ಯತಿವರೇಣ್ಯರು ಮಠಗಳಲ್ಲಿ ಕುಳಿತು, ದೇಶಸಂಚಾರದಲ್ಲಿ ದೇಗುಲಗಳಲ್ಲಿ ವಾಸ್ತವ್ಯಹೂಡಿ ಪ್ರಚಾರ ಮಾಡಿದರು ಹರಿದಾಸರು ದೇಶಸಂಚಾರದ ಜೊತೆಗೆ ಮನೆಮನೆ ಬಾಗಿಲಿಗೆ ತಾವಾಗಿಬಂದು ಭಕ್ತಿಪ್ರಸಾರ ಮಾಡಿದರು ಹರಿದಾಸರು "ತಂಬೂರಿ ಮೀಟಿದರು, ಭವಾಬ್ಧಿ ದಾಟಿದರು, ಗೆಜ್ಜೆಕಟ್ಟಿದರು, ಲಜ್ಜೆಅಟ್ಟಿದರು, ಖಳರೆದೆಯಮೆಟ್ಟಿದರು, ಅರಿಷಡ್ವರ್ಗ ಕುಟ್ಟಿದರು, ವೈಕುಂಠದ ಬಾಗಿಲನು ತಟ್ಟಿದರು, ಗಾಯನ ಪಾಡಿದರು, ನರ್ತನ ಮಾಡಿದರು, ಹರಿಮೂರ್ತಿ ಕಂಡರು ಶಾಶ್ವತ ಭಜನಪದ್ಧತಿ ರೂಢಿಸಿದರು" (ಅರಳುಮಲ್ಲಿಗೆ p5.)

ದಾಸರು ಹಾಡಿದ್ದನ್ನು ಕುಣಿದಿದ್ದನ್ನು ನಲಿದಿದ್ದನ್ನು ಜನ ಕಂಡರು ಆನಂದಿಸಿದರು ತಾವೂ ಅದರಂತೆ ಭಗವಂತನನ್ನು ಆರಾಧಿಸತೊಡಗಿದರು ತತ್ಫಲವಾಗಿ ಭಜನಮಂಡಳಿಗಳು ಹುಟ್ಟಿಕೊಂಡವು, ಮನೆಮನೆಯಲ್ಲಿ ದೇವಸ್ಥಾನಗಳಲ್ಲಿ ರಥೋತ್ಸವಗಳಲ್ಲಿ ಭಜನೆಗಳು ಪ್ರಾರಂಭವಾದವು.

ಬಲ್ಲಿದದೈವ ರಂಗವಿಠಲ ಕೈವಲ್ಯಕೊಟ್ಟು ನಿಂತೈನವನೋ ಭಜಿಸೋ

(ಶ್ರೀಪಾದರಾಜರು)

1. ಕೇಳನೋ ಹರಿತಾಳನೋ ತಾಳಮೇಳಗಳಲ್ಲಿದ್ದು ಪ್್ರೇಮವಿಲ್ಲದ ಗಾನ
(ಪುರಂದರದಾಸರು)

2. ಭಕುತಿ ಮುಕುತಿದಾತ ನಮ್ಮ ಲಕುಮಿಯರಸ ವಿಜಯವಿಠಲ
ಶಕುತನೆನುತ ತಿಳಿದು ನಿತ್ಯಭಕುತಿಯಿಂದ ನೀವು ಭಜನೆಮಾಡಿರೋ
(ವಿಜಯದಾಸರು)

3. ಕಲಿಯುಗದಲಿ ಹರಿನಾಮವ ನೆನೆದರೆ ಕುಲಕೋಟಿಗಳು ಉದ್ಧರಿಸುವವೋ

4. ಸಾಕುಸಾಕು ಮನುಜಸೇವೆಯು ರಂಗಯ್ಯ
ಬೇಕುನಿನ್ನ ಪಾದ ಭಜನೆಕೊಟ್ಟು ಸಲಹೊ ರಂಗಯ್ಯ.
(ಕನಕದಾಸರು)

6

"ಭಜನೆ ಭಕ್ತಿಗೆ ತಾರಕ; ಭಕ್ತಿ ಭಜನೆಗೆಪೂರಕ ಆದ್ದರಿಂದ ಭಕ್ತಿಯಿಂದ ಭಜನೆಮಾಡಿದರೆ ಭವಭಂಧನ ನಿವಾರಕ" ಎಂದು ಸಾರಿದರು ಈ ಭಜನಾ ಪದ್ದತಿಗೆ ಹಂಪೆ ದಾಸಸಾಹಿತ್ಯದ ಮೊದಲ ಘಟ್ಟಕ್ಕೆ ಮಂತ್ರಾಲಯ ದ್ವಿತೀಯಘಟ್ಟಕ್ಕೆ ಕೇಂದ್ರವಾಯಿತು. ಕಳೆದ ಶತಮಾನದಲ್ಲಿ ಲಿಂಗಸೂಗೂರು, ರಾಯಚೂರುಗಳು ಕೇಂದ್ರವಾದವು. ಚೈತನ್ಯಪಂಥೀಯರು ಸ್ವಾಮಿಪ್ರಭುಪಾದರ ಹರೇಕೃಷ್ಣ ಪಂಥದವರು ಇಂದು ದ್ವಾದಶನಾಮಧರಿಸಿ ಶಿಖೆಬಿಟ್ಟು ಕಾವಿತೊಟ್ಟು ತಾಳ-ತಂಬೂರಿ, ಮೃದಂಗ ನುಡಿಸುತ್ತಾ ಕುಣಿದು ಪಾಡುತ್ತಾ ಭಜನಾ ಮೆರವಣಿಗೆ ಮಾಡುವುದನ್ನು ಕಾಣುತ್ತೀರಿ. ತಿರುಪತಿಯ ಮೆಟ್ಟಿಲೋತ್ಸವಗಳು ಭಜನಾಮಂಡಳಿಗಳ ಸ್ಥಾಪನೆ, ಇಂದಿಗೂ ಕೌಟುಂಬಿಕ ಭಜನಾಪದ್ಧತಿ ಜೊತೆಗೆ ಸಾರ್ವಜನಿಕ ಪ್ರದರ್ಶನ ಪದ್ಧತಿಯಾಗಿಬಿಟ್ಟಿದೆ. ಹರಿದಾಸ ಸಾಹಿತ್ಯ ಉಳಿದುಬಂದಿರುವುದು ಭಜನಾಮಂಡಳಿಗಳ ಬಾಯಲ್ಲಿ, ಹೀಗಾಗಿ ಬರೆದಿಟ್ಟ ಪುಸ್ತಕಗಳಲ್ಲಿ ಒಂದು ದಾಸಮಿಷನರಿ ಪಂಥವಾಯಿತು ಈ ಭಜನಾಪದ್ಧತಿ ಮತ್ತು ಭಜನಾಮಂಡಳಿಗಳು ಎಲ್ಲಕಾಲಕ್ಕೂ ಬೇಕಾದ ಪದ್ಧತಿ ಆಗಿದೆ. ಇಂದಿನ ಸುಗಮ ಸಂಗೀತ ಪದ್ಧತಿ ಅದರ ಇನ್ನೊಂದು ಪರಿಷ್ಕೃತ ಪದ್ಧತಿ ಎನ್ನಬಹುದು.

ಮೌಖಿಕ-ಲಿಖಿತ ಭಜನಾ ಸಾಹಿತ್ಯಕೃತಿಗಳು.

ಇಂದು ಹರಿದಾಸರ ಕೀರ್ತನಸಾಹಿತ್ಯ ಲಭ್ಯವಾಗುತ್ತಿರುವುದು ಎರಡುರೀತಿಯಲ್ಲಿ . ಸಾಂಪ್ರದಾಯಿಕ ಮಾಧ್ವಕುಟುಂಬಗಳಲ್ಲಿ ಪರಂಪರಾಗತವಾಗಿ ಭಜನಪದ್ದತಿ ಉಳಿಸಿಕೊಂಡು ಬಂದವರ ಬಾಯಲ್ಲಿ ನಲಿದಾಡುತ್ತಿರುವ ಕೀರ್ತನೆಗಳು ಲಭ್ಯವಾಗುತ್ತಿರುವುದು; ಒಂದು ರೀತಿಯಾದರೆ ಮಧುಕರಿ ವೃತ್ತಿಯಿಂದ ಹರಿದಾಸರಾಗಿ ಮನೆಮನೆಗೆ ಸಂಚರಿಸಿ ದಾಸವೃತ್ತಿಕೈಗೊಂಡು ಕೀರ್ತನಪ್ರಸಾರ ಮಾಡುತ್ತಿರುವವರಿಂದ ಇನ್ನೊಂದುರೀತಿ. ಮೂರನೆಯದಾಗಿ ಗೃಹಸ್ಥರು ಮನೆಗಳಲ್ಲಿ ವಾರವಾರ ಭಜನೆಮಾಡುವ ಪದ್ಧತಿ ಇಟ್ಟುಕೊಂಡವರು ಅನೇಕರಿದ್ದಾರೆ ಅವರು ಬರೆದಿಟ್ಟುಕೊಂಡಿರುವ ಭಜನೆ ಹಾಡುಗಳ ಪುಸ್ತಕಗಳಿಂದ ಲಭ್ಯವಾಗುತ್ತಿರುವ ಕೀರ್ತನೆಗಳು.

ಈಪ್ಪೈಕಿ ಸ್ಮರಣಶಕ್ತಿಯಿಂದ ಬಾಯಲ್ಲಿ ಹಾಡುತ್ತಿರುವವರಲ್ಲಿ ಕೀರ್ತನೆಗಳ ಸಂಖ್ಯೆ ಮತ್ತು ಹಾಡುವವರಸಂಖ್ಯೆ ಕಡಿಮೆ ಆಗುತ್ತಿದೆ ದೀಕ್ಷೆಪಡೆದು ಮಧುಕರಿವೃತ್ತಿಯಿಂದ ಹರಿದಾಸವೇಶದಲ್ಲಿ ಕೀರ್ತನಪ್ರಸಾರವನ್ನು ಮನೆಮನೆಗೆ ಪ್ರಸಾರಮಾಡುತ್ತಿರುವ ಸಂಖ್ಯೆಯು ಕ್ಷೀಣಿಸುತ್ತಿದೆ. ಆದರೆ ಪರಂಪರಾಗತವಾಗಿ ಕುಟುಂಬಗಳಲ್ಲಿ ಹಾಗೂ ಆಯಾ ಬಡಾವಣೆಗಳಲ್ಲಿ ಭಜನೆಮಂದಿರಗಳಲ್ಲಿ ಭಜನಕೂಟಗಳನ್ನು ಏರ್ಪಡಿಸಿಕೊಂಡು ಭಜನೆ ಮಾಡುತ್ತಿರುವ ಭಜನಸಂಗ್ರಹಗಳನ್ನು ಕೆಲವರು ಅಚ್ಚುಮಾಡಿದ್ದಾರೆ. ಇದರ ಫಲವಾಗಿ ಅನೇಕ

ಹರಿದಾಸರ ಅನೇಕ ಕೀರ್ತನೆಗಳು ಉಳಿದುಕೊಂಡು ಬಂದಿವೆ. ಇತ್ತೀಚೆಗೆ ತಿರುಪತಿಯ ಮೆಟ್ಟಿಲೋತ್ಸವಗಳಲ್ಲಿ ಭಾಗವಹಿಸುತ್ತಿರುವ ಭಜನ ಮಂಡಳಿಗಳಿಂದ ಮೌಖಿಕ ಪರಂಪರೆಯ ಭಜನೆಹಾಡುಗಳು ಬೆಳಕಿಗೆ ಬರುತ್ತಿವೆ. ಕೀರ್ತನೆಗಳ ನಿಜಸ್ವರೂಪ ತಿಳಿಯುವುದು, ಭಕ್ತಿಭಾವವುಕ್ಕುವುದು. ಬಾಯಲ್ಲಿ ಭಕ್ತಿಯಿಂದ ಕೀರ್ತನೆಗಳನ್ನು ಹಾಡುವುದರಿಂದ; ಹಾಡಿಗೆ ತಕ್ಕಂತೆ ಕುಣಿಯುವುದರಿಂದ; ಶ್ರದ್ಧೆಯಿಂದ ಹರಿಸೇವೆ ಮಾಡುವುದರಿಂದ; ಆರಾಧನೆಗಳಿಂದ; ಅನೇಕ ಭಜನಾ ಮಂಡಳಿಗಳ, ಭಜನಾಸಕ್ತರು ಸಂಗ್ರಹಿಸಿ ಪ್ರಕಟಿಸಿದ ಭಜನಾಸಂಗ್ರಹಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಿದೆ. ನಮ್ಮ ನಾಡಿನಲ್ಲಿ ಭಜನಾಮಂಡಳಿಗಳಲ್ಲಿ ಇರುವ ಹಾಡಿನ ಪುಸ್ತಕಗಳನ್ನು ಸಂಗ್ರಹಿಸಿದರೆ ಅಪ್ರಕಟಿತ ಕೀರ್ತನೆಗಳು ಸಾಕಷ್ಟು ಸಿಗುತ್ತವೆ. ಪ್ರಕಟಿತ ಕೀರ್ತನೆಗಳ ಶುದ್ಧರೂಪಗಳು ದೊರೆಯುತ್ತವೆ. ಈ ಕೆಲಸವನ್ನು ಕೀರ್ತನಭಕ್ತರು, ಮಠಗಳು, ಸಂಸ್ಥೆಗಳು ಮಾಡಬೇಕಾಗಿದೆ.

ಕೆಲವು ಕೀರ್ತನಸಂಗ್ರಹಗಳು

1. ಹರಿದಾಸರ 4500 ಹಾಡುಗಳು – ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ
2. ಹರಿಭಜನಾಮೃತಸಾರ – ವರದೇಂದ್ರ ಸಾಹಿತ್ಯ ಮಂಡಲಿ, ಲಿಂಗಸುಗೂರು
3. ಭಜನಕೌಸ್ತುಭ ಭಾಗ 1,2,3,4, H.S. ಶ್ರೀನಿವಾಸಮೂರ್ತಿ, ಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆ–ಬೆಂಗಳೂರು
4. ಮಾಧ್ವ ಭಜನಮಂಜರಿ – ಪ್ರಸನ್ನರಾಘವೇಂದ್ರ ಮಠ, ಮುಳಬಾಗಿಲು
5. ಮಾಧ್ವ ಭಜನಮಂಜರಿ – ಹೆಚ್.ಟಿ. ಲಕ್ಷ್ಮಣರಾವ್, ಬೆಂಗಳೂರು
6. ಸಂಪ್ರದಾಯ ಭಜನಪದ್ಧತಿ – ಗುರುಕೃಪಾ ಗ್ರಂಥಮಾಲೆ, ಮೈಸೂರು
7. ಸಾಧನದೀಪಿಕಾ – ಗುರುಸಾರ್ವಭೌಮ ರಾಘವೇಂದ್ರತೀರ್ಥಪ್ರತಿಷ್ಠಾನ ಧಾರವಾಢ
8. ಹರಿದಾಸ ಭಕ್ತಿಸಾಧನೆ – ಮಿಂಚಿನಬಳ್ಳಿ, ಧಾರವಾಢ
9. ಹರಿಭಕ್ತಿಸುಧೆ – ಆಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ
10. ಭಜನಚಂದ್ರಿಕಾ – ಮುರಗೋಡು, ಕೃಷ್ಣದಾಸ
11. ಭಜನಸೌರಭ – ಶ್ರೀಮತಿ ಗುರುರಾಜಾರಾವ್ ಕಲಮದಾನಿ–ಹರಿಹರ
12. ಲಕ್ಷ್ಮೀಭಜನಾಮೃತ – ವಿಜಯಲಕ್ಷ್ಮೀರಾಘವೇಂದ್ರಾಚಾರ್ಯ, ಬೆಂಗಳೂರು
13. ಸಂಪೂರ್ಣಚಾತುರ್ಮಾಸಹಾಡುಗಳು – ಸಂ॥ ಸ.ಚಿ. ರಾಮಚಂದ್ರ

14. ಶ್ರೀಹರಿಗುರು ಭಜನಾಮಂಜರಿ – ಹೆಚ್.ಪಿ ನಾಗರಾಜಾರಾವ್–1991 ಶ್ರೀರಾಘವೇಂದ್ರಸ್ವಾಮಿ ಮಠ, ಕಡೂರು

15. ಶ್ರೀಹರಿಭಜನಾಮೃತಕಳಶ – ಪ್ರಹ್ಲಾದಾಚಾರ್ಯ ಕೃ. ಜೋಶಿ, ಕುಷ್ಟಗಿ.

16. ಭಜನಾಮೃತಧಾರಾ – ಸಂ॥ ಭತ್ತೆಶಾಸ್ತ್ರ ಗೋವಿಂದರಾಮದಾಸ, 2011, ಮಂಗಳೂರು

17. ಹರಿದಾಸರ ಜನಪ್ರಿಯಹಾಡುಗಳು – ಸಂ॥ ಟಿ.ಎನ್. ನಾಗರತ್ನ 1996, ಡಾ॥ ಮಂದಾಕಿನಿ

18. ಸಾವಿರ ಹಾಡುಗಳು – ಎ.ವಿ. ನಾವುಡ, ಗಾಯತ್ರಿ ನಾವುಡ, 2000, ಕನ್ನಡ ವಿಶ್ವವಿದ್ಯಾಲಯ, ಹಂಪೆ

19. ಶ್ರೀಲಕ್ಷ್ಮೀಭಜನಾಮೃತ ಕೀರ್ತನೆಗಳು – ಡಾ॥ ಪ್ರಭಂಜನಾಚಾರ್ಯ, ಬೆಂಗಳೂರು

20. ಶ್ರೀವರಾಹ ಹರಿವಿಠಲ ಭಜನಾಮೃತ ಅಂಕಿತನಾಮಾವಳಿ – ವರಾಹ ಹರಿವಿಠಲದಾಸರು, ಮಂಡ್ಯ

21. ಹರೇ ಶ್ರೀನಿವಾಸ – ಪೂರ್ಣಬೋಧ ವಾದಿರಾಜಾಚಾರ್ಯ ಕಡಗದಕೈ, ಬೆಳಗಾಂ

22. ಹರಿಭಜನಾಪದ್ಧತಿ – ಭಾಗ 1,2–ಹರಿದಾಸರತ್ನಂ ಗೋಪಾಲದಾಸರು

23. ಹರಿದಾಸರು ಕಂಡ ಶ್ರೀನಿವಾಸ – ಹೊ.ರಾ. ಸತ್ಯನಾರಾಯಣ

24. ಉಡುಪಿಶ್ರೀಕೃಷ್ಣಮಂಜರೀ – ಡಾ॥ ಕೆ. ಗೋಕುಲನಾಥ್

25. ಕಲ್ಲುಸಕ್ಕರೆಕೊಳ್ಳಿರೋ – ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ

26. ಕೀರ್ತನಸಾಹಿತ್ಯ – ಹೆಚ್.ಎಸ್. ವೆಂಕಟೇಶಮೂರ್ತಿ ಮತ್ತು ಶ್ರೀಪಾದ

27. ಸಾಂದರ್ಭಿಕಗೀತವೈವಿಧ್ಯ – ಕೆ. ರಾಜಲಕ್ಷ್ಮೀಗೋಪಾಲ್

ಇತ್ಯಾದಿ

ದಿನಾಂಕ: 01–11–2012 — ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ

ಬೆಂಗಳೂರು — ನಿ॥ ಕನ್ನಡ ಪ್ರಾಧ್ಯಾಪಕ

5

ಸಂಗ್ರಾಹಕರಮಾತು

ಶ್ರೀಮತಿ ಸಾವಿತ್ರಿರಂಗನಾಥ್‌ರವರು ಮದುವೆಯಾದನಂತರ ತಮಿಳುನಾಡಿನಿಂದ ಬೆಂಗಳೂರಿಗೆ ಬಂದು ಜಯನಗರದಲ್ಲಿ ನೆಲಸಿದರು. ಅವರಿಗೆ ಹರಿಕಥೆ, ಭಜನೆ, ವೇದವೇದಾಂತಗಳಲ್ಲಿ ಬಾಲ್ಯದಿಂದಲೇ ಅತೀವವಾದ ಆಸಕ್ತಿಇತ್ತು. ಸಂಸ್ಕೃತ ಭಾಷೆಯ ಜ್ಞಾನವೂ ಚೆನ್ನಾಗಿ ಇತ್ತು. ಈ ಅಪರೂಪದ ಪ್ರೌಢಿಮೆಯನ್ನು ಗುರುತಿಸಿದ ಕೆಲವು ಮಹಿಳೆಯರು ಈ ಜ್ಞಾನದಬೆಳಕು ತಮಗೂಬೇಕೆಂದು ಆಶಿಸಿ ಸೌ॥ ಸಾವಿತ್ರಿಯವರನ್ನು ಪಾಠ ಹೇಳಿಕೊಡಬೇಕೆಂದು ಒತ್ತಾಯಿಸಿದರು ಹಾಗೆ, ಚಿಕ್ಕದಾಗಿ ಪ್ರಾರಂಭವಾದ ತರಗತಿಗಳು ಹೆಚ್ಚುಹೆಚ್ಚಾಗಿ ಮಹಿಳೆಯರನ್ನು ಆಕರ್ಷಿಸಿತು,

ಬೆಂಗಳೂರಿನ ದಕ್ಷಿಣ ವಲಯದಲ್ಲಿ ಹಲವಾರು ಕಡೆಗಳಲ್ಲಿ ತರಗತಿಗಳು ನಡೆದು, ಅವರ ಸಂಪರ್ಕಕ್ಕೆ ಬಂದ ಸಾವಿರಾರು ಮಹಿಳೆಯರ ಮನಸ್ಸಿನ ದಿಕ್ಕನ್ನೇ ಬದಲಾಯಿಸಿ ಅವರೆಲ್ಲಾ ಆಧ್ಯಾತ್ಮ ಮಾರ್ಗದಲ್ಲಿ ಮುನ್ನಡೆಯುವಂತೆ ಪ್ರಚೋದಿಸಿತು. ದೂರದ ಬಡಾವಣೆಗಳಲ್ಲಿ ಇರುತ್ತಿದ್ದ ಮಹಿಳೆಯರಿಗೆ, ತಮಗೆ ಈ ಸೌಭಾಗ್ಯವಿಲ್ಲವಲ್ಲಾ ಎನ್ನುವ ವ್ಯಥೆ ದಿನೇದಿನೇ ಹೆಚ್ಚುತ್ತಾ ಹೋಯಿತು. ಆಗ ಶ್ರೀಮತಿ ಸಾವಿತ್ರಿಯವರಲ್ಲಿ ಹಲವಾರು ವರ್ಷಗಳು ಪಾಠ ಹೇಳಿಸಿಕೊಂಡ ಕೆಲವು ಭಗಿನಿಯರು ಆ ದೂರದ ಬಡಾವಣೆಗಳಿಗೆ ತಾವೇ ಹೋಗಿ ತಾವು ಕಲಿತಿದ್ದನ್ನು ಅಲ್ಲಿಯವರಿಗೆ ಹೇಳಿಕೊಡುತ್ತಿದ್ದರು. ಈ ಕಾರ್ಯಗಳಲ್ಲಿ ಅವರಿಗೆ ಶ್ರೀಮತಿ ಸಾವಿತ್ರಿಯವರ ಕೃಪಾಶೀರ್ವಾದ ಸತತವಾಗಿ ಇರುತ್ತಿತ್ತು.

ಅವರ ಅನುಮತಿ ಪಡೆದೇ ಮೊದಲು ನಾನು ಮತ್ತು ನನ್ನ ಅಕ್ಕ ಶ್ರೀಮತಿ ಅನಸೂಯ ಅವರ ಮನೆಯಲ್ಲಿ ತರಗತಿ ಪ್ರಾರಂಭಿಸಿದೆವು. ಪುಟ್ಟ ಪುಟ್ಟ ಭಜನೆಗಳೇ ಅಲ್ಲದೆ ಲಲಿತಾ, ವಿಷ್ಣು, ಲಕ್ಷ್ಮೀ ಸಹಸ್ರನಾಮಗಳು, ಅಷ್ಟಕಗಳು, ಜಯದೇವಕವಿಯ ಅಷ್ಟಪದಿ, ಪಂಚದಶಿ, ಯದುನಾಥಗದ್ಯ ದಂಡಕಗಳು ದೇವರನಾಮಗಳು ಈರೀತಿ ನಾನಾ ಪ್ರಕಾರಗಳಲ್ಲಿ ಗುರುಗಳು ನಮಗೆ ಹೇಳಿಕೊಟ್ಟಂತೆ ನಾವೂ ಹೇಳಿಕೊಡಲು ಪ್ರಯತ್ನಿಸುತ್ತಿದ್ದೆವು. ಶ್ರೀಮತಿ ಸಾವಿತ್ರಿಯವರದು ಬತ್ತದ ಜ್ಞಾನದ ಚಿಲುಮೆ . ಆ ಚಿಲುಮೆಯಿಂದ ಮೊಗೆದಷ್ಟೂ ನಮಗೆ ತಣಿಯದ ದಾಹ. ಇಂತಹ ಗುರುಗಳ ಸಂಪರ್ಕ 40 ವರ್ಷಗಳಷ್ಟು ಹಿಂದೆಯೇ ಸಿಕ್ಕಿದುದು ನನ್ನ ಪೂರ್ವಪುಣ್ಯವೇ ಸರಿ. ಹೀಗೆ ಪ್ರಾರಂಭವಾದ ತರಗತಿಗಳಲ್ಲಿ ಕರ್ಣಾಟಕದ ಅನೇಕ ದಾಸರಕೃತಿಗಳ ಸಂಖ್ಯೆ ಬಹಳ ಕಡಿಮೆ ಇರುತಿತ್ತು, ಈ ಕೊರತೆಯನ್ನು ಸರಿತೂಗಿಸಲು ನಾನು ದೇವರ ನಾಮಗಳನ್ನು ಹೆಚ್ಚಾಗಿ ಹೇಳಿಕೊಡುವ ಅಭ್ಯಾಸ ಪ್ರಾರಂಭಿಸಿದೆ.

ಗುರುಗಳು ವರ್ಷಕೊಮ್ಮೆ ಭಜನಸಪ್ತಾಹ ಪ್ರಾರಂಭಿಸಿದರು. ಪ್ರಪ್ರಥಮವಾಗಿ ಸಪ್ತಾಹದ ಯೋಜನೆ ನಮ್ಮ ಮನೆಯಲ್ಲೇ ಕಾರ್ಯಗತವಾಯಿತು,

6

ಅವಿಚ್ಛಿನ್ನವಾಗಿ 17 ವರ್ಷಗಳ ಕಾಲ ನಮ್ಮಮನೆಯಲ್ಲಿ ನಡೆಯಿತು ಅವರದೇ ಮಾರ್ಗವನ್ನು ಅನುಸರಿಸಿ ಬೇರೆಬೇರೆ ಬಡಾವಣೆಗಳಲ್ಲಿ ವರ್ಷಕ್ಕೊಮ್ಮೆ ಈ ಸಪ್ತಾಹದ ಆಚರಣೆ ಪ್ರಾರಂಭವಾಯ್ತು. 19 ವರ್ಷಗಳಿಂದ ಬನಶಂಕರೀ 3ನೇ ಹಂತದ ಗೃಹಿಣಿಯೊಬ್ಬರ ಮನೆಯಲ್ಲಿ ತರಗತಿಗಳು ನಡೆಯುತ್ತಿದೆ ಹಾಗೆಯೇ ಸಪ್ತಾಹದ ಆಚರಣೆಯೂ ನಡೆಯುತ್ತಿದೆ. ಸಪ್ತಾಹದಲ್ಲಿ ಗುರುಗಳು ಹೇಳಿಕೊಟ್ಟ ಎಲ್ಲಾ ಪ್ರಕಾರದ ಸಂಗೀತವನ್ನು ದಿನಕ್ಕೆ 1,1/2 ಘಂಟೆಗಳ ಕಾಲ ಹಾಡಿ ಸಪ್ತಾಹದ ಮೊದಲದಿನ ಪ್ರಾರಂಭಮಾಡಿ ಅನಂತರ 7 ದಿನಗಳೂ ಇದೇರೀತಿ ನಡೆದು 8ನೇ ದಿನ ಹರಿದಾಸರ ಕೃತಿಗಳನ್ನು ಹಾಡಿ ಮಂಗಳಾಚರಣೆ ಮಾಡುತ್ತೇವೆ.

ಪ್ರಾರಂಭದಲ್ಲಿ ಶ್ರೀ ಪುರಂದರದಾಸರ ಪ್ರಸಿದ್ಧವಾದ ಕೃತಿಗಳನ್ನೇ ಹಾಡುತಿದ್ದೆವು ದಾಸಪರಂಪರೆಯಲ್ಲಿ ಇನ್ನೂ ಅನೇಕ ದಾಸರ ಕೃತಿಗಳು, ಸಾಹಿತ್ಯದಲ್ಲಿ, ತತ್ವಬೋಧನೆಯಲ್ಲಿ, ವಿಷಯನಿರೂಪಣೆಯಲ್ಲಿ ಬಹಳ ಶ್ರೇಷ್ಠವಾಗಿವೆ. ಈ ದೇವರನಾಮಗಳನ್ನು ನಾವೂ ಕಲಿತು ಎಲ್ಲರಿಗೂ ಹೇಳಿಕೊಡಬೇಕೆನ್ನಿಸಿತು. ಈ ಕೃತಿಗಳ ಸಂಪಾದನೆಗಾಗಿ ಹತ್ತಾರು ವರ್ಷ ಹುಡುಕಿದಾಗ ನಮ್ಮ ಕೈಗೆ ಸಿಕ್ಕಿದ್ದು ಒಂದು ಮುಷ್ಟಿಯಷ್ಟು ದಾಸವರೇಣ್ಯರ ಜ್ಞಾನಸಾಗರದಲ್ಲಿ ಇನ್ನೆಷ್ಟು ಕೃತಿಗಳಿವೆಯೋ ಶ್ರೀ ಹರಿಯೇ ಬಲ್ಲ.

ಈ ಅಪರೂಪದ ಮೃಷ್ಟಾನ್ನ ಭೋಜನವನ್ನು ಎಲ್ಲರೂ ಸವಿಯಲಿ ಎಂದು ಶ್ರೀ ಶಿವಶಂಕರ್ ಮತ್ತು ಭಾಸ್ಕರ ಸಹೋದರರು ಶ್ರದ್ಧೆಯಿಂದ ತುಂಬಾ ಶ್ರಮವಹಿಸಿ ನಿಮ್ಮೆಲ್ಲರಿಗೂ ಉಣಬಡಿಸಿದ್ದಾರೆ. ಈ ಸಂಗ್ರಹಸಾಹಿತ್ಯವನ್ನು ದಾಸಸಾಹಿತ್ಯದಲ್ಲಿ ಪರಿಣಿತರಾದ ಪ್ರೊ॥ ಜಿ.ಅಶ್ವತ್ಥನಾರಾಯಣರು ಶುದ್ಧರೂಪದಲ್ಲಿ ಸಿದ್ಧಪಡಿಸಿ ಸಂಪಾದಿಸಿಕೊಟ್ಟಿದ್ದಾರೆ ಅವರ ಪರಿಶ್ರಮಕ್ಕೆ ಚಿರಋಣಿಗಳಾಗಿದ್ದೇವೆ. ನೀವು ಈ ಭೋಜನವನ್ನು ಆಸ್ವಾದಿಸಿ ಶ್ರೀ ಪುರಂದರದಾಸರು ಹೇಳಿದಂತೆ **"ತೇಗೆರಡು ಬಂದಾಗ"** ನಮ್ಮ ಈ ಕಾರ್ಯಸಾರ್ಥಕವಾಯಿತೆಂದು ಭಾವಿಸಿ ನಮ್ಮ ಗುರುಗಳಿಗೆ ನಮಿಸುತ್ತೇನೆ.

ರಮಾಕೇಶವಮೂರ್ತಿ

ಪ್ರಕಾಶಕರ ವಚನ

ಪೂಜ್ಯ ತಂದೆ ಮತ್ತು ತಾಯಿಯವರಾದ ಶ್ರೀ ಹಿರಿಯಣ್ಣ ಭಟ್ಟ, ಮತ್ತು ಶ್ರೀಮತಿ ಲಕ್ಷ್ಮೀನರಸಮ್ಮನವರು, ಹಾಗೂ ನನ್ನ ಅತ್ತಿಗೆಯವರಾದ ಶ್ರೀಮತಿ ಸರಸ್ವತಿಯವರುಗಳ ಪುಣ್ಯಸ್ಮರಣಾರ್ಥವಾಗಿ ಈ ಹೊತ್ತಿಗೆಯನ್ನು ಹೊರತರಲು ನನಗೆ ಬಹಳ ಸಂತೋಷವಾಗುತ್ತಿದೆ.

ಮಾಗಡಿ ತಾಲ್ಲೂಕು ನಾರಸಂದ್ರಗ್ರಾಮದ ಶ್ರೀ ಚನ್ನಪ್ಪಯ್ಯ ಹಾಗೂ ಭಾಗೀರಥಮ್ಮನವರ ಸುಪುತ್ರಿ ಲಕ್ಷ್ಮೀನರಸಮ್ಮನವರು ಮಾಗಡಿ ತಾಲ್ಲೂಕು ದೊಡ್ಡಮುದಿಗೆರೆ ಗ್ರಾಮದ ಶ್ರೀ ತಿಮ್ಮಪ್ಪಯ್ಯ ಹಾಗೂ ಶ್ರೀಮತಿ ನಂಜಮ್ಮ ನವರ ಪುತ್ರರಾದ ಹಿರಿಯಣ್ಣ ಭಟ್ಟರನ್ನು ವರಿಸಿ ದೊಡ್ಡಮುದಿಗೆರೆಯಲ್ಲಿ ವಾಸವಾಗಿದ್ದರು. ಶ್ರೀ ಹಿರಿಯಣ್ಣ ಭಟ್ಟರು ವೇದ, ವೇದಾಂತ, ಸಂಸ್ಕೃತ, ಜ್ಯೋತಿಷ್ಯ, ಆಯುರ್ವೇದ, ವ್ಯವಸಾಯ, ಕುಶಲಕರ್ಮದಲ್ಲಿ ಪರಿಣಿತರಾಗಿದ್ದು, ಮುದಿಗೆರೆಯ ಸುತ್ತಮುತ್ತಣ ಗ್ರಾಮಗಳಲ್ಲಿ ಪೌರೋಹಿತ್ಯ ನಡೆಸುವುದು ಅವರ ಕಸುಬಾಗಿತ್ತು. ಜೊತೆಗೆ ಆಯುರ್ವೇದ ವೈದ್ಯರಾಗಿ ಸಕಲರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಶ್ರೀಮತಿ ಲಕ್ಷ್ಮೀನರಸಮ್ಮನವರಿಗೆ ದೊಡ್ಡ ಸಂಸಾರದ ಜೊತೆಗೆ ಚಿಕಿತ್ಸೆಗೆ ಬಂದವರ ಯೋಗಕ್ಷೇಮವು ಅವರ ಜವಾಬ್ದಾರಿಯಾಗಿತ್ತು. ತಾಯಿಯವರು ಸಂಪ್ರದಾಯದ ಹಾಡುಗಳನ್ನು ಚೆನ್ನಾಗಿ ಹಾಡುತ್ತಿದ್ದರು ಸದಾಕಾಲ ಸಂಪ್ರದಾಯದ ಹಾಡುಗಳಿಂದ ಮತ್ತು ತಂದೆಯವರ ವೇದ ಮತ್ತು ಇತರೆ ಸದ್ಗುಣಗಳ ವಾತಾವರಣದಲ್ಲಿ ಬೆಳೆದದ್ದು ನಮ್ಮ ಭಾಗ್ಯವೆಂದು ಭಾವಿಸುತ್ತೇವೆ.

ಈ ದಂಪತಿಗಳ ಸಂತತಿ 6 ಗಂಡುಮಕ್ಕಳು ಮತ್ತು 3 ಹೆಣ್ಣುಮಕ್ಕಳಲ್ಲಿ 8ನೇಯವನಾದ ನಾನು 6 ನೇಯವರಾದ ನನ್ನ ಅಣ್ಣ ಶಿವಶಂಕರ್ ಅವರೊಂದಿಗೆ ಮೊದಲಿನಿಂದಲೂ ಜತೆಯಲ್ಲಿರುವವರು. ತುಮಕೂರು ತಾಲ್ಲೂಕು ಹೆಬ್ಬೂರು ಗ್ರಾಮವಾಸಿಗಳಾದ ಶ್ರೀ ಸೂರ್ಯನಾರಾಯಣ ಮತ್ತು ಪುಟ್ಟನರಸಮ್ಮ ದಂಪತಿಗಳ ಪುತ್ರಿಯಾದ ಸರಸ್ವತಿ ಅವರು ಅಣ್ಣ ಶಿವಶಂಕರ್ ಅವರ ಧರ್ಮಪತ್ನಿ ಇವರು ಸಾಹಿತ್ಯ ಮತ್ತು ಸಂಗೀತದಲ್ಲಿ ಆಸಕ್ತಿಯುಳ್ಳವರಾಗಿದ್ದರು ಹಾಗೂ ಸಂಗೀತದಲ್ಲಿ ಪ್ರಾವೀಣ್ಯತೆ ಪಡೆದಿದ್ದರು.

ಅಣ್ಣ ಶಿವಶಂಕರರು ರಾಗೀಗುಡ್ಡದ ಸಂಸ್ಥಾಪಕ ಧರ್ಮದರ್ಶಿ ಹಾಗೂ ಕಾರ್ಯದರ್ಶಿಯಾಗಿ ಮತ್ತು ಇನ್ನೂ ಅನೇಕ ಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಾ ಇದ್ದಾರೆ. ಅವರೊಡನೆ ರಾಗೀಗುಡ್ಡ, ಬನಗಿರಿ, ಹೆಬ್ಬೂರು ಕೋದಂಡಾಶ್ರಮ ಸಂಸ್ಥೆಗಳಲ್ಲಿ ಸೇವಾವ್ರತಿಯಾಗಿ ಸೇವೆಸಲ್ಲಿಸಲು ನನಗೆ ಅವಕಾಶ ದೊರಕಿತು. ಈ ಎಲ್ಲಾಸಂಸ್ಥೆಗಳಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳುವ ಭಾಗ್ಯ ದೊರೆಯಿತು.

ಶ್ರೀಮತಿ ರಮಾಕೇಶವಮೂರ್ತಿ ಅವರು ಸಂಗ್ರಹಿಸಿದ ಕೀರ್ತನೆಗಳ ಹಸ್ತಪ್ರತಿಯನ್ನು ನನಗೆ ಕೊಟ್ಟು ಇದನ್ನು ಪುಸ್ತಕರೂಪದಲ್ಲಿ ಮಾಡಿಕೊಡೆಂದರು ಆಗ 2 ಪ್ರತಿಗಳನ್ನು ಮಾಡಿ ಅವರಿಗೆ ಮತ್ತು ನನ್ನ ಶ್ರೀಮತಿ ಹೇಮಾವತಿಗೆ ಒಂದೊಂದು ಪ್ರತಿಯನ್ನು ಕೊಟ್ಟೆ. ಈ ಪುಸ್ತಕವು ಇನ್ನೂ ಹೆಚ್ಚಿನ ಮಹಿಳೆಯರಿಗೆ ತಲುಪಬೇಕೆಂದು ನಮ್ಮ ಅಣ್ಣ ಶಿವಶಂಕರ್ ಮತ್ತು ಅನ್ಯರಲ್ಲಿ ಪ್ರಸ್ತಾಪಿಸಿದಾಗ ಈ ಯೋಜನೆಗೆ ಎಲ್ಲರೂ ಪ್ರೋತ್ಸಾಹಿಸಿದರು.

ಪ್ರೊ॥ ಜಿ.ಅಶ್ವತ್ಥನಾರಾಯಣರವರಲ್ಲಿ ಈ ಹೊತ್ತಿಗೆಯನ್ನು ಸಂಪಾದಿಸಿ ಮಾರ್ಗದರ್ಶನ ಮಾಡಲು ಕೇಳಿಕೊಂಡಾಗ ಅವರು ಒಪ್ಪಿಕೊಂಡು ಸಂಪಾದಿಸಿಕೊಟ್ಟಿದ್ದಲ್ಲದೇ ಈ ಹೊತ್ತಿಗೆಯು ವಿಶೇಷರೀತಿಯಲ್ಲಿ ಹೊರಬರಲು ಮಾರ್ಗದರ್ಶನ ಮಾಡಿದ್ದಾರೆ ಅವರಿಗೆ ನನ್ನ ಕೃತಜ್ಞತೆಗಳು.

ಶ್ರೀಮತಿ ಸಾವಿತ್ರಿರಂಗನಾಥ್ ಅವರಲ್ಲಿ ಪುಸ್ತಕವನ್ನು ಇದೇ ಡಿಸೆಂಬರ್‌ನಲ್ಲಿ ನಡೆಯುವ ನಾರಾಯಣೀಯಮ್ ಸಪ್ತಾಹದಲ್ಲಿ ಮಹಿಳೆಯರಿಗೆ ವಿತರಿಸಬೇಕೆಂದು ಕೇಳಿಕೊಂಡಾಗ ಅವರು ಸಂತೋಷದಿಂದ ಒಪ್ಪಿಕೊಂಡರು ಅವರಿಗೆ ನನ್ನ ಕೃತಜ್ಞತೆಗಳು.

ಈ ಹೊತ್ತಿಗೆಯನ್ನು ಅಂದವಾಗಿ ಸರಿಯಾದ ಸಮಯಕ್ಕೆ ಮುದ್ರಿಸಿ ಕೊಟ್ಟ ಶ್ರೀ ಸಂಜಯ್ ಜೋಶಿ, ಅವರಿಗೆ ನನ್ನ ಕೃತಜ್ಞತೆಗಳು.

ಹಿ. ಭಾಸ್ಕರ



ಶ್ರೀ ರಂಗನಾಥ ಸ್ವಾಮಿ (ದೊಡ್ಡಮುದಿಗೆರೆ) ಮಾಗಡಿ



ಶ್ರೀ ಪ್ರಸನ್ನ ಆಂಜನೇಯಸ್ವಾಮಿ (ರಾಗೀಗುಡ್ಡ) ಬೆಂಗಳೂರು




ಶ್ರೀ ಕಾಮಾಕ್ಷೀಶಾರದಾಂಬ (ಹೆಬ್ಬೂರು) ತುಮಕೂರು

ಪುಣ್ಯಸ್ಮರಣೆ



ದಿ॥ ಲಕ್ಷ್ಮೀನರಸಮ್ಮ ಅವರು
(ಜ:1907 ಮ:2000)



ದಿ॥ ಹಿರಿಯಣ್ಣ ಭಟ್ಟರು
(ಜ:1897 ಮ:1957)



ದಿ॥ ಸರಸ್ವತಿ ಶಿವಶಂಕರ್ ಅವರು
(ಜ:1939 ಮ:1989)

ವಂಶೋದ್ಧಾರಕರಾಗಿ ಸಾರ್ಥಕಬಾಳಿನಿಂದ ಆದರ್ಶಪ್ರೇರಿತರಾಗಿ ಜೀವನಸ್ಫೂರ್ತಿ ಆಗಿರುವ ಪೂಜ್ಯ ತಂದೆ-ತಾಯಿ-ಅತ್ತಿಗೆ ಅವರ ಪುಣ್ಯಸ್ಮರಣಾರ್ಥ ಈ ಗ್ರಂಥವನ್ನು ಪ್ರಕಟಿಸಿದ್ದೇವೆ.

ಶಿವಶಂಕರ್-ಭಾಸ್ಕರ್ ಕುಟುಂಬದವರು

ದಾಸಗಾನಸೌರಭ

(ವಿವಿಧ ಹರಿದಾಸರ ಕೀರ್ತನೆಗಳು)

ದಾಸಗಾನಸೌರಭ

ಕೀರ್ತನಸೂಚಿ

ಕ್ರ ಸಂ	ಮೊದಲಸಾಲು	ಪುಟ ಸಂಖ್ಯೆ

ಕ್ರ ಸಂ	ಮೊದಲಸಾಲು	ಪುಟ ಸಂಖ್ಯೆ

5. ಶ್ರೀ ಕನಕದಾಸರ ಕೀರ್ತನೆಗಳು

6. ಕಾಖಂಡಕಿ ಕೃಷ್ಣರಾಯರ ಕೀರ್ತನೆಗಳು

7. ಪ್ರಸನ್ವೆಂಕಟದಾಸರ ಕೀರ್ತನೆಗಳು

8. ಶ್ರೀ ವಿಜಯ ವಿಠಲರ ಕೀರ್ತನೆಗಳು

9. ಬಾಗಣ್ಣನವರ ಕೀರ್ತನೆಗಳು

10. ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು

ಕ್ರ ಸಂ	ಮೊದಲಸಾಲು	ಪುಟ ಸಂಖ್ಯೆ

30. ತ್ಯಾಗರಾಜರ ರಚನೆಗಳು

****

ಧ್ಯಾನ ಶ್ಲೋಕ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥

ಗುರುಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಃಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

ಭಗವನ್ನಾಮಸಾಮ್ರಾಜ್ಯಲಕ್ಷ್ಮೀಃ ಸರ್ವಸ್ವವಿಗ್ರಹಮ್ ।
ಶ್ರೀಮದ್ ಬೋಧೇಂದ್ರ ಯೋಗೀಂದ್ರ ದೇಶಿಕೇಂದ್ರಮುಪಾಸ್ಮಹೇ ॥

ಅವತೀರ್ಣಶ್ಚ ಕಾಲಟ್ಯಾಂ ಕೇದಾರೇ ಅಂತರ್ಹಿತಶ್ಚಯಃ ।
ಚತುಷ್ಪೀಠಪ್ರತಿಷ್ಠಾತಾ ಜಯತಾತ್ ಶಂಕರೋ ಗುರುಃ ॥

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯಚ
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ರಾಮಾನುಜದಯಾಪಾತ್ರಂ, ಜ್ಞಾನವೈರಾಗ್ಯಭೂಷಣಮ್ ।
ಶ್ರೀಮದ್ ವೇಂಕಟನಾಥಾರ್ಯಂ ವಂದೇ ವೇದಾಂತದೇಶಿಕಮ್ ॥
ಲಕ್ಷ್ಮೀನಾಥಸಮಾರಂಭ್ಯಾಂ ನಾಥಯಾಮುನಮಧ್ಯಮಾಮ್ ।
ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಮ್ ॥

ಗುರುರೇವ ಗತಿಃ ಗುರುಮೇವ ಭಜೇ । ಗುರುಣೈವ ಸಹಾಸ್ಮಿ ।
ನಮೋ ಗುರವೇ ನ ಗುರೋ ಪರಮಂ ।
ಶಿಶುರಸ್ಮಿ ಗುರೋ ಮತಿರಸ್ತಿ ಗುರೋ ಮಮ ಪಾಹಿ ಗುರೋ ।

****

ಪಿಳ್ಳಾರಿ ಗೀತೆಗಳು

ರಾಗ: ಮಲಹರಿ **ತಾಳ: ರೂಪಕ**

ಲಂಬೋದರ ಲಕುಮಿಕರ । ಅಂಬಾಸುತ ಅಮರವಿನುತ
ಶ್ರೀಗಣನಾಥ ಸಿಂಧೂರ ವರ್ಣ । ಕರುಣಸಾಗರ ಕರಿವದನ
ಸಿದ್ಧ ಚಾರಣಗಣಸೇವಿತ ಸಿದ್ಧಿವಿನಾಯಕ ತೇ ನಮೋ ನಮೋ ।
ಸಕಲವಿದ್ಯಾ ಆದಿಪೂಜಿತ ಸರ್ವೋತ್ತಮ ತೇ ನಮೋ ನಮೋ ॥

ತಾಳ: ರೂಪಕ

ಕುಂದಗೌರಗೌರೀವರ । ಮಂದಿರಾಯ ಮಾನಮಕುಟ ।
ಮಂದಾರ ಕುಸುಮಾಕರ । ಮಕರಂದಂ ವಾಸಿತುರೇ ।
ಚಂದಮಾಮ ಮಂದಾಕಿನಿ ಮಂದಿರಾಯ ಮಾನಮಕುಟ ।
ಮಂದಾರ ಕುಸುಮಾಕರ ಮಕರಂದಂ ವಾಸಿತುರೇ ।
ಹೇಮಕೂಟ ಸಿಂಹಾಸನ । ವಿರೂಪಾಕ್ಷ ಕರುಣಾಕರ ॥
ಮಂದಾರ ಕುಸುಮಾಕರ ಮಕರಂದಂ ವಾಸಿತುರೇ ।

ರಾಗ: ಮಲಹರಿ **ತಾಳ: ತ್ರಿಶ್ರ ತ್ರಿಪುಟ**

ಕೆರೆಯ ನೀರನು ಕೆರೆಗೆ ಚೆಲ್ಲಿ ।
ವರವ ಪಡೆದವರಂತೆ ಕಾಣಿರೋ
ಹರಿಯ ಕರುಣದೊಳಾದ ಭಾಗ್ಯವ ।
ಹರಿಸಮರ್ಪಣೆ ಮಾಡಿಬದುಕಿರೋ ।

ಶ್ರೀ ಪುರಂದರವಿಠಲರಾಯನ
ಚರಣಕಮಲವ ನಂಬಿ ಬದುಕಿರೋ ।
ಹರಿಯ ಕರುಣದೊಳಾದ ಭಾಗ್ಯವ ।
ಹರಿಸಮರ್ಪಣೆ ಮಾಡಿ ಬದುಕಿರೋ ॥

ರಾಗ: ಮಲಹರಿ **ತಾಳ: ತ್ರಿಪುಟ**

ಪದುಮನಾಭ ಪರಮ ಪುರುಷ । ಪರಂಜ್ಯೋತಿ ಸ್ವರೂಪ ।
ವಿದುರವಂದ್ಯ ವಿಮಲಚರಿತ । ವಿಹಂಗಾದಿರೋಹಣ
ಉದಧಿನಿವಾಸ ಉರಗಶಯನ । ಉನ್ನತೋನ್ನತಮಹಿಮ ।
ಯದುಕುಲೋತ್ತಮ ಯಜ್ಞರಕ್ಷಕ ಅಜ್ಞಶಿಕ್ಷಕ ರಾಮನಾಮ ॥

ವಿಭೀಷಣಪಾಲಕ ನಮೋ ನಮೋ
ವಿಭೌ ವರದಾಯಕ ನಮೋ ನಮೋ
ಶುಭಪ್ರದ ಸುಮನೋರಥಾಯ ಸುರೇಂದ್ರ ಮನೋರಂಜನಾ ।
ಅಭಿನವ ಪುರಂದರವಿಠಲ ಬಲ್ಲರೆ ರಾಮನಾಮ॥

****

1. ಶ್ರೀಪಾದರಾಯರ ಕೀರ್ತನೆಗಳು

(ಅಂಕಿತ: ರಂಗವಿಠಲ. ಕಾಲ: 1404–1502)

1. ಪೋಪು ಹೋಗೋಣು ಬಾರೋ ರಂಗ

ರಾಗ: ಶುದ್ಧ ಸಾವೇರಿ **ತಾಳ: ಆದಿ**

ಪೋಪು ಹೋಗೋಣು ಬಾರೋ ರಂಗ ।
ಪೋಪು ಹೋಗೋಣ ಬಾರೋ ಕೃಷ್ಣ ॥ ಪ ॥

ಜಾಹ್ನವಿಯ ತೀರವಂತೆ ಜನಕರಾಯನ ಕುವರಿಯಂತೆ ।
ಜಾನಕಿಯ ವಿವಾಹವಂತೆ ಜಾಣ ನೀನು ಬರಬೇಕಂತೆ ॥ 1 ॥

ಕುಂಡಲಿಯ ನಗರವಂತೆ ಭೀಷ್ಮಕರಾಜನ ಕುವರಿಯಂತೆ ।
ಶಿಶುಪಾಲನ ಒಲ್ಲಳಂತೆ ನಿನಗೆ ಓಲೆ ಬರೆದಳಂತೆ ॥ 2 ॥

ಪಾಂಡವರು ಕೌರವರಿಗೆ ಲೆತ್ತವಾಡಿ ಸೋತರಂತೆ ।
ರಾಜ್ಯವನ್ನು ಬಿಡಬೇಕಂತೆ **ರಂಗವಿಠಲ** ಬರಬೇಕಂತೆ ॥ 3 ॥

****

2. ನಂದನಂದನ ಪಾಹಿ ಗುಣವೃಂದ

ರಾಗ: ಖರಹರ ಪ್ರಿಯ **ತಾಳ: ಆದಿ**

ನಂದನಂದನ ಪಾಹಿ ಗುಣವೃಂದ ।
ಸುಂದರರೂಪ ಗೋವಿಂದ ಮುಕುಂದ ॥ ಪ ॥

ಪವನಜ ಪರಿವಾರ ಭುವನ ಉದ್ಧಾರ ।
ನವರತ್ನಹಾರ ನವನೀತ ಚೋರ ॥ 1 ॥

ದಿನಕರ ಭೂಮಿಪಾಲ ಕನಕಾಂಕಿತಚೇಲ ।
ಜನಕಾನುಕೂಲ ಜನಕಜಾಲೋಲ ॥ 2 ॥

ತುಂಗವಿಹಂಗ ತುರಂಗ ದಯಾಪಾಂಗ ।
ರಂಗವಿಠಲ ಭವಭಂಗ ಕೃಪಾಂಗ ॥ 3 ॥

****

3. ಒಲಿದೆ ಯಾತಕಮ್ಮ ಲಕುಮಿ

ರಾಗ: ವಸಂತ **ತಾಳ: ಆದಿ**

ಒಲಿದೆ ಯಾತಕಮ್ಮ ಲಕುಮಿ ವಾಸುದೇವಗೆ ॥ ಪ ॥
ಶುದ್ಧ ನೀಲವರ್ಣದ ಮೈಯ ಕಪ್ಪಿನವನಿಗೆ ಹ್ಯಾಗೆ ॥ ಅ.ಪ ॥

ಹುಟ್ಟಿದ ಮನೆಗಳ ಬಿಟ್ಟು ಕಳ್ಳ ।
ದಿಟ್ಟತನದಿ ಗೋಕುಲದಲಿ ಬೆಳೆದ ॥
ಚಟ್ಟಿಸಹಿತ ಹಾಲಕುಡಿದ ಅಲ್ಲಿ ।
ದಿಟ್ಟ ಕಾಳಿಂಗನ ಹೆಡೆಯ ತುಳಿದವಗೆ ॥ 1 ॥

ಗೊಲ್ಲರ ಮನೆಗಳ ಪೊಕ್ಕು ಅಲ್ಲಿ ।
ಗುಲ್ಲು ಮಾಡದೆ ಮೊಸರೆಲ್ಲ ಸವಿದ ॥
ಮೆಲ್ಲನೆ ಸವಿಮಾತನಾಡಿ ಅಲ್ಲಿ ।
ಎಲ್ಲಿ ಸಖಿಯರ ಅಭಿಮಾನಗೇಡಿಗೆ ॥ 2 ॥

ಮಾವನ ಮರ್ದಿಸಿದವಗೆ ಅಲ್ಲಿ ।
ಸೋಳಸಾಸಿರ ಮದುವೆ ಆದವಗೆ ॥
ಹಾವಿನ ಮ್ಯಾಲೊರಗಿದವಗೆ ।
ಕಾವೇರಿತೀರದ ರಂಗವಿಠಲಗೆ ॥ 3 ॥

****

4. ದತ್ತಾತ್ರಯಗುರು ತ್ರಿಮೂರ್ತಿರೂಪ

ರಾಗ: ಸಿಂಧುಭೈರವಿ **ತಾಳ: ಆದಿ**

ದತ್ತಾತ್ರಯಗುರು ತ್ರಿಮೂರ್ತಿರೂಪ ।
ನಿತ್ಯಾನಂದಸ್ವರೂಪ ಜಯಜಯ ॥ ಪ ॥

ಅತ್ರಿನಂದನ ಅಗಣಿತಮಹಿಮ ।
ಸತ್ಯಸ್ವರೂಪ ನಿತ್ಯಪ್ರಕಾಶಕ ॥ ಅ.ಪ ॥

ಭಸ್ಮಭೂಷಿತ ಭಾಸ್ಕರತೇಜಾ ।
ನಿಷ್ಕಳಂಕ ನಿರಾಮಯನೇ ॥
ವಿಶ್ವಾದ್ಯಂತರ ವಿಶ್ವರೂಪಮಯ ।
ನಿಶ್ಚಲಯೋಗಾರೂಢ ॥ 1 ॥

ಭಕ್ತಪ್ರಿಯಕರ ಭವಭಯನಾಶ ।
ಮುಕ್ತಿಪ್ರದಾತನೆ ಶಕ್ತಿಸ್ವರೂಪ ॥
ವ್ಯಕ್ತರೂಪ ತ್ರಿಗುಣಾತೀತ ।
ಶಕ್ತಿತ್ರಿಶೂಲ ಕಮಂಡಲಧಾರಿ ॥ 2 ॥

ಬದ್ರಿಕಾಶ್ರಮದಿ ಶುದ್ಧಾಸನದೊಳು ।
ಮುದ್ರೆಯ ಧರಿಸುತ ನೀನಿರುವೆ ॥
ಬದ್ಧ ಮುಮುಕ್ಷುಗಳನುದ್ಧರಿಸಲು ನೀ ।
ಸಿದ್ಧವಾದ **ಗುರುರಂಗವಿಠಲನೆ** ॥ 3 ॥

****

5. ಚಿತ್ತಜನೈಯ್ಯನ ಚಿಂತಿಸು ಮನವೆ

ರಾಗ: ಚಾರುಕೇಶಿ **ತಾಳ: ಆದಿ**

ಚಿತ್ತಜನೈಯ್ಯನ ಚಿಂತಿಸು ಮನವೆ ।
ಹೊತ್ತು ಕಳೆಯದೆ ಸರ್ವೋತ್ತಮನನು ನೆನೆಮನವೆ ॥ ಪ ॥

ಕಾಲನದೂತರು ನೂಲುಹಗ್ಗವ ತಂದು ।
ಕಾಲುಕೈಗಳಕಟ್ಟಿ ಮ್ಯಾಲೆಕಟ್ಟಿ ॥
ಕಾಲಪಾಶದೊಳಿಟ್ಟು ಶೂಲದಿಂದಿರಿವಾಗ ।
ಪಾಲಿಸುವರುಂಟೆ ಜಾಲವಮಾಡದೆ ॥ 1 ॥

ದಂಡಧರನ ಭಟರು ಚಂಡಕೋಪದಿ ಬಂದು ।
ಕೆಂಡದನದಿಯ ತಡೆಗೆ ಕೊಂಡ್ಯೊಯ್ದು ॥
ಖಂಡಖಂಡವ ಕಿತ್ತು ಕೆಂಡದೊಳಿಡುವಾಗ ।
ಹೆಂಡಿರುಮಕ್ಕಳು ಬಂದು ಬಿಡಿಸಬಲ್ಲರೆ ಮರುಳೆ ॥ 2 ॥

ಅಂಗಳಿಗೆ ದಬ್ಬಣಂಗಳ ಸೇರಿಸಿ ಎರಡು ।
ಕಂಗಳಿಗೆ ಸೀಸವ ಕಾಸಿ ಪೊಯ್ಯಲು ॥
ತಂಗಿ ಅಕ್ಕ ಬಂಧುಬಳಗ ಭಂಗವ ಬಿಡಿಸುವರೆ ।
ಅಂಗವು ಸ್ಥಿರವಲ್ಲ **ರಂಗವಿಠಲ** ಬಲ್ಲ ॥ 3 ॥

6. ದೃಷ್ಟಿ ತಾಕಿತೋ ರಂಗ

ರಾಗ: ತಿಲಂಗ್ **ತಾಳ: ಆದಿ**

ದೃಷ್ಟಿ ತಾಕಿತೋ ರಂಗ ದೃಷ್ಟಿ ತಾಕಿತೋ ॥ ಪ ॥

ದೃಷ್ಟಿ ತಾಕಿತೋ ಬೀದಿಮೆಟ್ಟಬೇಡವೋ ।
ಸೃಷ್ಟಿಯ ನಾರಿಯರೆಲ್ಲಾ ಕಣ್ಣಿಟ್ಟು ಹೀರುವರೋ ॥ 1 ॥

ಪುಟ್ಟಪಾದ ಕಮಲದಿಂಮೆಟ್ಟಿ ರತುನಪಾದುಕಂ ।
ಇಟ್ಟಕಿರುಗೆಜ್ಜೆಯಿಂ ಕಿತ್ತಡಿಯಿಡುವಾಗ ನಿನಗೆ ॥ 2 ॥

ಕೊರಳ ಕೌಸ್ತುಭಕಾಂತಿ ಉರದಲ್ಲಿ ವೈಜಯಂತಿ ।
ಪರಿಮಳಗಂಧವ ಪೂಸಿ ಸಿರಿಯೊಡನಿರುವಾಗ ॥ 3 ॥

ಥಳಥಳಿಪ ಕುಂಡಲವೊ ಹೊಳೆವ ನಾಸಿಕ ಲಲಾಟ ।
ಚೆಲುವ ಕಸ್ತೂರಿತಿಲಕ ಒಪ್ಪುವ ಮುಖದಾ ನಿನಗೆ ॥ 4 ॥

ಮಂಗಳಮೂರುತಿ ರಂಗ ಪೊಂಗೊಳಲನೂದುತ ।
ರಂಗವಿಠಲನಗಲದಿರೋ ನರಸಿಂಗನೇ ನಿನಗೆ ॥ 5 ॥

****

2. ಶ್ರೀ ವ್ಯಾಸರಾಯರ ಕೀರ್ತನೆಗಳು

(ಅಂಕಿತ: ಸಿರಿಕೃಷ್ಣ. ಕಾಲ: 1447–1539)

7. ದಾಸರೆಂದರೆ ಪುರಂದರ ದಾಸರಯ್ಯ

ರಾಗ: ಮುಖಾರಿ ತಾಳ: ತ್ರಿಪುಟ

ದಾಸರೆಂದರೆ ಪುರಂದರದಾಸರಯ್ಯ ।
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ ॥ ಪ ॥

ಗ್ರಾಸಕಿಲ್ಲದೆ ಪೋಗಿ ಪರರಮನೆಗಳ ಪೊಕ್ಕು ।
ದಾಸನೆಂದು ತುಲಸಿಮಾಲೆಧರಿಸಿ ॥
ಬ್ಯಾಸರಿಲ್ಲದೆ ಅವರ ಕಾಡಿಬೇಡಿ ಬಳಲಿಸುತೆ ।
ಕಾಸುಗಳಿಸುವ ಪುರುಷನವ ದಾಸನೇ ॥ 1 ॥

ಡಂಬಕದಿ ಹರಿಸ್ಮರಣೆ ಮಾಡಿ ಜನರಮುಂದೆ ।
ಸಂಭ್ರಮದಿ ತಾನುಂಬೊ ಊಟಬಯಸಿ ॥
ಅಂಬುಜೋದ್ಭವ ಪಿತನ ಆಗಮಗಳರಿಯದಲೆ ।
ತಂಬೂರಿ ಮೀಟಲವ ಹರಿದಾಸನೆ ॥ 2 ॥

ನೀತಿಯೆಲ್ಲವನರಿತು ನಿಗಮವೇದ್ಯನ ನಿತ್ಯ ।
ವಾತಸುತನಲ್ಲಿಹನ ವರ್ಣಿಸುತಲಿ ॥
ಗೀತನರ್ತನದಿಂದ ಕೃಷ್ಣನ್ನ ಪೂಜಿಸುವ ।
ಪೂತಾತ್ಮ ಪುರಂದರ ದಾಸರಿವರಯ್ಯ ॥ 3 ॥

****

3. ಶ್ರೀ ವಾದಿರಾಜರ ಕೀರ್ತನೆಗಳು
(ಅಂಕಿತ: ಹಯವದನ. ಕಾಲ: 1480–1600)

8. ಬೇಗ ಬಾರೋ ಬೇಗ ಬಾರೋ ನೀಲಮೇಘವರ್ಣ

ರಾಗ: ಮಾಂಡ್ **ತಾಳ: ಆದಿ**

ಬೇಗ ಬಾರೋ ಬೇಗ ಬಾರೋ ನೀಲಮೇಘವರ್ಣ ॥ ಪ ॥
ಬೇಗ ಬಾರೋ ಬೇಗ ಬಾರೋ ವೇಲಾಪುರದಚೆನ್ನ ॥ ಅ.ಪ ॥

ಇಂದಿರೆರಮಣ ಗೋವಿಂದ ಬೇಗ ಬಾರೋ ।
ನಂದನಕಂದ ಮುಕುಂದ ಬೇಗ ಬಾರೋ ॥ 1 ॥

ಋದ್ಧ ಸಮೃದ್ಧ ಅನಿರುದ್ಧ ಬೇಗ ಬಾರೋ ।
ಹದ್ದನೇರಿದ ಪ್ರಸಿದ್ಧ ಬೇಗ ಬಾರೊ ॥ 2 ॥

ಧೀರ ಉದ್ಧಾರ ಗಂಭೀರ ಬೇಗ ಬಾರೋ ।
ಹಾರ ಅಲಂಕಾರ ರಘುವೀರ ಬೇಗ ಬಾರೋ ॥ 3 ॥

ರಂಗ ಉತ್ತುಂಗ ನರಸಿಂಗ ಬೇಗ ಬಾರೋ ।
ಗಂಗೆಯ ಪಡೆದ ಪಾಂಡುರಂಗ ಬೇಗ ಬಾರೋ ॥ 4 ॥

ಅಯ್ಯ ವಿಜಯ್ಯಾ ಸಹಾಯ ಬೇಗ ಬಾರೋ ।
ದಯಾದ್ರಿವಾಸಾ **ಹಯವದನ** ಬೇಗ ಬಾರೋ ॥ 5 ॥

9. ಧವಳಗಂಗೆಯ ಗಂಗಾಧರ

ರಾಗ: ಕೇದಾರ ಗೌಳ **ತಾಳ: ಛಾಪು**

ಧವಳಗಂಗೆಯ ಗಂಗಾಧರ ಮಹಾಲಿಂಗ ಮಾ ।
ಧವನ ತೋರಿಸಯ್ಯ ಗುರುಕುಲೋತ್ತುಂಗ ॥ ಪ ॥

ಅರ್ಚಿಸಿದವರಿಗಭೀಷ್ಟವ ಕೊಡುವ ।
ಹೆಚ್ಚಿನ ಅಘಗಳ ಬೇಗನೆ ತರಿವ ॥
ದುಶ್ಚರಿತವನೆಲ್ಲ ದೂರದಲ್ಲಿಡುವ ನಮ್ಮ ।
ಅಚ್ಯುತಗಲ್ಲದ ಅಸುರರ ಬಡಿವ ॥ 1 ॥

ಮಾರನ ಗೆದ್ದ ಮನೋಹರ ಮೂರ್ತಿ ।
ಸಾರಸಜ್ಜನರಿಗೆ ಸುರಚಕ್ರವರ್ತಿ ॥
ಧಾರುಣಿಯೊಳಗೆ ತುಂಬಿದೆ ನಿನ್ನ ಕೀರ್ತಿ ।
ಪರಿಯ ತೋರಿಸಯ್ಯ ನಿನಗೆ ಶರಣಾರ್ತಿ ॥ 2 ॥

ಚನ್ನಪ್ರಸನ್ನ ಶ್ರೀ**ಹಯವದನ**ನ್ನ ।
ಅನುದಿನ ನೆನೆವಂತೆ ಮಾಡೋ ನೀ ಎನ್ನ ।
ಅನ್ಯರನರಿಯೆನೋ ಗುರುವೆಂಬೆ ನಿನ್ನ ।
ಇನ್ನಾದರು ಹರಿಯ ತೋರೋ ಮುಕ್ಕಣ್ಣ ॥ 3 ॥

****

10. ತಾಳುವಿಕೆಗಿಂತ ಅನ್ಯ ತಪವು ಇಲ್ಲ

ರಾಗ: ಬಿಲಹರಿ **ತಾಳ: ಝಂಪೆ**

ತಾಳುವಿಕೆಗಿಂತ ಅನ್ಯ ತಪವು ಇಲ್ಲ ।
ಕೇಳಬಲ್ಲವರಿಗೆ ಹೇಳುವೆನು ಸೊಲ್ಲ ॥ ಪ ॥

ದುಷ್ಟಮನುಜನು ಪೇಳ್ವ ನಿಷ್ಠುರದನುಡಿ ತಾಳು ।
ಕಷ್ಟಬಂದರೆ ತಾಳು ಕಂಗೆಡದೆ ತಾಳು ॥
ನೆಟ್ಟ ಸಸಿಫಲ ಬರುವತನಕ ಶಾಂತಿಯ ತಾಳು ।
ಕಟ್ಟುಬುತ್ತಿಯ ಮುಂದೆ ಉಣಲುಂಟು ತಾಳು ॥ 1 ॥

ಹಳಿದು ಹಂಗಿಸುವ ಹಗೆಯ ಮಾತನು ತಾಳು ।
ಸುಳಿ ನುಡಿ, ಕುಹಕ, ಕುಮಂತ್ರವನು ತಾಳು ॥
ಅಳುಕದಲೆ ಬಿರುಸುಬಿಂಕದ ನುಡಿಯ ನೀ ತಾಳು ।
ಹಲಧರಾನುಜನನ್ನು ಹೃದಯದಲಿ ತಾಳು ॥ 2 ॥

ನಕ್ಕು ನುಡಿವರ ಮುಂದೆ ಮುಕ್ಕರಿಸದೆ ತಾಳು ।
ಅಕ್ಕಸವ ಮಾಡುವರ ಅಕ್ಕರದಿ ತಾಳು ॥
ಉಕ್ಕೋ ಹಾಲಿಗೆ ನೀರು ಇಕ್ಕಿದಂದದಿ ತಾಳು ।
ಪಕ್ಷೀಶ **ಹಯವದನ** ಶರಣೆಂದುಬಾಳು ॥ 3 ॥

****

11. ಜೋ ಜೋ ಜೋ ಜೋ ಜೋ ಜೋ ಮುಖ್ಯಪ್ರಾಣ

ರಾಗ: ರೀತಿಗೌಳ ತಾಳ: ಆದಿ

ಜೋ ಜೋ ಜೋ ಜೋ ।
ಜೋ ಜೋ ಮುಖ್ಯಪ್ರಾಣ ॥ಪ॥

ಜೋ ಜೋ ಮಲೆವರ ಗಂಟಲಗಾಣ ।
ಜೋ ಜೋ ರಾಕ್ಷಸಶಿಕ್ಷ ಕಲ್ಯಾಣ ।
ಜೋ ಜೋ ಸಕಲ ವಿದ್ಯಾಪ್ರವೀಣ ॥ ಅ.ಪ ॥

ಈ ಜಗದಲಿ ನೀ ಬಾಲಬ್ರಹ್ಮಚಾರಿ ।
ಸೋಜಿಗದಲಿ ಕಪಿ ರಾಜ್ಯವನಾಳಿ ॥
ತೇಜಮುತ್ತಿನಕವಚ ಕುಂಡಲಧಾರಿ ।
ಪೂಜಿಪರ ಪಾಲಿಪ ಸುಜನರುಪಕಾರಿ ॥ 1 ॥

ಭೂಮಿ ಭಾರವನಿಳಿಸಿದ ಭೀಮ ।
ಕಾಮಿ ಕೀಚಕನ ಕುಟ್ಟಿ ರಣಧಾಮ ॥
ಭಾಮಿನಿ ದ್ರೌಪದಿ ಕಷ್ಟನಿರ್ಧೂಮ ।
ಕಾಮಿತಾರ್ಥವನೀವ ಕಲ್ಪತರುಭೀಮ ॥ 2 ॥

ಸೌಂದರ್ಯರೂಪದ ಶ್ರೀಮದಾನಂದ ।
ತಂದೆ ಹಯವದನನ ಮೋಹದ ಕಂದ ॥
ಬಂದು ಉಡುಪಿಯಲಿ ನೆಲೆಯಾಗಿನಿಂದ ।
ವಂದಿಸುವೆ ನಿದ್ರೆಗೈ ಹರಿಧ್ಯಾನದಿಂದ ॥ 3 ॥

******

12. ವಾಣಿ ಪರಮಕಲ್ಯಾಣಿ

ರಾಗ: ರಂಜನಿ   ತಾಳ: ಆದಿ

ವಾಣಿ ಪರಮಕಲ್ಯಾಣಿ ನಮೋ ನಮೋ ಅಜನ ।
ರಾಣಿ ಪಂಕಜವಾಣಿ ॥ಪ॥

ಭಳಿರೆ ಭಳಿರೆ ಅಂಬೆ ಭಕ್ತಜನ ಸುಖದಂಬೆ ।
ಸುಳಿದಾಡು ಶುಭನಿತಂಬೆ ಅಮ್ಮಾ ನಿಮ್ಮ ॥
ಹೊಳೆಹೊಳೆವ ಮುಖಮುಕುರ ಬಿಂಬೆ ।
ಇಳೆಯೊಳಗೆ ಸರಿಕಾಣೆ ಶಾರದಾಂಬೆ ಪುತ್ಥಳಿ ಗೊಂಬೆ ॥ 1 ॥

ಶರಣು ಶರಣೆಲೆ ದೇವಿಸ್ಮರಣೆಮಾತ್ರದಿ ಕಾಯ್ವೆ ।
ಚರಣದಂದುಗೆಯ ಕೀವಿನಳನಳಿಸುವಾ ॥
ಭರಣಗಳನಿಟ್ಟು ಸುಖವೀವಿಧರೆಯೊಳಗೆ ।
ಹರಿಣಾಕ್ಷಿ ನೀ ಸಲಹೆ ವಾಗ್ದೇವಿ ॥ 2 ॥

ಜಯತು ಜಯತು ಜಗನ್ಮಾತೆ ಜಗದೊಳಗೆ ಪ್ರಖ್ಯಾತೆ ।
ದಯಮಾಡು ಧವಳಗೀತೆ ಸತತ ಶ್ರೀ ॥
ಹಯವದನಪಾದಕೆ ಪ್ರೀತೆ ಇಳೆಯೊಳಗೆ ।
ನಯದಿ ಗೆಲಿಸೆನ್ನ ಮಾತೆ ವಿಧಿಕಾಂತೆ ॥ 3 ॥

****

13. ಶರಣು ಸಕಲೋದ್ಧಾರ ಅಸುರಕುಲ ಸಂಹಾರ

ರಾಗ: ಭೌಳಿ   ತಾಳ: ಖಂಡಛಾಪು

ಶರಣು ಸಕಲೋದ್ಧಾರ ಅಸುರಕುಲ ಸಂಹಾರ ।
ಅರಸು ದಶರಥಬಾಲ ಜಾನಕೀಲೋಲ ॥ ಪ ॥

ವಾಲಿಸಂಹಾರ ವಾರಿಧಿಗೆ ನಟುಗಾರ ಏಕಪತ್ನಿ ।
ಶೀಲ ತುಲಸಿವನಮಾಲಾ ॥ ಅ.ಪ ॥

ಈ ಮುದ್ದು ಈ ಮುಖವು ಈ ತನುವಿನಕಾಂತಿ ।
ಈ ಬಿಲ್ಲು ಈ ಬಾಣ ಈ ನಿಂತಭಾವ ॥
ಈ ತಮ್ಮ ಈ ಸೀತೆ ಈ ಭಂಟರೀ ಭಾಗ್ಯ ।
ಇನ್ನಾವ ದೇವರಿಗುಂಟು ಮೂರ್ಲೋಕದೊಳಗೆ ॥ 1 ॥

ಉಟ್ಟ ಪೀತಾಂಬರವು ಉಡಿಗಂಟೆ ಒಡ್ಯಾಣ ।
ತೊಟ್ಟ ನವರತ್ನದಾಭರಣ ರಸಕರುಣ ॥
ಕೊಟ್ಟ ನಂಬಿಕೆ ತಪ್ಪ ಕರುಣದಲಿ ರಕ್ಷಿಸುವ ।
ಸೃಷ್ಟಿಯೊಳಗೆಣೆ ಕಾಣೆ ಕೌಸಲ್ಯ ರಾಮ ॥ 2 ॥

ಭಾವಿಸಲು ಅಯೋಧ್ಯ ಪಟ್ಟಣದ ಪುರವಾಸ ।
ಬೇಡಿದವರಿಗೆ ವರವ ನೀಡುವೆನೆಂದು ॥
ರೂಢಿಯೊಳಧಿಕ ಚುಂಚನಕಟ್ಟೆಯಲಿ ನೆಲೆಸಿಹ ।
ಸ್ವಾಮಿ ಶ್ರೀ **ಹಯವದನ** ಪಾಲಿಸೋ ನಿಸ್ಸೀಮ ॥ 3 ॥

****

14. ಆಂಜನೇಯ ಅಮರವಂದಿತ

ಹನುಮಂ—!

ರಾಗ: ಸಿಂಧುಭೈರವಿ **ತಾಳ: ಆದಿ**

ಆಂಜನೇಯ ಅಮರವಂದಿತ ಕಂಜನಾಭನ ದೂತನೆ॥ ಪ ॥

ಮಂಜಿನೋಲಗದಂತೆ ಶರಧಿಯ ದಾಟಿದ ಮಹಾಧೀರನೆ ॥ ಅ.ಪ ॥

ಆಂಜನೇಯನೆ ನಿನ್ನ ಗುಣಪರಾಕ್ರಮ ಪೊಗಳಲವೆ ಪ್ರಖ್ಯಾತನೆ ।
ಸಂಜೀವನವ ತಂದು ರುಜಿನದ ನಂಜುಕಳೆದ ಪ್ರಖ್ಯಾತನೆ ॥ 1 ॥

ಕಾಮನಿಗ್ರಹನೆನಿಸಿ ಸುರರಭಿಮಾನಿದೇವತೆ ಎನಿಸಿದೆ ।
ರಾಮಪಾದಕ್ಕೆರಗಿ ನಡೆದು ನಿಸ್ಸೀಮ ನೀನೆಂದೆನಿಸಿದೆ ॥ 2 ॥

ಸಿಂಧುಹಾರಿದೆ ಶೀಘ್ರದಿಂದಲೆ ಬಂದು ಸೀತೆಗೆ ನಮಿಸಿದೆ ।
ತಂದು ಮುದ್ರೆಯನಿತ್ತು ಮಾತೆಯ ಮನವ ಸಂತೋಷಪಡಿಸಿದೆ ॥ 3 ॥

ಜನಕ ತನುಜೆಯ ಮನವ ಹರುಷಿಸಿ ವನವ ಕಿತ್ತೀಡಾಡಿದೆ ।
ದನುಜರನ್ನು ಸದೆದು ಲಂಕೆಯ ಅನಲಗಾಹುತಿ ಮಾಡಿದೆ ॥ 4 ॥

ಭರದಿ ಬಂದು ರಾಮ ಪಾದಕ್ಕೆರಗಿ ಬಿನ್ನಹ ಮಾಡಿದೆ ।
ಉರಗಗಿರಿ ಹಯವದನನ ಪರಮ ಭಕ್ತನೆಂದೆನಿಸಿದೆ ॥ 5 ॥

****

15. ಹ್ಯಾಂಗೆ ಕೊಟ್ಟನು ಹೆಣ್ಣ ಸಾಗರನು

ರಾಗ: ಭೀಂಪಲಾಸ್ **ತಾಳ: ಆದಿ**

ಹ್ಯಾಂಗೆ ಕೊಟ್ಟನು ಹೆಣ್ಣ ಸಾಗರನು ಈ ವರಗೆ ।
ಶೃಂಗಾರ ಪುರುಷರು ಬಹುಮಂದಿ ಇರಲು ॥ ಪ ॥

ಗುಷ್ಟುನಾರುವ ಮೈಯ್ಯಿ ಬಿಟ್ಟಿದ್ದ ಬಿರುಗಣ್ಣು ।
ಮುಟ್ಟಿನೋಡಿದರೆ ಮೈಯ್ಯತಿಕಠಿಣವು ॥
ಸೊಟ್ಟಮೋರೆಯು ಇವಗೆ ಎಷ್ಟುದ್ದ ಹಲ್ಲುಗಳು ।
ಇಷ್ಟು ಘೋರಮುಖದಳಿಯನೆಲ್ಲಿ ದೊರಕಿದನೋ ॥ 1 ॥

ಬಡವನು ಭಿಕ್ಷುಕನು ಬಡವನಂದದಿ ಕೋಪ ।
ನೋಡಿದರೆ ತಲೆ ಜಟೆಯ ಕಟ್ಟಿಹುದು ॥
ಬೆಡಗು ನುಡಿಗಾರ ಜಾರ ಚೋರನಿಗೆ ।
ನೋಡಿ ನೋಡಿ ಹೆಣ್ಣ ಹ್ಯಾಂಗೆ ಕೊಟ್ಟನು ॥ 2 ॥

ಭಂಡನಾಗಿರುವನು ಕಂಡವರೊಡನೆ ಕಾಳಗವ ।
ಕೊಂಡು ಬಹ ಬಲು ಉದ್ದಂಡನಿವನು ॥
ಅಂಡಜವಾಹಗೆ ಯೋಗ್ಯವಾದ ಹೆಣ್ಣ ।
ಕಂಡು ಕಂಡೀ ಹಯವದನಗೆ ಕೊಟ್ಟನ್ಹ್ಯಾಗೆ ॥ 3 ॥

****

16. ಹೆಜ್ಜೆನೋಡೋಣ ಬಾರೆ

ರಾಗ: ಶುದ್ಧಧನ್ಯಾಸಿ ತಾಳ: ಆದಿ

ಹೆಜ್ಜೆನೋಡ್ಹೋಣ ಬಾರೆ ಗೋಪಾಲಕೃಷ್ಣನ ।
ಪುಟ್ಟಪುಟ್ಟ ಹೆಜ್ಜೆ ನೋಡೋಣ ಬಾರೆ ॥ ಪ ॥

ಹೆಜ್ಜೆ ನೋಡೋಣ ಬಾರೆ ಗೆಜ್ಜೆಯಕಾಲಿನ ।
ಅರ್ಜುನಸಾರಥಿ ಮೂರ್ಜಗದೊಡೆಯನ ॥ ಅ.ಪ ॥

ಸೂರ್ಯಕೋಟಿ ಪ್ರಕಾಶದಿಂದಿರುವನ ।
ಚಂದ್ರಕೋಟಿ ಶೀತಲದಿಂ ಮೆರೆವನ ॥
ಮಂದೆಯಕಾಯುತ ಮೈಯೆಲ್ಲಾ ಧೂಳೊಳು ।
ಚಂದದಿಂದಲಿ ಕೊಳಲನೂದುವ ಕೃಷ್ಣನ ॥ 1 ॥

ಮತ್ಸ್ಯನಾಗಿ ವೇದವ ತಂದವನಂತೆ ।
ಕೂರ್ಮನಾಗಿ ಮಂದರಗಿರಿಯ ಪೊತ್ತವನಂತೆ ॥
ವರಾಹ ನರಹರಿಯಾಗಿ ದುರುಳರ ಸೀಳಿದನಂತೆ ।
ಬಲಿಯ ದಾನವಬೇಡಿ ನೆಲವನಳಿದ ಪುಟ್ಟ ॥ 2 ॥

ಮಾತೃದ್ರೋಹ ಮಾಡಿದ ಪರಶುರಾಮನ ।
ಪಿತೃವಾಕ್ಯ ಸಲಿಸಿದ ಶ್ರೀರಾಮನ ॥
ಕೃಷ್ಣಾವತಾರನ ಬೌದ್ಧಸ್ವರೂಪನ ।
ಹಯವನೇರಿದ ಮುದ್ದು ಶ್ರೀಹಯವದನನಪುಟ್ಟ ॥ 3 ॥

****

4. ಶ್ರೀ ಪುರಂದರದಾಸರ ಕೀರ್ತನೆಗಳು

(ಅಂಕಿತ: ಪುರಂದರ ವಿಠಲ. ಕಾಲ:1484–1564)

17. ವಂದಿಸುವುದಾದಿಯಲಿ

ರಾಗ: ನಾಟ ತಾಳ: ಛಾಪು

ವಂದಿಸುವುದಾದಿಯಲಿ ಗಣನಾಥನಾ ।
ಸಂದೇಹಸಲ್ಲ ಶ್ರೀ ಹರಿಯಾಜ್ಞೆಯಿದಕುಂಟು ॥ ಪ ॥

ಹಿಂದೆ ರಾವಣ ತಾನು ವಂದಿಸದೆ ಗಜಮುಖನ ।
ನಿಂದು ತಪವನು ಗೈದು ವರಪಡೆಯಲು ॥
ಒಂದು ನಿಮಿಷದಿ ಬಂದು ವಿಘ್ನವನು ಆಚರಿಸೆ ।
ತಂದ ವರಗಳನೆಲ್ಲಾ ಧರೆಗೆ ಇಳಿಸಿದನು ॥ 1 ॥

ಅಂದಿನಾ ಬಗೆಯರಿತು ಬಂದು ಪೂಜಿಸಲು ಗಣನಾಥ ।
ಮುಂದೆ ಗಣಪನ ಪೂಜಿಸೆಂದುಪೇಳೆ ॥
ಒಂದೆಮನದಲಿ ಬಂದು ಪೂಜಿಸಲು ಗಣನಾಥ ।
ಹೊಂದಿಸಿದ ನಿರ್ವಿಘ್ನದಿಂದ ರಾಜ್ಯವನು ॥ 2 ॥

ಇಂದು ಜಗವೆಲ್ಲ ಉಮೆನಂದನನ ಪೂಜಿಸಲು ।
ಚಂದದಿಂದಲಿ ಸಕಲ ಸಿದ್ದಿಗಳನಿತ್ತು ॥
ತಂದೆ ಸಿರಿ **ಪುರಂದರವಿಠಲ**ನ ಸೇವೆಯೊಳು ।
ಬಂದ ವಿಘ್ನವ ಕಳೆದು ಆನಂದವನು ಕೊಡುವ ॥ 3 ॥

****

18. ಭಾರತಿದೇವಿಯ ನೆನೆನೆನೆ

ರಾಗ: ಖರಹರ ಪ್ರಿಯ ತಾಳ: ಆದಿ

ಭಾರತಿದೇವಿಯ ನೆನೆನೆನೆ ।
ನಿರುತ ಭಕುತಿಗಿದು ಮನೆ ಮನೆ ॥ ಪ ॥

ಮಾರುತನರ್ಧಾಂಗಿ ಸುಚರಿತ ಕೋಮಲಾಂಗಿ ।
ಸಾರಸಾಕ್ಷಿ ಕೃಪಾಂಗಿ ಅಪಾಂಗಿ ॥ 1 ॥

ಕಿಂಕಿಣಿಕಿಣಿಪಾದ ಪಂಕಜನೂಪುರ ।
ಕಂಕಣ ಕುಂಡಲ ಅಲಂಕೃತದೇಹೆ ॥ 2 ॥

ಶಂಕರ ಸುರವರವಂದಿತ ಚರಣೆ ।
ಕಿರಿಕಿರಿ **ಪುರಂದರವಿಠಲನ** ಕರುಣೆ ॥ 3 ॥

****

19. ಪಾಲಿಸೆಮ್ಮ ಮುದ್ದು ಶಾರದೆ

ರಾಗ: ಮುಖಾರಿ **ತಾಳ: ಆದಿ**

ಪಾಲಿಸೆಮ್ಮ ಮುದ್ದು ಶಾರದೆ ।
ಎನ್ನ ನಾಲಿಗೆಯಲಿ ನಿಲ್ಲಬಾರದೇ ॥ ಪ ॥

ಲೋಲಲೋಚನೆ ತಾಯೆ ನಿರುತ ನಂಬಿದೆ ನಿನ್ನ ॥ ಅ.ಪ ॥

ಅಕ್ಷರಕ್ಷರ ವಿವೇಕವ ನಿನ್ನ ಕುಕ್ಷಿಯೊಳೀರೇಳು ಲೋಕವಾ ।
ಸಾಕ್ಷಾತ್ ರೂಪದಿಂದ ಒಲಿದು ರಕ್ಷಿಸು ತಾಯೆ ॥ 1 ॥

ಶೃಂಗಾರಪುರನೆಲೆವಾಸಿನೀ ದೇವಿ ಸಂಗೀತಗಾನ ವಿಲಾಸಿನೀ ।
ಮಂಗಳಗಾತ್ರೆ ತಾಯೆ ಭಳಿರೆ ಬ್ರಹ್ಮನರಾಣಿ ॥ 2 ॥

ಸರ್ವಾಲಂಕಾರ ದಯಾಮೂರುತಿ ನಿಮ್ಮ ಚರಣವ ಸ್ಮರಿಸುವ ಕೀರುತಿ ।
ಗುರುಮೂರ್ತಿ **ಪುರಂದರವಿಠಲನ್ನ** ಸ್ಮರಿಸುವೆ ॥ 3 ॥

****

20. ಗುರುವಿನ ಗುಲಾಮನಾಗುವ ತನಕ

ರಾಗ: ಪಂತುವರಾಳಿ **ತಾಳ: ಆದಿ**

ಗುರುವಿನ ಗುಲಾಮನಾಗುವ ತನಕ ।
ದೊರೆಯದಣ್ಣ ಮುಕುತಿ ॥ ಪ ॥

ಪರಿಪರಿ ಶಾಸ್ತ್ರವನೋದಿದರೇನು ।
ವ್ಯರ್ಥವಾಯಿತು ಭಕುತಿ ॥ ಅ.ಪ ॥

ಆರುಶಾಸ್ತ್ರವನೋದಿದರೇನು ।
ಮೂರಾರು ಪುರಾಣ ಮುಗಿಸಿದರೇನು ॥
ಸಾಧು ಸಜ್ಜನರಸಂಗವ ಮಾಡದೆ ।
ಧೀರನಾಗಿ ತಾ ಮೆರೆದರೇನು ॥ 1 ॥

ಕೊರಳೊಳು ಮಾಲೆಯ ಧರಿಸಿದರೇನು ।
ಬೆರಳೊಳು ಜಪಮಣಿ ತಿರುವಿದರೇನು ॥
ಮರಳಿಮರಳಿ ಹೊರಳಿ ಬೂದಿಯೊಳು ।
ಮರುಳನಂದದಿ ತಿರುಗಿದರೇನು ॥ 2 ॥

ನಾರಿಯ ಭೋಗ ಅಳಿಸಿದರೇನು ।
ಶಾರೀರಿಕ ಸುಖವನು ಬಿಡಿಸಿದರೇನು ॥
ಮಾರಜನಕ ಸಿರಿ **ಪುರಂದರವಿಠಲನ** ।
ಮರೆಯದೆ ಮನದೊಳು ಬೆರೆಯುವ ತನಕ ॥ 3 ॥

****

21. ಕೃಷ್ಣಬಾರೋ ಕೃಷ್ಣಬಾರೋ

ರಾಗ: ಹಿಂದೋಳ **ತಾಳ: ಆದಿ**

ಕೃಷ್ಣಬಾರೋ ಕೃಷ್ಣಬಾರೋ ।
ಕೃಷ್ಣಬಾರೋ ಕೃಷ್ಣಯ್ಯಬಾರೋ ॥ ಪ ॥

ಪುಟ್ಟಪುಟ್ಟ ಹೆಜ್ಜೆಯಿಟ್ಟು ಗೆಜ್ಜೆನಾದಗಳಿಂದ ॥ ಅ.ಪ ॥

ಮನ್ಮಥಜನಕನೆ ಬೇಗನೆ ಬಾರೋ ।
ಕಮಲಪತಿ ನೀ ಬಾರಯ್ಯ ಹರಿಯೇ ॥
ಅಮಿತಪರಾಕ್ರಮ ಶಂಕರ ಬಾರೋ ।
ಕಮನೀಯಗಾತ್ರನೆ ಬಾರಯ್ಯ ದೊರೆಯೇ ॥ 1 ॥

ಕುರುಳುಕೇಶಗಳ ಒಲಿವ ಅಂದ ।
ಭರದ ಕಸ್ತೂರಿತಿಲಕದ ಚಂದ ॥
ಶಿರದಿ ಒಪ್ಪುವ ನವಿಲುಕಣ್ಣಳಿಂದ ।
ತರತರಾಭರಣಗಳ ಧರಿಸಿ ನೀ ಬಾರೋ ॥ 2 ॥

ಹಾಲು ಬೆಣ್ಣೆಗಳ ಕೈಯಲ್ಲಿ ಕೊಡುವೆ ।
ಮೇಲಾದ ಭಕ್ಷಗಳ ಮುಚ್ಚಿಟ್ಟು ತರುವೆ ॥
ಜಾಲಮಾಡದೆ ನೀ ಬಾರಯ್ಯ ಹರಿಯೇ ।
ಬಾಲ ಎನ್ನ ತಂದೆ ಶ್ರೀ **ಪುರಂದರವಿಠಲ** ॥ 3 ॥

****

22. ಗೋವಿಂದ ಬಾರಯ್ಯ

ರಾಗ: ಮಧ್ಯಮಾವತಿ **ತಾಳ: ಆದಿ**

ಗೋವಿಂದ ಬಾರಯ್ಯ ಗೋಪಾಲ ಬಾರಯ್ಯ ॥ ಪ ॥

ಎಂದೆಂದು ನಿನ್ನ ನಾಮವೇ ಗತಿ ಎನಗೆ ಗೋವಿಂದ ।
ಎಂದೆಂದೂ ನಿನ್ನ ಪಾದವೇ ಗತಿ ಎನಗೆ ಗೋವಿಂದ ॥ ಅ.ಪ ॥

ಹಿಂದೆ ನಾ ಬಹುಭಾರದಿಂದಲಿ ನೊಂದೆ ।
ಅದರಿಂದ ಗೆಲಿದು ಹೋಗೋಕಾಣೆ ಮುಂದೆ ॥
ತುದಿಮೊದಲಿಲ್ಲದ ಪ್ರಾಣಿ ನಾ ಬಂದೆ ।
ಪದುಮನಾಭ ರಕ್ಷಣೆ ಮಾಡೋ ತಂದೆ ॥ 1 ॥

ಹೊನ್ನು ಮಣ್ಣು ಎಂಬ ಆಸೆಗೆ ಬಿದ್ದು ।
ಪುಣ್ಯವೆಂಬುದು ನಾ ಅರಿಯದೆ ಇದ್ದೆ ॥
ಅನ್ಯಾಯವಾಯಿತು ಇದಕೇನು ಮದ್ದು ।
ನಿನ್ನಯ ಧ್ಯಾನವ ಹೃದಯದೊಳಿಟ್ಟು ॥ 2 ॥

ಹಿಂದೆ ಮಾಡಿದ ಪಾಪವಕಳೆದು ।
ಮುಂದೆನ್ನ ಜನ್ಮವ ಸಾಫಲ್ಯಗೊಳಿಸು ॥
ತಂದೆ ಶ್ರೀ **ಪುರಂದರವಿಠಲ**ನ ನೆನೆದು ।
ಎಂದೆಂದಿಗೂ ಸುಖ ಆನಂದ ಕರೆದು ॥ 3 ॥

****

23. ರಾಮ ರಾಮ ರಾಮಸೀತ

ರಾಗ: ವಸಂತ **ತಾಳ: ರೂಪಕ**

ರಾಮ ರಾಮ ರಾಮಸೀತ ರಾಮ ಎನ್ನಿರೊ ॥ಪ॥

ನೇಮದಿಂದ ಭಜಿಸುವವರ ।
ಕಾಮಿತಂಗಳ ಕೊಡುವನಾಮ ॥ ಅ.ಪ ॥

ಕಲ್ಲಿನಂತೆ ಇರುವ ಜೀವ ನಿಲ್ಲದಂತೆ ಮರಣವೇಳೆ ।
ಘುಲ್ಲನಾಭ ಕೃಷ್ಣನೆಂಬ ಸೊಲ್ಲುಬಾಯಿಗೆ ಒದಗದೊ ॥ 1 ॥

ಶೃಂಗಾರದ ದೇಹವೆಲ್ಲ ಅಂಗ ಮುರಿದು ಬೀಳುವಾಗ ।
ಕಂಗಳಿಗಾತ್ಮ ಸೇರಿದಾಗ ರಂಗನಧ್ಯಾನವು ಒದಗದಯ್ಯ ॥ 2 ॥

ಇಹದಲ್ಲಿ ಇಷ್ಟವುಂಟು ಪರದಲ್ಲಿ ಸೌಖ್ಯವುಂಟು ।
ಪುರಂದರವಿಠಲನ ಸ್ಮರಣೆ ಬಾರದೆ ಒದಗದಯ್ಯ ॥ 3 ॥

****

24. ರಾಮನಾಮ ಪಾಯಸಕ್ಕೆ

ರಾಗ: ಆನಂದಭೈರವಿ **ತಾಳ: ಆದಿ**

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ॥ ಪ ॥

ವಿಠಲನಾಮ ತುಪ್ಪವ ಬೆರೆಸಿ ಬಾಯಿಚಪ್ಪರಿಸಿರೊ ॥ ಅ.ಪ ॥

ಒಮ್ಮನ ಗೋಧಿಯ ತಂದು ವೈರಾಗ್ಯಕಲ್ಲಲಿ ಬೀಸಿ ॥
ಸುಮ್ಮನಸಜ್ಜಿಗೆ ತೆಗೆದು ಸಣ್ಣಸೇವಗೆ ಹೊಸೆದು ॥ 1 ॥

ಹೃದಯವೆಂಬೊ ಪಾತ್ರೆಯೊಳಗೆ ಭಾವವೆಂಬೊ ಎಸರಇಟ್ಟು ॥
ಬುದ್ಧಿಯಿಂದ ಪಾಕವ ಮಾಡಿ ಹರಿವಾಣದೊಳಗೆ ನೀಡಿ ॥ 2 ॥

ಆನಂದ ಆನಂದವೆಂಬೊ ತೇಗು ಬಂದಪರಿಯಲಿ ॥
ಆನಂದ ಮೂರುತಿ ನಮ್ಮ **ಪುರಂದರವಿಠಲ**ನ ನೆನೆಯಿರೊ ॥ 3 ॥

****

25. ಜಯ ಜಾನಕೀಕಾಂತ

ರಾಗ: ನಾಟ — ತಾಳ: ಖಂಡಛಾಪು

ಜಯ ಜಾನಕೀಕಾಂತ ಜಯ ಸಾಧುಜನವಿನುತ ।
ಜಯತು ಮಹಿಮಾವಂತ ಜಯ ಭಾಗ್ಯವಂತ ॥ ಪ ॥

ದಶರಥಾತ್ಮಜವೀರ ದಶಕಂಠಸಂಹಾರ ।
ಪಶುಪತೀಶ್ವರಮಿತ್ರ ಪಾವನ ಚರಿತ್ರ ॥
ಕುಸುಮಬಾಣಸ್ವರೂಪ ಕುಶಲಕೀರ್ತಿ ಕಲಾಪ ।
ಅಸಮಸಾಹಸಶಿಕ್ಷ ಅಂಬುಜದಳಾಕ್ಷ ॥ 1 ॥

ಸಾಮಗಾನವಿಲೋಲ ಸಾಧುಜನಪರಿಪಾಲ ।
ಕಾಮಿತಾರ್ಥಪ್ರದಾತ ಕೀರ್ತಿಸಂಜಾತ ॥
ಸೋಮ ಸೂರ್ಯಪ್ರಕಾಶ ಸಕಲಲೋಕಾಧೀಶ ।
ಶ್ರೀಮಹಾ ರಘುವೀರ ಸಿಂಧುಗಂಭೀರ ॥ 2 ॥

ಸಕಲಶಾಸ್ತ್ರವಿಚಾರ ಶರಣಜನಮಂದಾರ ।
ವಿಕಸಿತಾಂಬುಜವದನ ವಿಶ್ವಮಯಸದನ ॥
ಸುಕೃತ ಮೋಕ್ಷಾಧೀಶ ಸಾಕೇತಪುರವಾಸ ।
ಭಕುತವತ್ಸಲರಾಮ **ಪುರಂದರವಿಠಲ** ॥ 3 ॥

****

26. ಪಾಲಿಸೆ ಎನ್ನ ಶ್ರೀ ಮಹಾಲಕ್ಷ್ಮಿ

ರಾಗ: ಮಧ್ಯಮಾವತಿ — ತಾಳ: ಆದಿ

ಪಾಲಿಸೆ ಎನ್ನ ಶ್ರೀ ಮಹಾಲಕ್ಷ್ಮಿ ।
ಲಲಿತಾಂಗಿ ಶುಭದೇವಿ ಮಂಗಳದೇವಿ ॥ಪ॥

ವೇದಾಭಿಮಾನಿ ಸಾರಸಾಕ್ಷಿ ಶ್ರೀಧರ ರಮಣಿ ।
ಕಾದುಕೊ ನಿನ್ನಯ ಪಾದ ಸೇವಕರನು ॥
ಆದಿಶಕ್ತಿ ಸರ್ವಧಾರೆ ಗುಣಪೂರ್ಣೆ ।
ಪಾಲಿಸೆ ಎನ್ನನು ಪಾಲಾಬ್ಧಿ ಸಂಜಾತೆ ॥ 1 ॥

ದಯದಿಂದನೋಡೆ ಭಜಿಪಭಕ್ತರ ।
ಭಯದೂರಮಾಡೆ ಕರುಣಾಮಯಿ ॥
ದಯಪಾಲಿಸೆಮಾತೆ ತ್ರೈಲೋಕ್ಯವಿಖ್ಯಾತೆ ।
ಜಯದೇವಿ ಸುವ್ರತೆ ಹಯವದನನ ಪ್ರೀತೆ ॥ 2 ॥

ನೀನಲ್ಲದನ್ಯ ರಕ್ಷಿಪರನು ನಾಕಾಣೆ ।
ದಯಪಾಲಿಸೆ ಮಾತೆ ತ್ರೈಲೋಕ್ಯ ವಿಖ್ಯಾತೆ ।
ದಾನವಾಂತಕ ಸಿರಿ**ಪುರಂದರವಿಠಲ**ನ ।
ಧ್ಯಾನಿಪ ಭಕುತರಮಾನ ನಿನ್ನದುತಾಯೆ ॥ 3 ॥

****

27. ಬಂದಾಳೇ ಮಹಾಲಕ್ಷುಮಿ

ರಾಗ: ಮೋಹನ **ತಾಳ: ಆದಿ**

ಬಂದಾಳೇ ಮಹಾಲಕ್ಷುಮಿ ನಮ್ಮ ಮನೆಗೆ ।
ಸಂಜೆಯ ಹೊತ್ತಿನಲ್ಲಿ (ಸಂದೇಹವಿಲ್ಲದಂತೆ) ॥ ಪ ॥

ಇಂದಿರೆಲೋಕಮಾತೆ ಇಷ್ಟಾರ್ಥ ಕೊಡಲಿಕ್ಕೆ ।
ಅಂದವಾಗಿಹ ತನ್ನ ಅಪ್ರಮೇಯನ ಸಹಿತ ॥ ಅ.ಪ ॥

ಹೆಜ್ಜೆ ಮೇಲ್ಹೆಜ್ಜೆ ಇಕ್ಕುತಾ ।
ಗೆಜ್ಜೆಪಾದ ಘಲುಘಲು ಘಲುವೆನ್ನುತಾ ಶ್ರೀ ಮಹಾಲಕ್ಷ್ಮಿ ॥
ಮೂಜಗದೊಡೆಯನ ಮುರಹರನಾ ರಾಣಿ ।
ಸಜ್ಜನಭಕ್ತರಿಗೆ ಸಾಯುಜ್ಯ ಕೊಡುವುದಕ್ಕೆ ॥ 1 ॥

ಶ್ರಾವಣಮಾಸ ಶುಕ್ಲಪಕ್ಷದಿ ಶುಕ್ರವಾರ ।
ಪೂರ್ಣಿಮೆ ದಿನದಲ್ಲಿ ।
ಭೂಸುರರೆಲ್ಲ ಸೇರಿ ಸಾಸಿರನಾಮವ ಪಾಡಿ।
ವಾಸುದೇವನ ಸಹಿತ ವಾಸವಾಗಿರಲೆಂದು ॥ 2 ॥

ಕನಕವಾಯಿತು ಮಂದಿರ ।
ಜನನಿಯು ಬರಲು ಜಯ ಜಯ ಜಯವೆಂದೆನಲು ॥
ಸನಕಾದಿ ಮುನಿರನ್ನ ಸೇವಾನ್ವಿತಳು ।
ಕನಕವಲ್ಲಿಯು ತನ್ನ ಕಾಂತನ್ನ ಕರೆಕೊಂಡು ॥ 3 ॥

ಉಟ್ಟಾಳೆ ಪೀತಾಂಬರ ಕೈಯಲ್ಲಿ ।
ಕಟ್ಟಿದಕಂಕಣತೋರುತ್ತಾ ಶ್ರೀ ಮಹಾಲಕ್ಷ್ಮಿ ॥
ಸೃಷ್ಟಿಗೊಡೆಯ ನಮ್ಮ **ಪುರಂದರವಿಠಲನ** ।
ಪಟ್ಟದರಸಿಯು ನಮಗೆ ಇಷ್ಟಾರ್ಥಕೊಡಲಿಕ್ಕೆ ॥ 4 ॥

****

28. ಹರಿನಾರಾಯಣ ಹರಿನಾರಾಯಣ

ರಾಗ: ಜಂಜೂಟಿ **ತಾಳ: ಆದಿ**

ಹರಿನಾರಾಯಣ ಹರಿನಾರಾಯಣ ।
ಹರಿನಾರಾಯಣ ಎನು ಮನವೆ ॥ ಪ ॥

ನಾರಾಯಣವೆಂಬ ನಾಮದ ಬೀಜವ ।
ನಾರದ ಬಿತ್ತಿದ ಧರೆಯೊಳಗೆ ॥ ಅ.ಪ ॥

ತರಳಧ್ರುವನಿಂದ ಅಂಕುರಿಸಿತು ಅದು ।
ವರ ಪ್ರಹ್ಲಾದನಿಂದ ಮೊಳಕಾಯ್ತು ॥
ಧರಣೀಶ ರುಕ್ಮಾಂಗದನಿಂದ ಚಿಗುರಿತು ।
ಕುರುಪಿತಾಮಹಾನಿಂದ ಹೂವಾಯ್ತು ॥ 1 ॥

ವಿಜಯ ಸತಿಯಿಂದ ಕಾಯಾಯಿತು ಅದು ।
ಗಜರಾಜನಿಂದ ದೋರೆಹಣ್ಣಾಯ್ತು ॥
ನಿಜ ಶುಕಮುನಿಯಿಂದ ಪರಿಪಕ್ವವಾಯ್ತು ।
ಅಜಾಮಿಳ ತಾನುಂಡು ರಸಸವಿದಾ ॥ 2 ॥

ಕಾಮಿತಫಲವೀವ ನಾಮ ಒಂದಿರಲಾಗಿ ।
ಹೋಮ ನೇಮಜಪತಪವ್ಯಾಕೆ ॥
ಸ್ವಾಮಿ ಶ್ರೀ **ಪುರಂದರವಿಠಲನ** ।
ನಾಮವ ನೇಮದಿಂದಲಿ (ನೀ) ನೆನೆಮನವೆ ॥ 3 ॥

****

29. ಹರಿಯನು ನೆನೆಯದ ನರಜನ್ಮವೇಕೆ

ರಾಗ: ಮೋಹನ ತಾಳ: ಆದಿ

ಹರಿಯನು ನೆನೆಯದ ನರಜನ್ಮವೇಕೆ ।
ಹರಿಯ ಕೊಂಡಾಡದ ನಾಲಿಗೆ ಏಕೆ ॥ ಪ ॥

ವೇದವನೋದದ ವಿಪ್ರತಾನೇಕೆ ।
ಕಾದಲು ಅರಿಯದ ಕ್ಷತ್ರಿಯನೇಕೆ ॥
ಕ್ರೋಧವ ಬಿಡದ ಸನ್ಯಾಸತ್ವವೇಕೆ ।
ಆಧಾರವಿಲ್ಲದ ಅಮೃತಾನ್ನವೇಕೆ ॥ 1 ॥

ಸತ್ಯಶೌಚವಿಲ್ಲದ ಆಚಾರವೇಕೆ ।
ನಿತ್ಯನೇಮಿಲ್ಲದ ಜಪತಪವೇಕೆ ॥
ಭಕ್ತಿಯಲಿ ಮಾಡದ ಹರಿಪೂಜೆ ಏಕೆ ।
ಉತ್ತಮರಿಲ್ಲದ ಸಭೆಯು ತಾನೇಕೆ ॥ 2 ॥

ಸಾಲದಿ ಹೂಳಿದ ಸಂಸಾರವೇಕೆ ।
ಬಾಲಕರಿಲ್ಲದ ಭಾಗ್ಯವಿದ್ದೇಕೆ ॥
ವೇಳೆ ಒದಗದ ನೆಂಟರಿದ್ದೇಕೆ ಅನು ।
ಕೂಲವಿಲ್ಲದ ಸತಿಸಂಗ ತಾನೇಕೆ ॥ 3 ॥

ಮಾತಾಪಿತರನು ಪೊರೆಯದ ಮಕ್ಕಳೇಕೆ ।
ಮಾತುಕೇಳದ ಸೊಸೆಯಗೊಡವೆ ತಾನೇಕೆ ।
ನೀತಿಯನರಿಯದ ಕೂಟತಾನೇಕೆ ಅ ।
ನಾಥನಾದ ಮೇಲೆ ಕೋಪತಾನೇಕೆ ॥ 4 ॥

ಅಳಿಸಿಅಳಿದು ಹೋಗುವ ಮಕ್ಕಳದೇತಕೆ ।
ತಿಳಿದು ಬುದ್ಧಿಯನು ಪೇಳದ ಗುರುವೇಕೆ ॥
ನಳಿನನಾಭ ಶ್ರೀ **ಪುರಂದರವಿಠಲನ** ।
ಚೆಲುವ ಮೂರುತಿಯ ನೋಡದ ಕಂಗಳೇಕೆ ॥ 5 ॥

****

30. ಶಿವದರುಶನ ನಮಗಾಯಿತು

ರಾಗ: ಕಲಾವತಿ **ತಾಳ: ಆದಿ**

ಶಿವದರುಶನ ನಮಗಾಯಿತು ಕೇಳೆ ।
ಶಿವರಾತ್ರಿಯ ಜಾಗರಣೆಯಲಿ ॥ ಪ ॥

ಪಾತಾಳಗಂಗೆಯ ಸ್ನಾನವ ಮಾಡಲು ।
ಪಾತಕವೆಲ್ಲ ಪರಿಹಾರವೂ ॥
ಜ್ಯೋತಿರ್ಲಿಂಗದ ಧ್ಯಾನವಮಾಡಲು ।
ದ್ಯೂತಗಳಿಲ್ಲಾ ಅನುದಿನವೂ ॥ 1 ॥

ಬೇಡಿದ ವರಗಳ ಕೊಡುವಳು ತಾಯಿ ।
ಬ್ರಹ್ಮನರಾಣಿಯ ನೋಡುತಲಿ ॥
ಆಡುತ ಪಾಡುತ ಏರುತ ಬಸವನ ।
ಆನಂದದಲಿ ನಲಿದಾಡುವನು ॥ 2 ॥

ಹರನನು ಕಂಡೆನು **ಪುರಂದರ**ವಿಠಲನ ।
ಹರಿನಾರಾಯಣ ಧ್ಯಾನದಲಿ ॥

****

31. ಕಂಡೆ ಕರುಣಾನಿಧಿಯ

ರಾಗ: ನಾದನಾಮಕ್ರಿಯೆ **ತಾಳ: ಆದಿ**

ಕಂಡೆ ಕರುಣಾ ನಿಧಿಯ ಗಂಗೆಯ ।
ಮಂಡೆಯೊಳಿಟ್ಟ ದೊರೆಯ ಶಿವನ ॥ ಪ ॥

ರುಂಡಮಾಲೆ ಸಿರಿಯ ನೊಸಲೊಳು ।
ಕೆಂಡಗಣ್ಣಿನ ಬಗೆಯ ಹರನ ॥ ಅ.ಪ ॥

ಕಪ್ಪುಗೊರಳ ಹರನ ಕಂದರ್ಪಪಿತನ ಸಖನ ।
ಮುಪ್ಪುರ ಗೆಲಿದವನ ಮುನಿಸುತ ಸರ್ಪಭೂಷಣ ಶಿವನ ಹರನ ॥ 1 ॥

ಭಸಿತಭೂಷಿತ ಶಿವನ ಭಕ್ತರವಶದೊಳಗಿರುತಿಹನ ।
ಪಶುಪತಿ ಎನಿಸುವನ ವಸುಧೆಯೋಳ್ ಶಶಿಶೇಖರ ಶಿವನ ಹರನ ॥ 2 ॥

ಗಜ ಚರ್ಮಾಂಬರನ ಗೌರೀವರ ಜಗದೀಶ್ವರನ ।
ತ್ರಿಜಗನ್ಮೋಹನನ ತ್ರಿಲೋಚನ ತ್ರಿಪುರಾಂತಕ ಹರನ ಶಿವನ ॥ 3 ॥

ಕಾಮಿತ ಫಲವೀವನ ಭಕ್ತರ ಪ್ರೇಮದಿ ಸಲಹುವನ ।
ರಾಮನಾಮ ಸ್ಮರನ ರತಿಪತಿ ಕಾಮನ ಸಂಹರನ ಶಿವನ ॥ 4 ॥

ಧರೆಗೆ ದಕ್ಷಿಣ ಕಾಶಿ ಎನಿಸುವ ಪುರಪಂಪಾವಾಸಿ ।
ತಾರಕ ಉಪದೇಶಿ **ಪುರಂದರವಿಠಲ** ಭಕ್ತರ ಪೋಷಿ ಹರನ॥ 5 ॥

****

32. ಅಂಬೆಗಾಲಿಕ್ಕುತ ಬಂದಗೋವಿಂದ

ರಾಗ: ಯಮನ್ **ತಾಳ: ಆದಿ**

ಅಂಬೆಗಾಲಿಕ್ಕುತ ಬಂದ ಗೋವಿಂದ ॥ ಪ ॥

ಅಂಬುಜನಾಭ ದಯದಿಂದ ಎನ್ನ ಮನೆಗೆ ॥ ಅ.ಪ ॥

ಜಲಚರ ಜಲವಾಸ ಧರಣಿಧರ ಮೃಗರೂಪ ।
ನೆಲನಳೆದು ಮೂರಡಿ ಮಾಡಿ ಬಂದ ॥
ಕುಲನಾಶ ವನವಾಸ ನವನೀತಚೋರನಿವ ।
ಲಲನೆಯರ ವ್ರತಭಂಗ ವಾಹನತುರಂಗ ॥ 1 ॥

ಕಣ್ಣಬಿಡುವನು ತನ್ನ ಬೆನ್ನ ತಗ್ಗಿಸುವನು ।
ಮಣ್ಣು ಕೆದರಿ ಕೋರೆ ಬಾಯಿ ತೆರೆದು ॥
ಚಿಣ್ಣ ಭಾರ್ಗವ ಲಕ್ಷ್ಮಣನಣ್ಣ ಬೆಣ್ಣೆಯಕಳ್ಳ ।
ಮಾನವಬಿಟ್ಟು ಕುದುರೆಯನೇರಿದ ॥ 2 ॥

ನೀರಪೊಕ್ಕನು ಗಿರಿಯ ನೆಗಹಿ ಧರಣಿಯ ತಂದ ।
ನರಮೃಗ ಬಲಿಬಂಧ ಕೊರಳಗೊಯ್ಯುತ ॥
ಶರಮುರಿದು ಒರಳೆಳೆದು ನಿರವಾಣಿ ಹಯಹತ್ತಿ ।
ಪುರಂದರವಿಠಲ ಮನೆಗೆ ತಾ ಬಂದ ॥ 3 ॥

****

33. ಡಂಗುರವ ಸಾರಿರಯ್ಯ

ರಾಗ: ನಾದನಾಮಕ್ರಿಯೆ **ತಾಳ: ಆದಿ**

ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು ಭೂ ।
ರಂಗಕ್ಕೆಲ್ಲ ಪಾಂಡುರಂಗವಿಠಲ ಪರದೈವವೆಂದು ॥ ಪ ॥

ಹರಿಯು ಮುಡಿದ ಹೂ ಹರಿವಾಣದೊಳಗಿಟ್ಟುಕೊಂಡು ।
ಹರುಷದಿಂದ ಹಾಡಿ ಪಾಡಿಕುಣಿದು ಚಪ್ಪಾಳಿಕ್ಕುತ ॥ 1 ॥

ಒಡಲ ಜಾಗಟೆಯಮಾಡಿ ನುಡಿವ ನಾಲಿಗೆಯ ಪಿಡಿದು ।
ಢಂ ಢಂ ಢಣಾರೆಂದು ಹೊಡೆದು ಚಪ್ಪಾಳಿಕ್ಕುತ ॥ 2 ॥

ಇಂತು ಜಗಕೆಲ್ಲ ಲಕ್ಷ್ಮೀಕಾಂತನಲ್ಲದಿಲ್ಲವೆಂದು ।
ಸಂತತ ಶ್ರೀ **ಪುರಂದರವಿಠಲ** ಪರದೈವವೆಂದು ॥ 3 ॥

****

34. ಸಂಸಾರವೆಂಬಂಥ ಭಾಗ್ಯವಿರಲಿ

ರಾಗ: ಕಾಂಭೋಧಿ **ತಾಳ: ಆದಿ**

ಸಂಸಾರವೆಂಬಂಥ ಭಾಗ್ಯವಿರಲಿ ।
ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ ॥ ಪ ॥

ತಂದೆನೀನೆ ಕೃಷ್ಣ ತಾಯಿ ಇಂದಿರೆದೇವಿ ।
ಪೊಂದಿದ ಅಣ್ಣನು ವನಜಸಂಭವನು ॥
ಇಂದುಮುಖಿ ಸರಸ್ವತೀದೇವಿ ಅತ್ತಿಗೆ ।
ಎಂದೆಂದಿಗೂ ವಾಯುದೇವರೇ ಗುರುವು ॥ 1 ॥

ಭಾರತೀದೇವಿಯೆ ಗುರುಪತ್ನಿಯು ಎನಗೆ ।
ಗರುಡ ಶೇಷಾದಿಗಳೆ ಗುರುಪುತ್ರರು ॥
ಹರಿದಾಸರೆ ಇಷ್ಟಬಾಂಧವರೆನಗೆ ।
ಹರಿಭಜನೆ ನಡೆಯುವ ಸ್ಥಳವೇ ಮಂದಿರವು ॥ 2 ॥

ಸರ್ವಾಭಿಮಾನವನು ತ್ಯಜಿಸುವುದೆ ಸ್ನಾನ ।
ಹರಿಯನಾಮವೆ ಇನ್ನು ಅಮೃತಪಾನ ॥
ವರ **ಪುರಂದರವಿಠಲ** ನಿನ್ನ ಪಾದಧ್ಯಾನ ।
ಕರುಣಿಸು ಅನವರತ ಕರಪಿಡಿದು ಕಾಯೊ ॥ 3 ॥

35. ಸಕಲಗ್ರಹಬಲ ನೀನೆ ಸರಸಿಜಾಕ್ಷ

ರಾಗ: ಅಠಾಣ **ತಾಳ: ಛಾಪು**

ಸಕಲಗ್ರಹಬಲ ನೀನೆ ಸರಸಿಜಾಕ್ಷ ।
ನಿಖಿಲ ರಕ್ಷಕನೀನೆ ವಿಶ್ವವ್ಯಾಪಕನೆ ॥ ಪ ॥

ರವಿಚಂದ್ರ ಬುಧನೀನೆ ರಾಹುಕೇತುವು ನೀನೆ ।
ಕವಿಗುರು ಶನಿಯು ಮಂಗಳನು ನೀನೆ ।
ದಿವರಾತ್ರಿಯು ನೀನೆ ನವವಿಧಾನವು ನೀನೆ ।
ಭವರೋಗ ಹರನೀನೆ ಭೇಷಜನು ನೀನೆ ॥ 1 ॥

ಪಕ್ಷಮಾಸವು ನೀನೆ ಪರ್ವಕಾಲವು ನೀನೆ ।
ನಕ್ಷತ್ರಯೋಗ ತಿಥಿ ಕರಣನೀನೆ ॥
ಅಕ್ಷಯವೆಂದು ದ್ರೌಪದಿಯ ಮಾನವಕಾಯ್ದ ।
ಪಕ್ಷಿವಾಹನ ದೀನರಕ್ಷಕನು ನೀನೆ ॥ 2 ॥

ಋತುಸಂವತ್ಸರವು ನೀನೆ ವ್ರತಯುಗಾದಿಯು ನೀನೆ ।
ಕ್ರತುಹೋಮ ಯಜ್ಞ ಸದ್ಗತಿಯು ನೀನೆ ॥
ಜಿತವಾಗಿ ಎನ್ನೊಡೆಯ **ಪುರಂದರವಿಠಲನ** ।
ಶ್ರುತಿಗೆಸಿಲುಕದ ಮಹಾಮಹಿಮ ನೀನೆ ॥ 3 ॥

****

36. ಊರದೇವರ ಮಾಡಬೇಕಣ್ಣ

ರಾಗ: ನಾದನಾಮಕ್ರಿಯೆ **ತಾಳ: ಆದಿ**

ಊರದೇವರ ಮಾಡಬೇಕಣ್ಣ ತನ್ನೊಳಗೆ ತಾನೆ ।
ಊರದೇವರ ಮಾಡಿರೆಂದು ಸಾರುತಿದೆ ಶ್ರುತಿಸ್ಮೃತಿಗಳು॥ ಪ ॥

ಇರುಳು ಹಗಲು ದ್ವಾರಗಳೊಂಬತ್ತು ।
ಮುಚ್ಚಿ ನಿಲ್ಲಿಸಿ ಧ್ಯಾನ ಭ್ರೂಮಧ್ಯದಲ್ಲಿ ॥ ಅ.ಪ ॥

ಎಷ್ಟು ಯುಗಗಳು ತೀರಿಹೋಯ್ತಣ್ಣ ದೇವರ ಮಾಡದೆ ।
ಕಷ್ಟದಿಂದ ನೊಂದೆ ಕಾಣಣ್ಣ ॥
ಅಷ್ಟದಳದ ಕಂಭ ನಿಲ್ಲಿಸಿ ಕಟ್ಟಿ ಚಕ್ರಂಗಳನು ಹಾಕಿ ।
ಸೃಷ್ಟಿದೇವರ ತಂದು ನಿಲ್ಲಿಸಿ ದುಷ್ಟಕೋಣನ ಶಿರವ ತರಿದು॥ 1 ॥

ಕಷ್ಟತರ್ಕವೆಂಬ ಕುರಿಯಣ್ಣ ಅದನ್ನು ತಂದು ।
ಕಟ್ಟಿ ತಲೆಯನು ಹೊಡೆಯಬೇಕಣ್ಣ ॥
ಅಷ್ಟಮದದ ಕುರಿಗಳನು ಕಟ್ಟಿ, ತಲೆಯನು ಚಂಡನಾಡಿ ।
ಅಟ್ಟಿತಿರುಗುವ ಕೋಳಿಯನ್ನು ಕುಟ್ಟಿ ಸೂರೆ ಹಾಕುತಲಿ ॥ 2 ॥

ನಾನು ಎಂಬುವ ಮೇಕೆ ಹೋತಣ್ಣ ಅದಕೆ ತಕ್ಕ ।
ಜ್ಞಾನವೆಂಬುವ ಪೋತರಾಜಣ್ಣ ॥
ಮಾನವೆಂಬ ಛಾಟಿ ಹೊಡೆದು ಹೀನ ಹೋತನ ಸೀಳಿ ಬಿಸುಟು ।
ಧ್ಯಾನ ಗುಡಿಸಲು ಸೂರೆಗೊಂಡು ತಾನೆ ಬೆಳಗುವ ಜ್ಯೋತಿ ನಿಲ್ಲಿಸಿ ॥ 3 ॥

ನಾಳೆ ನೋಡೋಣೆನ್ನಬೇಡಣ್ಣ ಕೇಳಣ್ಣ ನಿನ್ನ ।
ಬಾಳು ಅಸ್ಥಿರವೆಂದು ತಿಳಿಯಣ್ಣ ॥
ಪಾಳ್ಯಗಾರನಂತೆ ಬಹನು ಬಾಳುವ ಕಾಲದಿ ಯಮನು ।
ಕೋಳಿ ಪಿಳ್ಳೆಯಾಡುವಾಗ ಹಾಳೆ ಹದ್ದು ಒಯ್ಯುವಂತೆ ॥ 4 ॥

ಹೆಂಡಿರು ಮಕ್ಕಳು ಸುಳ್ಳು ಕೇಳಣ್ಣ ನಿನ್ನ ।
ಮಂಡೆ ತುಂಬ ಬಳಗ ಕಾಣಣ್ಣ ॥
ದಂಡಧಾರಿ ಯಮನು ಬಂದು ಮಂಡೆಮೇಲೆ ಹೊಯ್ಯುವಾಗ ।
ಹೆಂಡಿರು ಮಕ್ಕಳು ನಿನ್ನಕಂಡು ಭಂಗಬಿಡಿಸಬಲ್ಲರೇನಣ್ಣ ॥ 5 ॥

ಸತ್ತ ಪೆಣವ ನೋಡುವೆಯಲ್ಲೋ ನೀ ಗಳಿಸಿದಂಥ ।
ಬುತ್ತಿನೋಡಿ ಉಬ್ಬುವಿಯಲ್ಲೊ ॥
ಮೃತ್ಯುವಿನ ಬಾಯೊಳಗೆ ತುತ್ತು ಆಗಿ ಹೋಗಬೇಡ ।
ತೊತ್ತು ಆಗಿ ಗುರುವಿಗೆ ನೀ ಹತ್ತಿನೋಡೋ ಗುಡ್ಡವನ್ನು ॥ 6 ॥

ಮುಂದೆ ಇಂಥ ಜನ್ಮಬರದಣ್ಣ ನೋಡಣ್ಣ ನಿನಗೆ ।
ಮಂದಮತಿಯುಬೇಡ ಕಾಣಣ್ಣ ॥
ಹಿಂದಿನ ಕಷ್ಟವ ಮರೆತು ಮುಂದಿನ ಹಮ್ಮನ್ನು ತೊರೆದು ।
ತಂದೆ **ಪುರಂದರವಿಠಲ**ನ್ನ ಹೊಂದಲು ನೀ ಮುಕ್ತನಣ್ಣ ॥ 7 ॥

****

37. ಸುಂದರ ಮೂರುತಿ ಮುಖ್ಯಪ್ರಾಣ

ರಾಗ: ಜುಂಜೂಟಿ **ತಾಳ: ಆದಿ**

ಸುಂದರ ಮೂರುತಿ ಮುಖ್ಯಪ್ರಾಣ ।
ಬಂದ ಮನೆಗೆ ಶ್ರೀರಾಮನಾಮ ಧ್ವನಿಗೆ ॥ ಪ ॥

ಕಣಕಾಲಂದುಗೆ ಗೆಜ್ಜೆ ಘಲುಘಲುರೆನ್ನುತಾ ।
ಕುಣಿಕುಣಿದಾಡುತ ॥ 1 ॥

ತುಂಬುರು ನಾರದ ವೀಣೆಯ ನುಡಿಸುತ ।
ಗಾನವ ಪಾಡುತಾ ॥ 2 ॥

ಪುರಂದರವಿಠಲನ ನೆನೆದು ಪಾಡುತಲಿ ।
ಆಲಿಂಗನ ಮಾಡುತಲಿ ॥ 3 ॥

****

38. ಮಂಗಳಂ ಜಯ ಮಂಗಳ

ರಾಗ: ಸುರುಟಿ **ತಾಳ: ಆದಿ**

ಮಂಗಳಂ ಜಯಮಂಗಳಂ ॥ ಪ ॥

ಇಂದೀವರಾಕ್ಷಗೆ ಇಭರಾಜವರದಗೆ ।
ಇಂದಿರಾರಮಣ ಗೋವಿಂದ ಹರಿಗೆ ॥
ನಂದನಕಂದಗೆ ನವನೀತಚೋರಗೆ ।
ವೃಂದಾರಕೇಂದ್ರ ಉಡುಪಿಯ ಕೃಷ್ಣಗೆ ॥ 1 ॥

ಕ್ಷೀರಾಭಿವಾಸಗೆ ಕ್ಷಿತಿಜನಪಾಲಗೆ ।
ಮಾರನಪತಿ ಮಂಗಳ ಮೂರ್ತಿಗೆ ॥
ಚಾರುಚರಣದಿಂದ ಚೆಲುವಗಂಗೆಯ ಪಡೆದ ।
ಕಾರುಣ್ಯಮೂರ್ತಿ ಕೌಸ್ತುಭಧಾರಿಗೆ ॥ 2 ॥

ವ್ಯಾಸಾವತಾರಗೆ ವೇದಉದ್ಧಾರಗೆ ।
ವಾಸಿತಾನಂದಪದ ಸಕಲೇಶಗೆ ॥
ವಾಸುದೇವಮೂರ್ತಿ **ಪುರಂದರವಿಠಲಗೆ** ।
ದಾಸರಕಾಯ್ದ ರುಕ್ಮಿಣೀರಮಣಗೆ ॥ 3 ॥

39. ಗಜವದನ ಬೇಡುವೆ ಗೌರೀತನಯ

ರಾಗ: ಹಂಸಧ್ವನಿ **ತಾಳ: ಆದಿ**

ಗಜವದನ ಬೇಡುವೆ ಗೌರೀತನಯ ।
ತ್ರಿಜಗವಂದಿತನೆ ಸುಜನರ ಪೊರೆವನೆ ॥ ಪ ॥

ಪಾಶಾಂಕುಶಧರ ಪರಮಪವಿತ್ರ ।
ಮೂಷಿಕವಾಹನ ಮುನಿಜನಪ್ರೇಮ ॥ ಅ.ಪ ॥

ಮೋದದಿ ನಿನ್ನಯ ಪಾದವ ತೋರೋ ।
ಸಾಧುವಂದಿತನೆ ಆದರದಿಂದಲಿ ॥
ಸರಸಿಜನಾಭ ಶ್ರೀ **ಪುರಂದರವಿಠಲನ** ।
ನಿರುತ ನೆನೆಯುವಂತೆ ನೀ ದಯಮಾಡೊ ॥

****

40. ಕೊಡುಬೇಗ ದಿವ್ಯಮತಿ ಸರಸ್ವತಿ

ರಾಗ: ವಸಂತ **ತಾಳ: ಆದಿ**

ಕೊಡುಬೇಗ ದಿವ್ಯಮತಿ ಸರಸ್ವತಿ ॥ ಪ ॥

ಮೃಡಹರಿ ಹಯಮುಖರೊಡೆಯಳೆ ನಿನ್ನಯ ।
ಅಡಿಗಳಿಗೆರಗುವೆ ಅಮ್ಮ ಬ್ರಹ್ಮನ ರಾಣಿ ॥ ಅ.ಪ ॥

ಇಂದಿರಾರಮಣನ ಹಿರಿಯ ಸೊಸೆಯು ನೀನು ।
ಬಂದೆನ್ನ ವದನದಿ ನಿಂದು ನಾಮವನುಡಿಸೆ ॥ 1 ॥

ಅಖಿಳವಿದ್ಯಾಭಿಮಾನಿ ಅಜನಪಟ್ಟದ ರಾಣಿ ।
ಸುಖವಿತ್ತು ಪಾಲಿಸೆ ಸುಜನಶಿರೋಮಣಿ ॥ 2 ॥

ಪತಿತಪಾವನೆ ನೀ ಗತಿಯೆಂದು ನಂಬಿದೆ ।
ಸತತ **ಪುರಂದರವಿಠಲನ** ತೋರೆ ॥ 3 ॥

****

41. ಮರುಳು ಮಾಡಿ ಕೊಂಡೆಯೆಲ್ಲೆ

ರಾಗ: ಮಧ್ಯಮಾವತಿ **ತಾಳ: ಆದಿ**

ಮರುಳು ಮಾಡಿಕೊಂಡೆಯಲ್ಲೆ ಮಾಯಾದೇವಿಯೇ ॥ ಪ ॥

ಇರುಳು ಹಗಲು ಏಕವಾಗಿ ಹರಿಯು ನಿನ್ನ ಬಿಡದಿಪ್ಪಂತೆ ॥ ಅ.ಪ ॥

ಸರ್ವಸಂಗ ಬಿಟ್ಟು ಸನ್ಯಾಸಿಯಾದ ಕಾಲಕ್ಕೂ ।
ಸರ್ವದಾ ತನ್ನೆದೆಯ ಮೇಲೆ ಬಿಡದೆ ನಿನ್ನ ಧರಿಸಿಪ್ಪಂತೆ ॥ 1 ।

ಪ್ರಳಯಕಾಲದಲ್ಲಿ ಆಲದೆಲೆಯ ಮೇಲೆ ಮಲಗಿದ್ದಾಗ ।
ಹಲವು ಆಭರಣಗಳು ಜಲವು ಆಗಿ ಜಾಣತನದಿ ॥ 2 ॥

ಮಕ್ಕಳ ಪಡೆದರೆ ನಿನ್ನ ಚೊಕ್ಕತನವು ಪೋಪುದೆಂದು।
ಪೊಕ್ಕಳೊಳು ಮಕ್ಕಳ ಪಡೆದು ಕಕ್ಕುಲಾತಿಪಡುವಂತೆ ॥ 3 ॥

ಎಡಕೆ ಭೂಮಿ ಬಲಕ್ಕೆ ಶ್ರೀಯು ಎದುರಿನಲ್ಲಿ ದುರ್ಗಾದೇವಿ ।
ತೊಡೆಯಮೇಲೆ ಲಕುಮಿಯಾಗಿ ಬಿಡದೆ ಮುದ್ದಾಡಿಸುವಂತೆ ॥ 4 ॥

ಎಂದೆಂದಿಗೂ ಮರೆಯೆ ನಿನ್ನಾನಂದದಿ ಜನರಿಗೆಲ್ಲಾ ।
ತಂದುತೋರೆ ಸ್ವಾಧೀನ **ಪುರಂದರ** ವಿಠಲರಾಯನ ॥ 5 ॥

****

42. ಅನುಭವದಡಿಗೆಯ ಮಾಡಿ

ರಾಗ: ನಾದನಾಮಕ್ರಿಯ **ತಾಳ: ಆದಿ**

ಅನುಭವದಡಿಗೆಯ ಮಾಡಿ ಅದಕನುಭವಿಗಳು ।
ಬಂದು ನೀವೆಲ್ಲಾ ಕೂಡಿ ॥ ಪ ॥

ತನುವೆಂಬ ಭಾಂಡವ ತೊಳೆದು ಕೆಟ್ಟ ।
ಮನದ ಚಂಚಲವೆಂಬ ಮುಸುರೆಯ ಕಳೆದು ॥
ಘನವಾಗಿ ಮನೆಯನ್ನು ಬಳಿದು ಅಲ್ಲಿ ।
ಮಿನುಗುವ ತ್ರಿಗುಣದ ಒಲೆಗುಂಡ ನೆಡೆದು ॥ 1 ॥

ವಿರಕ್ತಿಯೆಂಬ ಮಡಿಯುಟ್ಟು ಪೂರ್ಣ ।
ಹರಿಭಕ್ತಿಯೆಂಬ ನೀರನ್ನೆಸರಿಟ್ಟು ॥
ಅರಿವೆಂಬ ಬೆಂಕಿಯ ಕೊಟ್ಟು ।
ಮಾಯಮದವೆಂಬ ಕಷ್ಟವ ಮುದದಿಂದ ಸುಟ್ಟು ॥ 2 ॥

ಕರುಣೆಂಬೊ ಸಾಮಗ್ರಿ ಹೂಡಿ ಮೋಕ್ಷ ।
ಪರಿಕರವಾದಂಥ ಪಾಕವ ಮಾಡಿ ॥
ಗುರುಶರಣರು ಸವಿದಾಡಿ ನಮ್ಮ ।
ಪುರಂದರವಿಠಲನ ಬಿಡದೆ ಕೊಂಡಾಡಿ ॥ 3 ॥

****

43. ಈ ಪರಿಯ ಸೊಬಗಾವ

ರಾಗ: ಕಾಂಬೋಧಿ **ತಾಳ: ಆದಿ**

ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ ।
ಗೋಪೀಜನಪ್ರಿಯ ಗೋಪಾಲಗಲ್ಲದೆ ॥ ಪ ॥

ದೊರೆಯತನದಲಿ ನೋಡೆ ಧರಣಿದೇವಿಗೆ ರಮಣ ।
ಸಿರಿಯತನದಲಿ ನೋಡೆ ಶ್ರೀಕಾಂತನು ॥
ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ ।
ಗುರುವುತನದಲಿ ನೋಡೆ ಜಗದಾದಿಗುರುವು ॥ 1 ॥

ಪಾವನತ್ವದಿ ನೋಡೆ ಅಮರಗಂಗಾಜನಕ ।
ದೇವತ್ವದಲಿ ನೋಡೆ ದಿವಿಜರೊಡೆಯ ॥
ಲಾವಣ್ಯದಲಿ ನೋಡೆ ಲೋಕಮೋಹಕನಯ್ಯ ।
ಆವಧೈರ್ಯದಿ ನೋಡೆ ಅಸುರಾಂತಕ ॥ 2 ॥

ಗಗನದಲಿ ಸಂಚರಿಪ ಗರುಡದೇವನೆ ತುರಗ ।
ಜಗತೀಧರ ಶೇಷಪರ್ಯಂಕಶಯನ ॥
ನಿಗಮಗೋಚರ ಪುರಂದರವಿಠಲಗಲ್ಲದೆ ।
ಮಿಗಿಲಾದ ದೈವಗಳಿಗೇ ಈ ಭಾಗ್ಯವುಂಟೆ ॥ 3 ॥

****

44. ಎನಗೂ ಆಣೆ ರಂಗ ನಿನಗೂ ಆಣೆ

ರಾಗ: ಕೇದಾರ ತಾಳ: ಆದಿ

ಎನಗೂ ಆಣೆ ರಂಗ ನಿನಗೂ ಆಣೆ ।
ಎನಗೂ ನಿನಗೂ ಇಬ್ಬರಿಗೂ ನಿನ್ನ ಭಕ್ತರಾಣೆ ॥ ಪ ॥

ನಿನ್ನನು ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ ರಂಗ ।
ಎನ್ನ ನೀ ಕೈಬಿಟ್ಟು ಹೋದರೆ ನಿನಗೆ ಆಣೆ ॥ 1 ॥

ತನುಮನಧನದಲಿ ವಂಚಕನಾದರೆ ಎನಗೆ ಆಣೆ ।
ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ ॥ 2 ॥

ಕಾಕುಮನುಜರ ಸಂಗವ ಮಾಡಿದರೆನಗೆ ಆಣೆ ರಂಗ ।
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ ॥ 3 ॥

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ ರಂಗ ।
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ ॥4॥

ಹರಿನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ ರಂಗ ।
ಪುರಂದರವಿಠಲ ನೀನೊಲಿಯದಿದ್ದರೆ ನಿನಗೆ ಆಣೆ ॥ 5 ॥

****

45. ಕಲಿಯುಗದಲಿ ಹರಿನಾಮವ

ರಾಗ: ಜಂಜೂಟಿ ತಾಳ: ಆದಿ

ಕಲಿಯುಗದಲಿ ಹರಿನಾಮವ ನೆನೆದರೆ ।
ಕುಲಕೋಟಿಗಳುದ್ಧರಿಸುವವೋ ರಂಗ ॥ ಪ ॥

ಸುಲಭದ ಮುಕ್ತಿಗೆ ಸುಲಭನೆಂದೆನಿಸುವ ।
ಜಲರುಹನಾಭನ ನೆನೆಮನವೆ ॥ ಅ.ಪ ॥

ಅರ್ಚಿಸಲರಿಯೆನು ಮೆಚ್ಚಿಸಲರಿಯೆನು ।
ತುಚ್ಛನು ನಾನೆಂದು ಎನಬೇಡ ॥
ಅಚ್ಯುತಾನಂತ ಗೋವಿಂದ ಮುಕುಂದನ ।
ಇಚ್ಛೆಯಿಂದ ನೀ ನೆನೆಮನವೇ ॥ 1 ॥

ಸ್ನಾನವನರಿಯೆನು ಮೌನವನರಿಯೆನು ।
ಧ್ಯಾನವನರಿಯೆನೆಂದೆನಬೇಡ ॥
ಜಾನಕಿವಲ್ಲಭ ದಶರಥನಂದನ ।
ಗಾನವಿನೋದನ ನೆನೆಮನವೆ ॥ 2 ॥

ಜಪವೊಂದರಿಯೆನು ತಪವೊಂದರಿಯೆನು ।
ಉಪದೇಶವಿಲ್ಲೆಂದೆನಬೇಡ ॥
ಅಪಾರ ಮಹಿಮ ಶ್ರೀ **ಪುರಂದರವಿಠಲನ** ।
ಉಪಾಯದಿಂದಲಿ ನೆನೆಮನವೆ ॥ 3 ॥

****

46. ರಾಮಕೃಷ್ಣರು ಮನೆಗೆ ಬಂದರು

ರಾಗ: ಭೀಮಪಲಾಸ್ **ತಾಳ: ಆದಿ**

ರಾಮಕೃಷ್ಣರು ಮನೆಗೆ ಬಂದರು ಬಾಗಿಲ ತೆರೆಯಿರೇ ।
ಕಾಮಧೇನು ಬಂದಂತಾಯಿತು ವರವ ಬೇಡಿರೆ ॥ ಪ ॥

ಚೆಂಡುಬುಗುರಿ ಚಿಣ್ಣಿಕೋಲು ಗಜ್ಜುಗವಾಡುತ ।
ದುಂಡುಮಲ್ಲಿಗೆ ಮುಡಿದು ಕೊಳಲನೂದಿ ಪಾಡುತ ॥
ಹಿಂಡುಪೆಣ್ಗಳ ಮುದ್ದುಮುಖದ ಸೊಬಗ ನೋಡುತಾ ।
ಭಂಡುಮಾಡಿ ಬಾಲೆಯರೊಡನೆ ಸರಸವಾಡುತಾ ॥ 1 ॥

ಮಕರಕುಂಡಲ ನೀಲಮುತ್ತಿನಬಾವುಲಿ ಇಡುತಲಿ ।
ಕಂಕಣಹಾರ ತೋಳಬಂದಿ ತೊಡುಗೆ ತೊಡುತಲಿ ॥
ಸುಕುಮಾರ ಸುಂದರವಾದ ಉಡುಗೆ ಉಡುತಲಿ ।
ಮುಖದಕಮಲ ಮುಗುಳುನಗೆಯ ಸುಖವ ಕೊಡುತಲಿ ॥ 2 ॥

ಪೊಕ್ಕಳಲ್ಲಿ ಅಜನಪಡೆದ ದೇವದೇವನು ।
ಚಿಕ್ಕಅಂಗುಷ್ಟದಲಿ ಗಂಗೆಯ ಪಡೆದನು ॥
ಮಕ್ಕಳಮಾಣಿಕ್ಯ ಸಿರಿ **ಪುರಂದರವಿಠಲನು** ।
ಅಕ್ಕರೆಯಿಂದಲಿ ಮುಕುತಿಕೊಡುವ ರಂಗನಾಥನು ॥ 3 ॥

****

47. ಓಡಿ ಬಾರಯ್ಯ ವೈಕುಂಠಪತಿ ನಿನ್ನ

ರಾಗ: ಭೈರವಿ | ತಾಳ: ಆದಿ

ಓಡಿ ಬಾರಯ್ಯ ವೈಕುಂಠಪತಿ ನಿನ್ನ ।
ನೋಡುವೆ ಮನದಣಿಯಾ ॥ ಪ ॥

ನೋಡಿ ಮುದ್ದಾಡಿ ಮಾತಾಡಿ ಸಂತೋಷದಿ ।
ಪಾಡಿ ಪೊಗಳುವೆನೊ ಪರಮಪುರುಷ ಹರಿ ॥ ಅ.ಪ ॥

ಕೆಂದಾವರೆ ಪೋಲ್ವ ಪಾದಂಗಳಿಂದ ರಂಗ ।
ಧಿಂ ಧಿಮಿ ಧಿಮಿರೆಂದು ಕುಣಿಯುತಲಿ ॥
ಅಂದುಗೆ ಕಿರುಗೆಜ್ಜೆ ಘಲುಘಲುರೆನ್ನಲು ।
ಕುಂದಣದುಡುದಾರ ಝುಣಝುಣರೆನ್ನಲು ॥ 1 ॥

ತುರುಬಿನ ಮೇಲೆ ನಲಿಯುತಲಿರುತಿಹ ।
ಮರುಗ ಮಲ್ಲಿಗೆಜಾಜಿ ತುಲಸಿಯದಂಡೆ ॥
ಕರದಲಿ ಪಿಡಿದಿಹ ಮುತ್ತಿನ ಚೆಂಡು ।
ಸರಸದಿಂದಲಿ ನೀ ನಲಿನಲಿದಾಡುತ ॥ 2 ॥

ಮಂಗಳಾತ್ಮಕ ಮೋಹನಕಾಯರಂಗ ।
ಸಂಗೀತಲೋಲ ಸದ್ಗುಣಶೀಲ ॥
ಅಂಗನೆಯರಿಗೆಲ್ಲಾ ಅತಿ ಪ್ರಿಯನಾದ ।
ಮಂಗಳಮೂರುತಿ **ಪುರಂದರವಿಠಲ** ॥ 3 ॥

****

48. ದಾಸನ ಮಾಡಿಕೊ ಎನ್ನ ಸ್ವಾಮಿ

ರಾಗ: ನಾದನಾಮಕ್ರಿಯ | ತಾಳ: ಆದಿ

ದಾಸನ ಮಾಡಿಕೊ ಎನ್ನ ಸ್ವಾಮಿ ।
ಸಾಸಿರನಾಮದ ವೆಂಕಟರಮಣ ॥ ಪ ॥

ದುರುಬುದ್ಧಿಗಳನ್ನೆಲ್ಲಾ ಬಿಡಿಸೊ ನಿನ್ನ ।
ಕರುಣಕವಚವೆನ್ನ ಹರಣಕ್ಕೆ ತೊಡಿಸೊ ॥
ಚರಣಸೇವೆ ಎನಗೆ ಕೊಡಿಸೊ ಅಭಯ ।
ಕರಪುಷ್ಪವ ಎನ್ನ ಶಿರದೊಳು ಮುಡಿಸೊ ॥ 1 ॥

ದೃಢ ಭಕ್ತಿ ನಿನ್ನಲಿ ಬೇಡಿ ನಿನ್ನ ।
ಅಡಿಗೆರಗುವೆನಯ್ಯಾ ಅನುದಿನ ಪಾಡಿ ॥
ಕಡೆಗಣ್ಣಲೇಕೆನ್ನ ನೋಡಿ ಬಿಡುವೆ ।
ಕೊಡು ನಿನ್ನ ಧ್ಯಾನವ ಮನಶುಚಿಮಾಡಿ ॥ 2 ॥

ಮೊರೆ ಹೊಕ್ಕವರ ಕಾಯ್ವ ಬಿರುದು ಎನ್ನ ।
ಮರೆಯದೆ ರಕ್ಷಣೆ ಮಾಡಯ್ಯ ಪೊರೆದು ॥
ದುರಿತಗಳೆಲ್ಲವ ತರಿದು ಸಿರಿ ।
ಪುರಂದರವಿಠಲ ಎನ್ನನು ಪೊರೆದು ॥ 3 ॥

****

49. ನಂದತನಯ ಗೋವಿಂದನ

ರಾಗ: ದೇಶ್ **ತಾಳ: ಆದಿ**

ನಂದತನಯ ಗೋವಿಂದನ
ಭಜಿಸುವಾನಂದವಾದ ಮಿಠಾಯಿ ॥ ಪ ॥

ಬಂಧಗಳನು ಭವರೋಗಗಳೆಲ್ಲವ ।
ಹಿಂಗಿಪುದೀ ಮಿಠಾಯಿ ॥ ಅ.ಪ ॥

ದಧಿ ಘೃತಕ್ಷೀರಕ್ಕಿಂತಲು ಇದು ಬಹು ।
ಅಧಿಕವಾದ ಮಿಠಾಯಿ ॥
ಕದಳಿ ದ್ರಾಕ್ಷಿ ಖರ್ಜೂರ ರಸಗಳನ್ನು ।
ಮೀರಿಸುವುದೀ ಮಿಠಾಯಿ ॥ 1 ॥

ಪಂಚಭಕ್ಷ್ಯಗಳ ಷಡ್ರಸಾನ್ನಗಳ ।
ಮಿಂಚಿದಂಥ ಮಿಠಾಯಿ ॥
ಕಂಚೀಶನೇ ರಕ್ಷಿಸು ಎಂದುಸುರುವ ।
ರಂಜಿಕೆ ಬಿಡಿಪ ಮಿಠಾಯಿ ॥ 2 ॥

ಜಪತಪಸಾಧನಗಳಿಗಿಂತಲೂ ।
ಅಪರೂಪದ ಮಿಠಾಯಿ ॥
ಜಿಪುಣಮತಿಗಳಿಗೆ ಸಾಧ್ಯವಿಲ್ಲದಿಹ ॥
ಪುರಂದರವಿಠಲ ಮಿಠಾಯಿ ॥ 3 ॥

50. ಮರೆಯಬೇಡ ಮನವೆ

ರಾಗ: ಕಾನಡ ತಾಳ: ಆದಿ

ಮರೆಯಬೇಡ ಮನವೆ ನೀನು ಹರಿಯಸ್ಮರಣೆಯಾ ॥ ಪ ॥

ಯಾಗಯಜ್ಞ ಮಾಡಲೇಕೆ ।
ಯೋಗಿ ಯತಿಯು ಆಗಲೇಕೆ ॥
ನಾಗಶಯನ ನಾರದವಂದ್ಯನ ।
ಕೂಗಿ ಭಜನೆ ಮಾಡೋ ॥ 1 ॥

ಸತಿಯು ಸುತರು ಹಿತರು ಎಂದು ।
ಮತಿಯಗೆಟ್ಟು ಕೆಡಲಿಬೇಡ ॥
ಗತಿಯು ತಪ್ಪಿ ಹೋಗುವಾಗ ।
ಸತಿಯು ಸುತರು ಬಾಹೋರೇನೊ ॥ 2 ॥

ಹರಿಯಸ್ಮರಣೆ ಮಾತ್ರದಿಂದ ।
ಘೋರ ದುರಿತವೆಲ್ಲ ನಾಶ ॥
ಪರಮಪುರುಷ **ಪುರಂದರವಿಠಲ** ।
ಪದವಿ ಕೊಡುವ ಪವನನಯ್ಯ ॥ 3 ॥

****

51. ಕಲಿಯುಗಕ್ಕೆ ಸಮಯುಗವು

ಉಗಾಭೋಗ

ಕಲಿಯುಗಕ್ಕೆ ಸಮಯುಗವು ಇಲ್ಲವಯ್ಯ
ಕಲುಷಹರ ಕೈವಲ್ಯವು ಕರಸ್ಥವಯ್ಯ ॥

ಜಲಜಲೋಚನ ನಮ್ಮ **ಪುರಂದರವಿಠಲನ್ನ** ।
ಬಲಗೊಂಡು ಸುಖಿಸಿ ಬಾಳುವುದಕ್ಕೆ ॥

ದಾಸನಾಗುವುದಕ್ಕೆ ಏಸು ಜನ್ಮದ ಸುಕೃತ ।
ಭಾಸುರ ರವಿಕೋಟಿ ಶ್ರೀಶ ಸುಗುಣವಂತ ।

ನಾಶರಹಿತ ನಿನ್ನ ದಾಸರ ದಾಸ್ಯ ॥
(ಲೇಸಾಗಿ ಕೊಡು ಕಂಡ್ಯಾ **ಪುರಂದರವಿಠಲ**)

****

52. ಅಲ್ಲಿದೆ ನಮ್ಮನೆ ಇಲ್ಲಿ ಬಂದ ಸುಮ್ಮನೆ

ರಾಗ: ಪೂರ್ವಿ ಕಲ್ಯಾಣಿ ತಾಳ: ಆದಿ

ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ ।
ಪದುಮನಾಭನು ವಾಸಮಾಡುವ ಮನೆ ॥

ಕದ ಬಾಗಿಲಿರಿಸಿದ ಕಳ್ಳಮನೆಯು ಇದು ।
ಮುದದಿಂದ ಲೋಲಾಡ್ವ ಸುಳ್ಳುಮನೆಯು ಇದು ॥
ವೈಕುಂಠವೆಂಬುದೆ ನಮ್ಮ ಸ್ವಂತಮನೆ ಇದು ।
ಇಲ್ಲದೆ ಹೋಗ್ವ ಕನಸಿನಮನೆ ಇದು ॥ 1 ॥

ಮಾಳಿಗೆಮನೆಯೆಂದು ನೆಚ್ಚಿ ನೀ ಕೆಡಲುಬೇಡ ।
ಕೇಳಯ್ಯಾ ಹರಿಕಥೆ ಪುರಾಣಂಗಳ ॥
ನಾಳೆ ಯಮದೂತರು ಬಂದೆಳೆದೊಯ್ವಾಗ ।
ಮಾಳಿಗೆಮನೆಯು ಸಂಗಡ ಬಾರದಯ್ಯ ॥ 2 ॥

ಮಡದಿ ಮಕ್ಕಳು ಎಂದು ನೆಚ್ಚಿ ನೀಕೆಡಬೇಡ ।
ಕಡುಕೊಬ್ಬುತನದಲ್ಲಿ ಉಬ್ಬಿನಡೆಯದಿರೊ ॥
ಒಡೆಯ ಶ್ರೀ ಪುರಂದರವಿಠಲನ ಸ್ಮರಣೆಯ ।
ದೃಢಭಕ್ತಿಯಲಿ ಭಜಿಸೋ ಮನುಜ ॥ 3 ॥

****

53. ಸುಳ್ಳು ನಮ್ಮಲ್ಲಿಲ್ಲವಯ್ಯ

ರಾಗ: ಹಂಸಾನಂದಿ ತಾಳ: ಆದಿ

ಸುಳ್ಳು ನಮ್ಮಲ್ಲಿಲ್ಲವಯ್ಯ ಸುಳ್ಳೆ ನಮ್ಮನೆ ದೇವರು॥ ಪ ॥

ಬೆಕ್ಕು ಭಕ್ಕರಿಮಾಡೋದು ಕಂಡೆ ।
ಇಲಿಯು ಒಲೆಯ ಚಾಚೋದ ಕಂಡೆ ॥
ಮೆಣಸಿನಕಾಯಿ ಕಂಡೇನಮ್ಮ ।
ಒನಕೆ ಗಡತಾರ ॥ 1 ॥

ಕಪ್ಪೆ ಪಾತರ ಕುಣಿವುದಕಂಡೆ ।
ಏಡಿ ಮದ್ದಲೆ ಬಡಿವುದ ಕಂಡೆ ॥
ಮೆಕ್ಕೀ ತೆನೆಯ ಕಂಡೇನವ್ವ ।
ಕೆಕ್ಕೀ ಗಡತಾರ ॥ 2 ॥

ಅರಿಶಿಣ ಬಿತ್ತೋದ ಕಂಡೆ ।
ಗಸಗಸೆ ಎಣಿಸೋದ ಕಂಡೆ ॥
ಪುರುಂದರವಿಠಲನ ಪಾದವ ಕಂಡೆ ।
ಪರ್ವತ ಗಡತಾರ ॥ 3 ॥

****

54. ಕೃಷ್ಣ ಮೂರ್ತಿ ಕಣ್ಣಾಮುಂದೆ

ರಾಗ: ಕಾಂಬೋದಿ **ತಾಳ: ಆದಿ**

ಕೃಷ್ಣಮೂರ್ತಿ ಕಣ್ಣಾಮುಂದೆ ನಿಂತಿದಂತಿದೆ ॥ ಪ ॥

ಕಷ್ಟಗಳನೆಲ್ಲ ಪರಿಹರಿಸಿ ಮನ
ದಿಷ್ಟಾರ್ಥಗಳನೆಲ್ಲಾ ಕೊಟ್ಟುರಕ್ಷಿಸುವಂಥ ॥ ಅ.ಪ ॥

ಮಸ್ತಕದಲಿ ಮಾಣಿಕ್ಯದ ಕಿರೀಟ ।
ಕಸ್ತೂರಿತಿಲಕದಿ ನಲಿವ ಲಲಾಟ ॥
ಶಿಸ್ತಿಲಿ ಕೊಳಲನೂದುವ ಓರೆನೋಟ ।
ಕೌಸ್ತುಭ ಎಡಬಲದಲಿ ಓಲ್ಯಾಟ ॥ 1 ॥

ಮಘಮಘಿಸುವ ಸೊಬಗಿನ ಸುಳಿಗುರುಳು ।
ಚಿಗುರು ತುಳಸಿ ವನಮಾಲೆಯು ಕೊರಳೊಳು ॥
ಬಗೆಬಗೆ ಹೊನ್ನುಂಗುರವಿಟ್ಟ ಬೆರಳು ।
ಸೊಗಸಿನ ನಾಭಿಯು ತಾವರೆ ಅರಳು ॥ 2 ॥

ಉಡುದಾರ ವಡ್ಯಾಣ ನಿಖಿಲಾಭರಣ ।
ಉಡುಗೆ ಪೀತಾಂಬರ ರವಿಶಶಿಕಿರಣ ॥
ಕಡಗ ನೂಪುರ ಗೆಜ್ಜೆಗಳನಿಟ್ಟ ಚರಣ ।
ಒಡೆಯ ಶ್ರೀ **ಪುರಂದರವಿಠಲನ** ಕರುಣ ॥ 3 ॥

****

55. ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ

ರಾಗ: ತಿಲಂಗ್ ತಾಳ: ಆದಿ

ಶರಣೆಂಬೆ ವ಼ಾಣಿ ಪೊರೆಯೆ ಕಲ್ಯಾಣಿ ॥ ಪ ॥

ವಾಗಭಿಮಾನಿ ವರ ಬ್ರಹ್ಮನರಾಣಿ ।
ಸುಂದರವೇಣಿ ಸುಚರಿತ್ರಾಣಿ ॥ 1 ॥

ಜಗದೊಳು ನಿಮ್ಮ ಪೊಗಳುವೆನಮ್ಮ ।
ಹರಿಯ ತೋರಿಸೆಂದು ಪ್ರಾರ್ಥಿಪೆನಮ್ಮ ॥ 2 ॥

ಪಾಡುವೆ ಶ್ರುತಿಯ ಬೇಡುವೆ ಮತಿಯ ।
ಪುರಂದರವಿಠಲನ ಸೋದರ ಸೊಸೆಯ ॥ 3 ॥

****

56. ಬಾಬಾ ರಂಗ ಭುಜಂಗಶಯನ

ರಾಗ: ಅಭೋಗಿ ತಾಳ: ಆದಿ

ಬಾಬಾ ರಂಗ ಭುಜಂಗಶಯನ ।
ಕೋಮಲಾಂಗ ಕೃಪಾಪಾಂಗ ॥ ಪ ॥

ಬಾಬಾ ಎನ್ನ ಅಂತರಂಗ ।
ಮಲ್ಲರ ಗಜಸಿಂಗ ದುರಿತಭವಭಂಗ ॥ ಅ.ಪ ॥

ಉಭಯಕಾವೇರಿ ಮಧ್ಯನಿವಾಸ ।
ಅಭಯದಾಯಕ ಶ್ರೀನಿವಾಸ ॥
ಸಭೆಯೊಳು ಸತಿಯಳ ಕಾಯ್ದ ಉಲ್ಲಾಸ ।
ಇಭವರದನೆ ಶ್ರೀ ವೆಂಕಟೇಶ ॥ 1 ॥

ಮಗರಿಗಸಾ ದಸರಿಗಮಾ ।
ಸರಿಗಮದಾ ರಿಗಮದಸಾ ॥
ದಸರಿಗರಿ ಮಗಗರಿಸ ಸರಿಸದಸಾ ।
ಮದಸದಮಾ ದಸರಿಗ ॥ 2 ॥

ಶಂಭರಾರಿ ಪಿತ ಆಡಂಬರಹಿತಮನ ।
ಅಂಬುಜದಳ ನಿಭನೇತ್ರ ॥
ಶಂಖಚಕ್ರಧರ **ಪುರಂದರವಿಠಲ** ।
ತುಂಬುರು ನಾರದ ಸ್ತುತಿಪಾತ್ರ ॥ 3 ॥

****

57. ಬಂದನೇನೆ ರಂಗ ಬಂದನೇನೆ

ರಾಗ: ಶ್ರೀರಾಗ **ತಾಳ: ಆದಿ**

ಬಂದನೇನೆ ರಂಗ ಬಂದನೇನೆ ಎನ್ನ ।
ತಂದೆ ಬಾಲಕೃಷ್ಣಾ ನವನೀತ ಚೋರ ॥ ಪ ॥

ಘಲು ಘಲು ಘಲುರೆಂಬ ಪೊನ್ನಂದಿಗೆ ಗೆಜ್ಜೆ ।
ಹೊಳೆಹೊಳೆಯುವ ಪಾದವನೂರುತ ॥
ನಲಿನಲಿದಾಡುವ ಉಂಗುರ ಅರಳೆಲೆ ।
ಥಳಥಳಥಳ ಹೊಳೆಯುತ ಶ್ರೀ ಕೃಷ್ಣ ॥ 1 ॥

ಕಿಣಿಕಿಣಿಕಿಣಿರೆಂಬ ಕಡಗ ಕಂಕಣ ಬಳೆ ।
ಝುಣಝುಣರೆಂಬೊ ನಡುವಿನ ಗಂಟೆ ॥
ಢಣಢಣಢಣರೆಂಬ ಪಾದದ ತೊಡರಿನ ।
ಮಿಣಿಮಿಣಿಮಿಣಿ ಕುಣಿದಾಡುತ ಶ್ರೀ ಕೃಷ್ಣ ॥ 2 ॥

ಹಿಡಿ ಹಿಡಿ ಹಿಡಿಯೆಂದು **ಪುರಂದರವಿಠಲ**ನ ।
ದುಡು ದುಡು ದುಡನೆ ಓಡುತ ॥
ನಡಿ ನಡಿ ನಡಿಯೆಂದು ಮೆಲ್ಲನೆ ಪಿಡಿಯಲು ।
ಬಿಡಿ ಬಿಡಿ ಬಿಡಿ ದಮ್ಮಯ್ಯ ಎನ್ನುತ ॥ 3 ॥

****

58. ಎಂಥಾ ಚೆಲುವಗೆ ಮಗಳನು

ರಾಗ: ಚಾರುಕೇಶಿ **ತಾಳ: ಆದಿ**

ಎಂಥಾ ಚೆಲುವಗೆ ಮಗಳನು ಕೊಟ್ಟನು ।
ಗಿರಿರಾಜನು ನೋಡಮ್ಮಮ್ಮ ॥ ಪ

ಕಂತುಹರ ಶಿವ ಚೆಲುವನೆನ್ನುತ ಮೆಚ್ಚಿದನು ನೋಡಮ್ಮಮ್ಮ ॥ ಅ.ಪ ॥

ಮೋರೆ ಐದು ಮೂರುಕಣ್ಣು ವಿಪರೀತವನು ನೋಡಮ್ಮಮ್ಮ ।
ಕೊರಳೊಳು ರುಂಡಮಾಲೆಯ ಧರಿಸಿದ ಉರಗಭೂಷಣನ ನೋಡಮ್ಮಮ್ಮ ॥ 1

ತಲೆಯೆಂಬೋದು ನೋಡಿದರೆ ಜಟೆಹೊಳೆಯುತಿದೆ ನೋಡಮ್ಮಮ್ಮ ।
ಹಲವುಕಾಲಧ್ಧಿ ತಪಸಿರುದ್ರನ ಮೈಬೂದಿಯ ನೋಡಮ್ಮಮ್ಮ ॥ 2 ॥

ಭೂತಪ್ರೇತ ಪಿಶಾಚಗಳೆಲ್ಲ ಪರಿವಾರವು ನೋಡಮ್ಮಮ್ಮ ।
ಈತನ ನಾಮವು ಒಂದೇ ಮಂಗಳ ಮುಪ್ಪುಹರನ ನೋಡಮ್ಮಮ್ಮ ॥ 3 ॥

ಮನೆಯೆಂಬುವುದು ಸ್ಮಶಾನವು ನೋಡೆ ಗಜಚರ್ಮಾಂಬರವಮ್ಮಮ್ಮ ।
ಹಣವೊಂದಾದರೂ ಕೈಯೊಳಗಿಲ್ಲ ಕಪ್ಪರವನು ನೋಡಮ್ಮಮ್ಮ ॥ 4 ॥

ನಂದಿವಾಹನ ನೀಲಕಂಠನ ನಿರ್ಗುಣನ ನೋಡಮ್ಮಮ್ಮ ।
ಇಂದಿರೆರಮಣ ಶ್ರೀ **ಪುರಂದರವಿಠಲನ** ಹೊಂದಿದವನ ನೋಡಮ್ಮಮ್ಮ ॥ 5 ॥

****

59. ದೃಷ್ಠಿ ನಿನ್ನ ಪಾದದಲಿ ನೆಡೋಹಾಂಗೆ

ರಾಗ: ಮಧ್ಯಮಾವತಿ **ತಾಳ: ಆದಿ**

ದೃಷ್ಟಿ ನಿನ್ನ ಪಾದದಲಿ ನೆಡೋಹಾಂಗೆ ಧರೆ
ದುಷ್ಟಜನ ಸಂಗಗಳ ಬಿಡೋಹಾಂಗೆ ॥ ಪ ॥

ಕೆಟ್ಟಮಾತು ಕಿವಿಯಿಂದ ಕೇಳದ್ಹಾಂಗೆ ಮನ ॥
ಮುಟ್ಟಿಸುವ ನಿನ್ನಧ್ಯಾನ ಮಾಡೋಹಾಂಗೆ ॥ ಅ.ಪ ॥

ದಿಟ್ಟನಾಗಿ ಕೈಯನ್ನೆತ್ತಿ ಕೊಡೋ ಹಾಂಗೆ ಶ್ರೀಕೃಷ್ಣ ।
ನಿತ್ಯ ಪೂಜೆಯನ್ನು ಮಾಡೋಹಾಂಗೆ ॥
ಭ್ರಷ್ಟನಾಗಿ ನಾಲ್ವರೊಳು ತಿರುಗದ್ಹಾಂಗೆ ಬಲು ।
ಶಿಷ್ಟಜನರ ಸೇವೆಯನ್ನು ಮಾಡೋಹಾಂಗೆ ॥ 1 ॥

ಪುಟ್ಟಿಸಿದ ತಾಯಿತಂದೆಯೆಲೊ ನೀನು ಗೇಣು ।
ಹೊಟ್ಟೆಗಾಗಿ ದೈನ್ಯಪಡಬೇಕೆ ನಾನು ॥
ಪಟ್ಟೆ ಪಟ್ಟವಾಳಿ ಬೇಡಲಿಲ್ಲ ನಾನು ಎನ್ನ
ಹುಟ್ಟು ಅಭಿಮಾನಗಳ ಕಾಯೋ ನೀನು ॥ 2 ॥

ನೆಟ್ಟ ನೀರೊಳಗೆ ಈಸಲಾರೆ ನಾನು ಎತ್ತಿ ।
ಕಟ್ಟೆ ಸೇರಿಸಬೇಕಯ್ಯ ನೀನು ॥
ಬೆಟ್ಟದಂಥ ಪಾಪ ಹೊತ್ತಿರುವೆ ನಾನು ಅದ ।
ಸುಟ್ಟು ಬಿಡು **ಪುರಂದರವಿಠಲ** ನೀನು ॥ 3 ॥

****

60. ವೀರಹನುಮ ಬಹುಪರಾಕ್ರಮ

ರಾಗ: ಆನಂದಭೈರವಿ **ತಾಳ: ಆದಿ**

ವೀರಹನುಮ ಬಹುಪರಾಕ್ರಮ ।
ಸುಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ ॥ ಪ ॥

ರಾಮದೂತನೆನಿಸಿಕೊಂಡೆ ನೀ ರಾಕ್ಷಸರ ।
ವನವನ್ನೆಲ್ಲಾ ಕಿತ್ತು ಬಂದೆ ನೀ ॥
ಜಾನಕಿಗೆ ಮುದ್ರೆಯಿತ್ತು ಜಗತಿಕ್ಕೆಲ್ಲ ಹರುಷವಿತ್ತು ಚೂಡಾ ।
ಮಣಿಯ ರಾಮಗಿತ್ತು ಲೋಕಕೆ ಮುದ್ದೆನಿಸಿ ಮೆರೆವ ॥ 1 ॥

ಗೋಪೀಸುತನ ಪಾದ ಪೂಜಿಸಿ ।
ಗದೆಯ ಧರಿಸಿ ಬಕಾಸುರನ ಸಂಹರಿಸಿದೆ ॥
ದ್ರೌಪದಿಯ ಮೊರೆಯ ಕೇಳಿ ಮತ್ತೆ ಕೀಚಕನ್ನಕೊಂದು ।
ಭೀಮನೆಂಬ ನಾಮಧರಿಸಿ ಸಂಗ್ರಾಮಧೀರನಾಗಿ ॥ 2 ॥

ಮಧ್ವಗೇಹದಲ್ಲಿ ಜನಿಸಿ ನೀ ।
ಬಾಲ್ಯದಲ್ಲಿ ಮಸ್ಕರೀ ರೂಪಧರಿಸಿ ನೀ ॥
ಸತ್ಯವತಿಯ ಸುತನ ಭಜಿಸಿ ಸಮ್ಮುಖದಿ ಭಾಷ್ಯಮಾಡಿ ।
ಸಜ್ಜನರ ಪೊರೆವ ಮುದ್ದು **ಪುರಂದರವಿಠಲ** ॥ 3 ॥

****

61. ಧೂಪಾರತಿಯ ನೋಡುವ ಬನ್ನಿ

ರಾಗಮಾಲಿಕೆ **ತಾಳ: ಆದಿ**
ರಾಗ: ಬೃಂದಾವನ ಸಾರಂಗ

ಧೂಪಾರತಿಯ ನೋಡುವ ಬನ್ನಿ ನಮ್ಮ ।
ಗೋಪಾಲ ಕೃಷ್ಣದೇವರ ಪೂಜೆಯ ॥ ಪ ॥

ಮದ್ದಳೆ ಜಾಗಟೆ ತಾಳದಂಡಿಗೆ ಭೇರಿ ।
ತದ್ಧಿಮಿ ಧಿಮಿಕೆಂದು ಅತಿರಭಸದಲಿ ॥
ಅದ್ಭುತ ಶಂಖನಾದಗಳಿಂದ ನಮ್ಮ ।
ಪದ್ಮನಾಭದೇವರ ದಿವ್ಯಪೂಜೆಯ ॥ 1 ॥

ರಾಗ: ಪುನ್ನಾಗವರಾಳಿ
ಅಗರು ಚಂದನ ಧೂಪ ಗುಗ್ಗುಳ ಸಾಂಬ್ರಾಣಿ ।
ಮಘಮಘಿಸುವ ಧೂಪಾರತಿಯ ॥
ಮಿಗಿಲಾದ ಏಕಾರತಿ ಭಕ್ತಿಯಿಂದಲಿ ನಮ್ಮ ।
ಜಗನ್ನಾಥವಿಠಲ ದೇವರಪೂಜೆಯ ॥ 2 ॥

ಜಂಜೂಟಿ
ಹರಿಸರ್ವೋತ್ತಮ ಭಕ್ತರಾಧಾರನ ।
ಪರಮ ಮಂಗಳಮೂರ್ತಿ ಪಾವನನ
ಪರದೈವವಾದಂಥ ಶ್ರೀರಂಗನಾಥನ ।
ಪುರಂದರವಿಠಲ ದೇವರ ಪೂಜೆಯ ॥ 3 ॥

****

62. ಶರಣು ಬೆನಕನೆ ಕನಕರೂಪನೆ

ರಾಗ: ಷಣ್ಮುಖ ಪ್ರಿಯ **ತಾಳ: ಆದಿ**

ಶರಣು ಬೆನಕನೆ ಕನಕರೂಪನೆ ।
ಕಾಮಿನೀಸಂಗದೂರನೆ ॥ ಪ ॥

ಶರಣು ಸಾಂಬನ ಪ್ರೀತಿಪುತ್ರನೆ ।
ಶರಣುಜನರಿಗೆ ಮಿತ್ರನೆ ॥ ಅ.ಪ ॥
ಏಕದಂತನೆ ಲೋಕಖ್ಯಾತನೆ ।
ಏಕವಾಕ್ಯಪ್ರವೀಣನೆ ॥
ಏಕವಿಂಶತಿ ಪತ್ರಪೂಜಿತ ।
ಅನೇಕವಿಘ್ನವಿನಾಶಕ ॥ 1 ॥

ಲಂಬಕರ್ಣನೆ ನಾಸಿಕಾಧರನೆ ।
ಗಾಂಭೀರ್ಯಯುತ ಗುಣಸಾರನೆ ॥
ಕಂಬುಕಂಧರ ಇಂದುಮೌಳಿಜ ।
ಚಂದನ ಚರ್ಚಿತಾಂಗನೆ ॥ 2 ॥

ಚತುರ್ಬಾಹು ಚರಣತೊಡವಿನ ।
ಚತುರ ಆಯುಧಧಾರನೆ ॥
ಮತಿಯವಂತನೆ ಮಲಿನಜನಿತನೆ ।
ಅತಿಯ ಮಧುರಾಹಾರನೆ ॥ 3 ॥

ವಕ್ರತುಂಡನೆ ಮಹಾಕಾಯನೆ ।
ಅರ್ಕಕೋಟಿ ಪ್ರದೀಪನೆ ॥
ಚಕ್ರಧರ ಹರಬ್ರಹ್ಮ ಪೂಜಿತ
ರಕ್ತವಸ್ತ್ರಾಧಾರನೆ ॥ 4 ॥

ಮೂಷಿಕಾಸನ ಶೇಷಭೂಷಣ ।
ಅಶೇಷ ವಿಘ್ನವಿನಾಶಕ ॥
ದಾಸ **ಪುರಂದರ**ವಿಠಲನ ।
ಈಶಗುಣಗಳ ಸತತ ಪೊಗಳುವೆ ॥ 5 ॥

****

63. ದೇವಕಿನಂದನ ಹರಿ ವಾಸುದೇವ

ರಾಗ: ಸಾರಂಗ **ತಾಳ: ಆದಿ**

ದೇವಕಿನಂದನ ಹರಿ ವಾಸುದೇವ ।
ದೇವಕಿನಂದನ ಹರಿವಾಸುದೇವ ॥ ಪ ॥

ಕಂಸಮರ್ದನ ಹರಿ ಕೌಸ್ತುಭಾಭರಣ ।
ಹಂಸವಾಹನ ಮುಖವಂದಿತಚರಣ ॥ 1 ॥

ಮಕರಕುಂಡಲಧರ ಶತರವಿಭಾಸ ।
ರುಕ್ಮಿಣಿವಲ್ಲಭ ಸಕಲಲೋಕೇಶ ॥ 2 ॥

ನಿಗಮೋದ್ಧಾರ ನವನೀತಚೋರ ।
ಖಗಪತಿವಾಹನ ಜಗದೋದ್ಧಾರ ॥ 3 ॥

ಶಂಖಚಕ್ರಧರ ಶ್ರೀಗೋವಿಂದ ।
ಪಂಕಜಲೋಚನ ಪೂರ್ಣಾನಂದ ॥ 4 ॥

ವರವೇಲಾಪುರ ಚೆನ್ನ ಪ್ರಸನ್ನ ।
ಪುರಂದರವಿಠಲ ಸದ್ಗುಣ ಪರಿಪೂರ್ಣ ॥ 5 ॥

****

64. ಏನೇನು ದಾನವ ಮಾಡಲಿ

ರಾಗ: ಪೂರ್ವಿಕಲ್ಯಾಣಿ ತಾಳ: ಆದಿ

ಏನೇನು ದಾನವ ಮಾಡಲಿ ।
ಹರಿಧ್ಯಾನಕ್ಕೆ ಸಮನಾದ ದಾನಗಳುಂಟೆ ॥ ಪ ॥

ಶತಕೋಟಿ ಕನ್ಯಾಪ್ರದಾನವ ಮಾಡಲಿ ।
ಮತಿಶುದ್ಧನಾಗಿ ಭೂದಾನವ ಮಾಡಲಿ ॥
ಅತಿಶಯದ ಉದಕದಾನವ ಮಾಡಲಿ ।
ಶ್ರುತಿರಮಣನ ಧ್ಯಾನಕೆ ಸರಿಯುಂಟೆ ॥ 1 ॥

ದಿನಕೊಂದು ಸಾವಿರ ಗೋದಾನ ಮಾಡಲಿ ।
ಅನುದಿನ ಅನ್ನದಾನವ ಮಾಡಲಿ ।
ಘನವಾಗಿ ಸುವರ್ಣದಾನವ ಮಾಡಲಿ ।
ವನಜನಾಭನ ಧ್ಯಾನಕೆ ಸರಿಯುಂಟೆ ॥ 2 ॥

ಉತ್ತಮವಾದ ವಸ್ತ್ರದಾನವ ಮಾಡಲಿ ।
ಮುತ್ತು ಮಾಣಿಕ್ಯ ದಾನವ ಮಾಡಲಿ ॥
ಉನ್ನತ ವಿದ್ಯಾಪ್ರದಾನವ ಮಾಡಲಿ ।
ಚಿತ್ತಜಪಿತನ ಧ್ಯಾನಕೆ ಸರಿಯುಂಟೆ ॥ 3 ॥

ಸಾದರದಿ ತರ್ಕ ವ್ಯಾಕರಣ ಪೇಳಲಿ ।
ವೇದ ಗೀತ ಭಾಷ್ಯವನೋದಲಿ ॥
ಸಾಧಿಸಿ ಸ್ನಾನ ಜಪಂಗಳ ಮಾಡಲಿ ।
ಮಾಧವನ ಧ್ಯಾನಕೆ ಸರಿಯುಂಟೆ ॥ 4 ॥

ನಾನಾ ತೀರ್ಥಗಳಲಿ ಸ್ನಾನವ ಮಾಡಲಿ ।
ಕಾನನದೊಳಗೆ ತಪವಮಾಡಲಿ ॥
ಜ್ಞಾನದಿಂದ ಶಾಸ್ತ್ರಾರ್ಥವ ಮಾಡಲಿ ನಿನ್ನ ।
ಧ್ಯಾನಕೆ ಸರಿಯುಂಟೆ **ಪುರಂದರವಿಠಲ** ॥ 5 ॥

****

65. ಮಂದಮತಿಯು ನಾನು

ರಾಗ: ಹಂಸನಾದ **ತಾಳ: ಖಂಡಛಾಪು**

ಮಂದಮತಿಯು ನಾನು ಮದನಜನಕನು ನೀನು ।
ಕುಂದುಗಳ ಎಣಿಸದೆ ದಯಮಾಡಿ ಸಲಹೋ ॥ ಪ ॥

ಪಾಪಕರ್ತನು ನಾನು ಪಾಪನಾಶನು ನೀನು ।
ಕೋಪ ಮದ ಮತ್ಸರದಿ ಸುಳಿಯುವೆನು ನಾನು ॥
ತಾಪವನು ತರಿದು ನಿರ್ಭಯವಮಾಡುವೆ ನೀನು ।
ರೂಪಛಾಯಕೆ ಮರುಳುಗೊಂಬೆನೋ ನಾನು ॥ 1 ॥

ಶರಣರಕ್ಷಕ ನೀನು ಪರಮ ಪಾತಕಿ ನಾನು ।
ದುರಿತಪರ್ವತವ ಪರಿಹರಿಪೆ ನೀನು ॥
ಮರುಳುಗೊಂಬೆಯು ನಾನು ಅರಿತು ರಕ್ಷಿಪೆ ನೀನು
ಗರುವಹಂಕಾರಿ ನಾನು ಅಗಮ್ಯ ನೀನು ॥ 2 ॥

ಮಂದಭಾಗ್ಯನು ನಾನು ಇಂದಿರಾಪತಿ ನೀನು ।
ಹಿಂದುಮುಂದಿನ ಸುದ್ದಿ ಅರಿಯದವ ನಾನು ॥
ತಂದೆ ಶ್ರೀ **ಪುರಂದರವಿಠಲ**ರಾಯನೆ ।
ಎಂದೆಂದಿಗೂ ನಿನ್ನ ಭಕ್ತರನು ಸಲಹೋ ॥ 3 ॥

****

66. ಸಿಂಹ ರೂಪನಾದ ಶ್ರೀಹರಿ

ರಾಗ: ಕೇದಾರ ತಾಳ: ಆದಿ

ಸಿಂಹರೂಪನಾದ ಶ್ರೀಹರಿ ।
ಭೋ ನಾಮಗಿರೀಶನೆ ॥ ಪ ॥

ಒಮ್ಮನದಿಂದ ನಿಮ್ಮನು ಭಜಿಪರ
ಸಮ್ಮತದಿಂದ ಕಾಯ್ವನೆಂದ ಹರಿ ॥ ಅ.ಪ ॥

ತರಳನು ಕರೆಯೆ ಸ್ತಂಭವು ಬಿರಿಯೆ ।
ಉಗ್ರರೂಪವ ತೋರಿದನು ॥
ಕರುಳನು ಬಗೆದು ತನ್ನೊಕರಳೊಳಗಿಟ್ಟು ।
ಭಕುತನ ಸಲಹಿದ ಶ್ರೀನರಸಿಂಹನು ॥ 1 ॥

ಭಕ್ತರೆಲ್ಲರು ಕೂಡಿ ಬಲುದೂರ ಓಡಿ ।
ಪರಮ ಸಾಂತ್ವನವ ಬೇಡಿದರು ॥
ಕರೆದು ತಾನ್ ಸಿರಿಯನು ತೊಡೆಯಳ್ಳುಳ್ಳಿರಿಸಿದ ।
ಪರಮ ಹರುಷವನು ಪೊಂದಿದ ಶ್ರೀಹರಿ ॥ 2 ॥

ಜಯ ಜಯ ಜಯವೆಂದು ಹೂವನು ತಂದು ।
ಹರಿ ಹರಿ ಹರಿ ಎಂದು ಸುರರೆಲ್ಲ ಸುರಿಸೆ ॥
ಭಯನಿವಾರಣ ಭಾಗ್ಯಸ್ವರೂಪನೆ ।
ಪರಮ ಪುರುಷ ಹರಿ **ಪುರಂದರವಿಠಲನೆ** ॥ 3 ॥

****

67. ಎಚ್ಚರದಲಿ ನಡೆ ಮನವೆ

ರಾಗ: ಮುಖಾರಿ ತಾಳ: ಆದಿ

ಎಚ್ಚರದಲಿ ನಡೆ ಮನವೆ ಮುದ್ದು ।
ಅಚ್ಯುತದಾಸರ ಒಡಗೂಡಿ ಬರುವೆ ॥ ಪ ॥

ಅನ್ನದಾನವ ಮಾಡೋದಿಲ್ಲಿ ।
ಮೃಷ್ಟಾನ್ನ ಭೋಜನವ ತಂದಿಡುವರು ಅಲ್ಲಿ ॥
ಅನ್ಯಾಯ ಮಾಡುವುದಿಲ್ಲಿ ।
ನಿನ್ನ ಬೆನ್ನ ಚರ್ಮವ ಸೀಳಿ ತಿನಿಸುವರಲ್ಲಿ ॥ 1 ॥

ತಂದೆ ತಾಯ್ಗಳ ಪೂಜೆ ಇಲ್ಲಿ ದೇ ।
ವೇಂದ್ರನ ಸಭೆಯನು ತೋರುವರಲ್ಲಿ ॥
ತಂದೆತಾಯ್ಗಳ ಬಯ್ವುದಿಲ್ಲಿ ಹುಲ್ಲು ।
ದೊಂದೆಯ ಕಟ್ಟಿ ಸುಡಿಸುವರಲ್ಲಿ ॥ 2 ॥

ಹೆಣ್ಣು ಹೊನ್ನನು ಬಯಸೋದು ಇಲ್ಲಿ ।
ನಿನ್ನ ಕಣ್ಣಿಗೆ ಸುಣ್ಣವ ತುಂಬುವರಲ್ಲಿ ॥
ಘನ ಸುಜ್ಞಾನವು ಇಲ್ಲಿ ।
ಪ್ರಸನ್ನ **ಪುರಂದರವಿಠಲ** ಪಾಲಿಪನಲ್ಲಿ ॥ 3 ॥

****

68. ಮನವ ಶೋಧಿಸಬೇಕು ನಿಚ್ಚ

ರಾಗ: ನಾಟಕುರಂಜಿ **ತಾಳ: ಆದಿ**

ಮನವ ಶೋಧಿಸಬೇಕು ನಿಚ್ಚ ।
ದಿನದಿನ ಮಾಡುವ ಪಾಪಪುಣ್ಯದ ವೆಚ್ಚ ॥ ಪ ॥

ಧರ್ಮ ಅಧರ್ಮಗಳ ವಿಂಗಡಿಸಿ ।
ಅಧರ್ಮದ ನರಗಳ ಬೇರ ಕತ್ತರಿಸಿ ॥
ನಿರ್ಮಲಾಚಾರದಿ ಚರಿಸಿ ಪರಬೊಮ್ಮ ।
ಮೂರುತಿ ಪಾದಕಮಲವ ಭಜಿಸಿ ॥ 1 ॥

ತನುವ ಖಂಡಿಸಿ ಒಮ್ಮೆ ಮಾಣೋ ।
ನಿನ್ನ ಮನವ ದಂಡಿಸಿ ಪರಮಾತ್ಮನ ಕಾಣೋ ॥
ಕೊನೆಗೆ ನಿನ್ನೊಳು ನೀ ಜಾಣೋ ಮುಕ್ತಿ ।
ನಿನಗೆ ದೂರಿಲ್ಲವೊ ಒಂದೇ ಗೇಣೊ ॥ 2 ॥

ಆತನ ಭಕುತರಿಗೆ ಕೇಡಿಲ್ಲ ಅವ ।
ಪಾತಕ ಪತಿತ ಸಂಗವ ಮಾಡ್ವನಲ್ಲ ॥
ನೀತಿವಂತರು ಕೇಳಿರೆಲ್ಲ ನಮಗಾತನೆ ಗತಿ ।
ಯಾತ **ಪುರಂದರವಿಠಲ** ॥ 3 ॥

****

69. ಮುಖ್ಯಪ್ರಾಣ ಮೂಲಗುರುವೆ

ರಾಗ: ಸಾರಮತಿ **ತಾಳ: ಆದಿ**

ಮುಖ್ಯಪ್ರಾಣ ಎನ್ನ ಮೂಲಗುರುವೆ ।
ರಕ್ಕಸಾಂತಕ ಶ್ರೀರಾಮನ ನಿಜದಾಸ ॥ ಪ ॥

ತಂದೆಯು ನೀನೆ ಎನಗೆ ತಾಯಿಯು ನೀನೆ ಎನಗೆ ।
ಬಂಧುವು ನೀನೆ ಎನಗೆ ಬಳಗವು ನೀನೆ ಎನಗೆ ।
ಎಂದೆಂದಿಗೂ ನಮ್ಮೆಲ್ಲರ ರಕ್ಷಿಪನು ನೀನೆ ॥ 1 ॥

ತಾತನೀನೆ ಎನಗೆ ಕರ್ತನೀನೆ ಎನಗೆ ।
ವಿತ್ತನೀನೆ ಎನಗೆ ವಿಭವನೀನೆ ಎನಗೆ ।
ಸತ್ಯನೀನೆ ಎನಗೆ ಸದಾಚಾರವು ನೀನೆ ॥ 2 ॥

ಸುಖವುನೀನೆ ಎನಗೆ ಸುಲಭವು ನೀನೆ ಎನಗೆ ।
ಏಕಾಂತ **ಪುರಂದರವಿಠಲ**ನು ನೀನೆ ।
ಭಕುತರಿಗೆ ನಿಜದಾಸನು ನೀನೆ ॥ 3 ॥

****

70. ಪಂಕಜ ಮುಖಿಯರೆಲ್ಲರು

ರಾಗ: ಧನ್ಯಾಸಿ **ತಾಳ: ಆದಿ**

ಪಂಕಜಮುಖಿಯರೆಲ್ಲರು ಶ್ರೀಲಕ್ಷ್ಮೀ ।
ವೆಂಕಟರಮಣಗಾರುತಿ ಎತ್ತಿರೆ ॥ ಪ ॥

ಮಚ್ಛಾವತಾರಗೆ ಮಂದರೋದ್ಧಾರಗೆ ।
ಅಚ್ಚರಿಯಿಂದ ಭೂಮಿ ತಂದವಗೆ ॥
ಹೆಚ್ಚಾದ ಉಕ್ಕಿನ ಕಂಭದಿಂದಲಿ ಬಂದ ।
ಲಕ್ಷ್ಮೀನರಸಿಂಹಗಾರುತಿ ಎತ್ತಿರೆ ॥ 1 ॥

ವಾಮನರೂಪಿಲಿ ದಾನ ಬೇಡಿದವಗೆ ।
ಪ್ರೇಮದಿ ಕೊಡಲಿಯ ಪಿಡಿದವಗೆ ॥
ರಾಮಚಂದ್ರನಾಗಿ ದಶಶಿರನನು ಕೊಂದ ।
ಸ್ವಾಮಿ ಶ್ರೀಕೃಷ್ಣಗಾರುತಿ ಎತ್ತಿರೆ ॥ 2 ॥

ಬತ್ತಲೆ ನಿಂತವಗೆ ಬೌದ್ಧಾವತಾರಗೆ ।
ಉತ್ತಮ ಅಶ್ವವನೇರಿದವಗೆ ॥
ಭಕ್ತರ ಸಲಹುವ **ಪುರಂದರವಿಠಲ**ಗೆ ।
ಮುತ್ತೈದೆಯರು ಆರತಿ ಎತ್ತಿರೆ ॥ 3 ॥

****

71. ಜಯಮಂಗಳಂ ನಿತ್ಯ ಶುಭಮಂಗಳಂ

ರಾಗ: ಅಭೋಗಿ **ತಾಳ: ಆದಿ**

ಜಯಮಂಗಳಂ ನಿತ್ಯ ಶುಭಮಂಗಳಂ ।
ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥

ಮಂಗಳವು ಮಧುಕೈಟಭ ಅಸುರಮರ್ದನಗೆ ।
ಮಂಗಳವು ಮದನಜ ವೇಣುಗೋಪಾಲಗೆ ॥
ಮಂಗಳವು ಕರುಣಾಂತರಂಗ ಶ್ರೀರಂಗಗೇ ।
ಮಂಗಳವು ಸಿಂಹಾದ್ರಿ ನರಸಿಂಹಗೆ ॥ 1 ॥

ಶ್ರೀ ವತ್ಸಲಾಂಛನಗೆ ಸಿರಿದೇವಿ ಅರಸನಿಗೆ ।
ಗೋವರ್ಧನೋದ್ಧಾರ ಗೋವಿಂದಗೆ ॥
ಮಾವ ಕಂಸನ ಕೊಂದ ಮಕರಕುಂಡಲಧರಗೆ ।
ಭಾವಜನಯ್ಯ ಚಿನ್ಮಯಮೂರ್ತಿಗೆ ॥ 2 ॥

ಧರೆಯೊಳಗೆ ನಿಜಭಕ್ತ ನರಸಿಂಹದಾಸರಿಗೆ ।
ಬಯಸಿದ ವರಕೊಡುವ ನರಸಿಂಹಗೆ ॥
ಮುರವೈರಿ ಕೃಷ್ಣನಿಗೆ ಮೂಲೋಕದೊಡೆಯನಿಗೆ ।
ವರಕಂಚಿ ಅರಸ ಶ್ರೀವರದಪತಿಗೆ ॥ 3 ॥

ಅಂಬುಜನಾಭನಿಗೆ ಅಖಿಲದೇವೇಶಗೆ ।
ಶಂಬರಾರಿಯಜಮಿಳಾವಂದ್ಯನಿಗೆ ॥
ಎಂಬತ್ತುನಾಲ್ಕು ಲಕ್ಷದಜೀವರಾಶಿಗಳಿಗೆ ।
ಬೊಂಬೆಗಳಮಾಡಿ ಕುಣಿಸುವದೇವಗೆ ॥ 4 ॥

ಪನ್ನಗಶಯನನಿಗೆ ಪಾವನಚರಿತಗೆ ।
ಸನ್ನುತಾನಂತ ಸದ್ಗುಣಪೂರ್ಣಗೆ ॥
ಎನ್ನೊಡೆಯ **ಪುರಂದರವಿಠಲ** ರಾಯನಿಗೆ ।
ತನ್ನ ನಂಬಿದವರನು ಬಿಡದೆ ಸಲಹುವಗೆ ॥ 5 ॥

****

72. ಹರಿಕಥಾ ಶ್ರವಣಮಾಡೋ

ರಾಗ: ಯಮುನಾ ಕಲ್ಯಾಣಿ **ತಾಳ: ಆದಿ**

ಹರಿಕಥಾ ಶ್ರವಣಮಾಡೋ, ಪಾಡೋ ।
ಹರಿಕಥಾ ಶ್ರವಣಮಾಡೋ ॥ ಪ ॥

ಪಥ ವೈಕುಂಠಕಿದು ನೋಡೋ ॥ ಅ.ಪ ॥

ಸರಸಿಜನಾಭನ ಸರ್ವದಾ ಹೊಗಳುತ ।
ದುರಿತ ದೂರಕೀಡ್ಯಾಡೋ ॥ 1 ॥

ಜ್ಞಾನ ಭಕುತಿ ವೈರಾಗ್ಯವೀವ ನಮ್ಮ ।
ಆನಂದತೀರ್ಥರ ಪಾಡೋ ॥ 2 ॥
ಪರಮಪುರುಷ ಶ್ರೀ **ಪುರಂದರವಿಠಲನ**
ಚರಣಕಮಲದಲಿ ಕೂಡೋ ॥

****

73. ಇರಬೇಕು ಹರಿದಾಸ ಸಂಗ

ರಾಗ: ಅಭೇರಿ **ತಾಳ: ಖಂಡಛಾಪು**

ಇರಬೇಕು ಹರಿದಾಸಸಂಗ ಇರಬೇಕು ॥ ಪ ॥

ಪರಮಜ್ಞಾನಿಗಳ ದಯ ಸಂಪಾದಿಸಲು ಬೇಕು ॥ ಅ.ಪ ॥

ಅತಿಜ್ಞಾನಿಯಾಗಬೇಕು ಹರಿಕಥೆಯ ಕೇಳಬೇಕು ।
ಯತಿಗಳ ಪಾದಕ್ಕೆ ಎರಗಬೇಕು ॥
ಸತಿಸುತರು ಇರಬೇಕು ಅತಿಮೋಹ ಬಿಡಬೇಕು ।
ಮತಿಯ ಬಿಡದೆ ಹರಿಯ ಪೂಜಿಪರ ಸಂಗ ॥ 1 ॥

ಹರಿಯೆ ಪರನೆನಬೇಕು ಸುರ ಹರ ವಿರಂಚಿಗಳ ಪರಿಯ ।
ತಿಳಿಯಲು ಬೇಕು ತಾರತಮ್ಯದಿಂದಾ ॥
ಅರಿಯದಿದ್ದರೆ ಗುರುಹಿರಿಯರನು ಕೇಳಬೇಕು ।
ಪರಮ ಆನಂದದಿಂದ ಓಲಾಡುವರ ಸಂಗ ॥ 2 ॥

ಏಕಾಂತವಿರಬೇಕು ಲೋಕವಾರ್ತೆ ಬಿಡಬೇಕು ।
ಲೋಕೈಕನಾಥನಾ ಭಜಿಸಬೇಕು ॥
ಸಾಕು ಸಂಸಾರವೆಂಬ ಕಕುಲಾತಿ ಬಿಡಬೇಕು ।
ಶ್ರೀಕಾಂತ **ಪುರಂದರವಿಠಲ** ದಾಸರ ಸಂಗ ॥ 3 ॥

****

74. ಮಹದಾದಿ ದೇವ ನಮೋ

ರಾಗ: ಪೂರ್ವಿಕಲ್ಯಾಣಿ **ತಾಳ: ಆದಿ**

ಮಹದಾದಿದೇವ ನಮೋ ಮಹಾಮಹಿಮ ನಮೋ ॥ ಪ ॥

ಪ್ರಹ್ಲಾದವರದನಾದ ಅಹೋಬಲ ನಾರಸಿಂಹ ॥ ಅ.ಪ ॥

ಧರಣಿಗುಬ್ಬಸವಾಗೆ ತಾರಾಪಥವು ನಡುಗೆ ।
ಸುರರು ಕಂಗೆಟ್ಟೋಡೆ ನಭವ ಬಿಟ್ಟು॥
ತರುಗಿರಿಗಳಲ್ಲಾಡೆ ಶರಧಿಗಳು ಕುದಿದುಕ್ಕೆ ।
ಉರಿಯನುಗುಳುತ ಉದ್ಭವಿಸಿದೆ ನಾರಸಿಂಹ ॥ 1 ॥

ಸಿಡಿಲಿನಂತೆ ಗರ್ಜಿಸುತ ಕುಡಿಯನಾಲಿಗೆ ಚಾಚಿ ।
ಅಡಿಗಡಿಗೆ ಲಂಘಿಸುತ ಕಡುಕೋಪದಿಂದ ॥
ಮುಡಿಪಿಡಿದು ರಕ್ಕಸನ ಕೆಡಹಿ ನಖದಿಂದೊತ್ತಿ ।
ಬಿಡದೊಡಲ ಬಗಿದೆ ಕಡುಗಲಿ ನಾರಸಿಂಹ ॥ 2 ॥

ಸರಸಿಜೋದ್ಭವ ಹರ ಪುರಂದರಾದಿ ।
ಸಮಸ್ತ ಸುರರು ಅಂಬರದಿ ಪೂಮಳೆಯ ಕರೆಯೆ ॥
ಸಿರಿಸಹಿತ ಗರುಡಾದ್ರಿಯಲಿ ನಿಂತು ಭಕುತನ
ಕರುಣಿಸಿದೆ **ಪುರಂದರವಿಠಲ** ನಾರಸಿಂಹ ॥ 3 ॥

****

75. ಹರಿಯ ಬಿಟ್ಟವಗೆ ಗತಿಯಿಲ್ಲ

ರಾಗ: ರೇವತಿ **ತಾಳ: ಆದಿ**

ಹರಿಯ ಬಿಟ್ಟವಗೆ ಗತಿಯಿಲ್ಲ ।
ಮಾರುತಿ ಮರೆತವಗೆ ಸಾಧನವಿಲ್ಲ ॥ ಪ ॥

ಹರಿ ಒಲಿದವರಿಗೆ ಹನುಮ ಒಲಿದ ।
ಹನುಮ ಒಲಿಯದಿರೆ ಹರಿ ಒಲಿಯಲಿಲ್ಲ ॥
ಹರಿಸಂಕಲ್ಪವೆಲ್ಲ ಹನುಮ ಬಲ್ಲ ।
ಹನುಮ ಬಿಟ್ಟದನು ಹರಿ ತಾನೊಲ್ಲ ॥ 1 ॥

ಮೂರವತಾರದಿ ಬಂದು ಮುಕ್ತಿ ।
ಸೇರೋ ಮಾರ್ಗವತೋರಿದನಿಂದು ॥
ಸಾರಿ ಜನರಿಗೆ ಅಂದುಮುಕ್ತಿ ।
ದಾರಿಗಳೆಲ್ಲ ತೋರಿದನಿಂದು ॥ 2 ॥

ಶತಕಲ್ಪಗಳಲ್ಲಿ ಸದಾ ಈತ ಹಂಸ ।
ಮಂತ್ರಗಳೆಲ್ಲ ಪಠಿಸುವ ಖ್ಯಾತ ॥
ತತ್ತ್ವೇಶ್ವರರಿಗನುಕೂಲನೀತ ।
ಪುರಂದರವಿಠಲನ ನಿಜದೂತ ॥ 3 ॥

****

76. ಜಯಮಂಗಳಂ ನಿತ್ಯ

ರಾಗ: ಸುರಟಿ **ತಾಳ: ಆದಿ**

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥

ಗುರುಭಕ್ತಿಯೆಂತೆಂಬ ಗಮಕದೋಲೆಯನ್ನಿಟ್ಟು ।
ಹರಿಧ್ಯಾನವೆಂಬ ಆಭರಣವಿಟ್ಟು ।
ಪರತತ್ತ್ವವೆಂಬ ಪಾರಿಜಾತವ ಪಿಡಿದು ।
ಪರಮಾತ್ಮ ಹರಿಗೆ ಆರತಿ ಎತ್ತಿರೆ ॥ 1 ॥

ಆದಿಮೂರುತಿಯೆಂಬ ಅಚ್ಚ ಅರಿಸಿನ ಬಳಿದು ।
ವೇದಮುಖವೆಂಬ ಕುಂಕುಮವನಿಟ್ಟು ॥
ಸಾಧುಸಜ್ಜನಸೇವೆಯೆಂಬ ಸಂಪಿಗೆ ಮುಡಿದು ।
ಮೋದದಿಂ ಲಕ್ಷ್ಮೀಗಾರತಿ ಎತ್ತಿರೆ ॥ 2 ॥

ತನುವೆಂಬ ತಟ್ಟೆಯಲಿ ಮನದಸೊಡಲನಿರಿಸಿ ।
ಘನಶಾಂತಿಯೆಂಬ ಆಜ್ಯವನು ತುಂಬಿ ॥
ಆನಂದವೆಂತೆಂಬ ಬತ್ತಿಯನು ಹಚ್ಚಿಟ್ಟು ।
ಚಿನುಮಯ ಹರಿಗೆ ಆರತಿಯೆತ್ತಿರೆ ॥ 3 ॥

ಕಾಮಾಂಧವಳಿದಂಥ ಕಮಲದ ತಟ್ಟೆಯಲಿ ।
ನೇಮವೆಂತೆಂಬ ಹರಿದ್ರವನು ಕದಡಿ ॥
ಆ ಮಹಾ ಸುಜ್ಞಾನವೆಂಬ ಸುಣ್ಣವ ಬೆರೆಸಿ ।
ಸೋಮಧರ ವರದಗಾರತಿಯೆತ್ತಿರೇ ॥ 4 ॥

ನಾರದವಂದ್ಯಗೆ ನವನೀತಚೋರಗೆ ।
ನಾರಾಯಣಗೆ ಶ್ರೀ ವರಲಕ್ಷ್ಮೀಗೆ ॥
ಸಾರಿದವರನು ಪೊರೆವ **ಪುರಂದರವಿಠಲಗೆ** ।
ನೀರಜಮುಖಿಯರಾರತಿಯೆತ್ತಿರೆ ॥ 5 ॥

****

77. ಜಯತು ಗೋಕುಲವಾಸ

ರಾಗಮಾಲಿಕೆ

ರಾಗ: ಶಂಕರಾಭರಣ **ತಾಳ: ಝಂಪೆ**

ಜಯತು ಗೋಕುಲವಾಸ ದೈತ್ಯಪೂತನಿನಾಶ ।
ಜಯತು ಕ್ಲೇಶವಿನಾಶ ಸರ್ವಲೋಕೇಶ ॥
ಜಯತು ರುಕ್ಮಿಣಿನಾಥ ಅನಾಥರಿಗೆನಾಥ ।
ಜಯತು ಮಧುರಾನಾಥ ಪಾಲಿಸೋ ದಾತಾ ॥ 1 ॥

ರಾಗ: ಹಿಂದೋಳ

ಜಯತು ಪಾವನಗಾತ್ರ ಚಾರುತರ ಸುಚರಿತ್ರ ।
ಜಯತು ಜಲಜಾನೇತ್ರ ಮುನಿನುತಿಪಾತ್ರ ॥
ಜಯತು ತುಲಸೀಹಾರ ದಿವ್ಯದೊಂದಾಕಾರ ।
ಜಯತು ನಿನ್ನ ವಿಚಾರ ಅದು ಬಲು ಅಪಾರ ॥ 2 ॥

ರಾಗ: ಮಧ್ಯಮಾವತಿ

ಜಯತು ಪಾಂಡವ ಪಕ್ಷ ದುಂಟಯೋಧನ ಶಿಕ್ಷ ।
ಜಯತು ಲೋಕಾಧ್ಯಕ್ಷ ಧರ್ಮಸಂರಕ್ಷ ॥
ಜಯತು ಶ್ರೀಭೂಲೋಲ ಭಕ್ತಜನ ಪರಿಪಾಲ ।
ಜಯತು ಪಾವನಶೀಲ **ಪುರಂದರವಿಠಲ** ॥ 3 ॥

****

78. ಹಕ್ಕಿ ಚಿಲಿಪಿಲಿ ಎನ್ನಲಿ,

ರಾಗ: ಮಲಹರಿ **ತಾಳ: ಖಂಡಛಾಪು**

ಹಕ್ಕಿ ಚಿಲಿಪಿಲಿ ಎನ್ನಲಿ, ಹರಿಯೇ ।
ಕಾಗೆ ಕಾ ಕಾ ಎನ್ನಲಿ ॥ ಪ ॥

ಕೋಗಿಲೆ, ಸ್ವರಗೈಯ್ಯಲಿ ಕೃಷ್ಣಾ ।
ನಾಗ ಸಂಪಿಗೆ ಅರಳಲಿ ॥ ಅ.ಪ ॥

ಎದ್ದು ಮುಖ ತೊಳೆ ಏಳು, ತಿದ್ದು ಕಸ್ತೂರಿ ತಿಲಕ ।
ಮುದ್ದೆ ಬೆಣ್ಣೆಯ ನಿನಗೆ ನಾನು ಕೊಡುವೆ ॥
ಹೊದ್ದಿದ್ದ ಕತ್ತಲು ಹರಿದು ಬೆಳಗಾಯಿತು
ನಿದ್ದೆ ತಿಳಿದೆದ್ದು ಕೂಡಯ್ಯ ಶ್ರೀಕೃಷ್ಣ ॥ 1 ॥

ಬಿಸಿಯ ದೋಸೆಯ ಹುಯ್ದು ಮೊಸರುಗಡ್ಡೆಯ ಬಡಿಸಿ ।
ಹೊಸದಾದ ಹಸುವಿನ ತುಪ್ಪವನ್ನು ॥
ಹಸನಾದಕಲಸನ್ನ ಹೆಸರುಬೇಳೆ ಹುಗ್ಗಿ ।
ಹಸುಳೆ ನಿನಗಾರೋಗಣೆ ಮಾಡುವೆ ॥ 2 ॥

ಎಂದು ಇಲ್ಲದ ಹಟವ ಇಂದೇಕೆ ಮಾಡುವೆ ।
ಕಂದರೊಳಗತಿ ನೀನು ಹರಿಯಾದೆಯಾ ॥
ಇಂದು ತರಳನೆ ನಿನ್ನ ಎತ್ತಿಕೊಳ್ಳುವರಿಲ್ಲ ।
ಕಂದ ಅಳಬೇಡವೊ, **ಪುರಂದರವಿಠಲ** ॥ 3 ॥

****

79. ನರಸಿಂಹನಪಾದ ಭಜನೆಯ ಮಾಡೋ

ರಾಗ: ಶಂಕರಾಭರಣ **ತಾಳ: ಆದಿ**

ನರಸಿಂಹನಪಾದ ಭಜನೆಯ ಮಾಡೋ ।
ದುರಿತಪರ್ವತವ, ಖಂಡಿಸುವ, ಕುಲಿಶದಂತೆ ॥ ಪ ॥

ತರಳನ ಮೊರೆಕೇಳಿ ತ್ವರಿತದಿಂದಲಿ ಬಂದು ।
ದುರಳನ ಕರುಳ ತನ್ನ ಕೊರಳಲಿ ಧರಿಸಿದ ॥ 1 ॥

ನರಸುರರೆಲ್ಲ ನಡುಗಲು ಸಿರಿದೇವಿ ಮೊರೆಯಿಡಲು ।
ವರಕಂಬದಿ ಬಂದ ಸಿರಿ ನರಹರಿನಮ್ಮ ॥ 2 ॥

ಹರವಿರಿಂಚಾದ್ಯರು ಕರವೆತ್ತಿ ಮುಗಿಯಲು ।
ಪರಮಶಾಂತನಾದ **ಪುರಂದರವಿಠಲ** ॥ 3 ॥

****

80. ಶ್ರೀ ಪತಿಯು ನಮಗೆ ಸಂಪದವೀಯಲಿ

ರಾಗ: ಶ್ರೀರಾಗ **ತಾಳ: ಖಂಡಛಾಪು**

ಶ್ರೀ ಪತಿಯು ನಮಗೆ ಸಂಪದವೀಯಲಿ ।
ವಾಣೀಪತಿಯು ನಮಗೆ ದೀರ್ಘಾಯು ಕೊಡಲಿ ॥ ಪ ॥

ಸುರರ ಗಣವನು ಪೊರೆಯೆ ವಿಷವ ಕಂಠದೊಳಿಟ್ಟ ।
ಹರ ನಮಗೆ ಸತತ ಸಹಾಯಕನಾಗಲಿ ॥
ಸುರರೊಳ್‌ಉನ್ನತವಾದ ಭೋಗಭಾಗ್ಯಂಗಳನು ।
ಪುರುಹೂತ ಪೂರ್ಣಮಾಡಿಸಲಿ ನಮಗೆ ॥ 1 ॥

ವಿನುತ ಸಿದ್ಧಿಪ್ರದನು ವಿಘ್ನೇಶದಯದಿಂದ ।
ನೆನೆದ ಕಾರ್ಯಗಳೆಲ್ಲ ನೆರವೇರಿಸಲಿ ॥
ದಿನದಿನದಿ ಅಶ್ವಿನಿಗಳಾಪತ್ತುಗಳ ಕಳೆದು ।
ಮನಕೆ ಹರುಷವನಿತ್ತು ಮನ್ನಿಸಲಿ ಬಿಡದೆ ॥ 2 ॥

ನಿರುತ ಸುಜ್ಞಾನವನು ಈವ ಮಧ್ವರಾಯ ।
ಗುರುಗಳಾಶೀರ್ವಾದ ನಮಗಾಗಲಿ ॥
ಪುರಂದರವಿಠಲನ ಕರುಣದಿಂದಲಿ ।
ಸಕಲ ಸುರರೊಲುಮೆ ನಮಗೆ ಸುಸ್ಥಿರವಾಗಲಿ ॥ 3 ॥

****

81. ತೂಗಿರೇ ರಂಗನ ತೂಗಿರೇ ಕೃಷ್ಣನ

ರಾಗ: ಕಾಪಿ **ತಾಳ: ಆದಿ**

ತೂಗಿರೇ ರಂಗನ ತೂಗಿರೇ ಕೃಷ್ಣನ ।
ತೂಗಿರೇ ಅಚ್ಯುತಾನಂತನ ॥
ತೂಗಿರೇ ವರಗಿರಿ ಅಪ್ಪ ತಿಮ್ಮಪ್ಪನ ।
ತೂಗಿರೇ ಕಾವೇರಿ ರಂಗಯ್ಯನ ॥ ಪ ॥

ನಾಗಲೋಕದಲ್ಲಿ ನಾರಾಯಣ ಮಲಗ್ಯಾನೆ ।
ನಾಗಕನ್ನಿಕೆಯರು ತೂಗಿರೇ ॥
ನಾಗವೇಣಿಯರು ಮೇಳ ಪಿಡಿದುಕೊಂಡು ।
ಬೇಗಾನೆ ತೊಟ್ಟಿಲ ತೂಗಿರೆ ॥ 1 ॥

ಇಂದ್ರ ಲೋಕದಲಿ ಉಪೇಂದ್ರ ಮಲಗ್ಯಾನೆ ।
ಇಂದುಮುಖಿಯರೆಲ್ಲ ತೂಗಿರೆ ॥
ಇಂದ್ರಕನ್ನಿಕೆಯರು ಚಂದದಿ ಬಂದು ।
ಮುಕುಂದನ ತೊಟ್ಟಿಲ ತೂಗಿರೆ ॥ 2 ॥

ಆಲದೆಲೆಯ ಮೇಲೆ ಶ್ರೀಲೋಲ ಮಲಗ್ಯಾನೆ ।
ನೀಲಕುಂತಲೆಯರು ತೂಗಿರೆ ॥
ಜ್ಞಾನಶೀಲ ಹರಿ ಮಲಗು ಮಲಗು ।
ಎಂದು ಬಾಲಕೃಷ್ಣನ ತೂಗಿರೆ ॥ 3 ॥

ಸಾಸಿರನಾಮನೆ ಸರ್ವೋತ್ತಮನೆಂದು
ಸೂಸುತ್ತ ತೊಟ್ಟಿಲ ತೂಗಿರೆ ॥
ಲೇಸಾಗಿ ಮಡುವಿನೊಳು ಶೇಷನ ತುಳಿದಿಟ್ಟ ।
ದೋಷವಿದೂರನ ತೂಗಿರೆ ॥ 4 ॥

ಅರಳಲೆ ಮಾಗಾಯಿ ಕೊರಳ ಮುತ್ತಿನಹಾರ ।
ತರಳನ ತೊಟ್ಟಿಲ ತೂಗಿರೆ ॥
ಸಿರಿದೇವಿ ರಮಣನೆ **ಪುರಂದರವಿಠಲನೆ** ।
ಕರುಣದಿಂದ ಮಲಗೆಂದು ತೂಗಿರೆ ॥ 5 ॥

****

82. ಜಯ ಮಂಗಳಂ ನಿತ್ಯ ಶುಭಮಂಗಳಂ

ರಾಗ: ಮಾಧ್ಯಮಾವತಿ **ತಾಳ: ಆದಿ**

ಜಯ ಮಂಗಳಂ ನಿತ್ಯ ಶುಭಮಂಗಳಂ ॥ ಪ ॥

ಮುಕುಟಕ್ಕೆ ಮಂಗಳ ಮತ್ಸ್ಯಾವತಾರಗೆ ।
ಮುಖಕ್ಕೆ ಮಂಗಳ ಮುದ್ದು ಕೂರ್ಮನಿಗೆ ॥
ಸುಕಂಠಕ್ಕೆ ಮಂಗಳ ಸೂಕರರೂಪನೆ ।
ನಖಕ್ಕೆ ಮಂಗಳ ಮುದ್ದುನರಸಿಂಹಗೆ ॥ 1 ॥

ವಕ್ಷಕ್ಕೆ ಮಂಗಳ ವಟುವಾಮನಿಗೆ ।
ಪಕ್ಷಕೆ ಮಂಗಳ ಭಾರ್ಗವರಾಮನಿಗೆ ॥
ಕಕ್ಷಕ್ಕೆ ಮಂಗಳ ಕಾಕುಸ್ಥರಾಮನಿಗೆ ।
ಕುಕ್ಷಿಗೆ ಮಂಗಳ ಸಿರಿಕೃಷ್ಣನಿಗೆ ॥ 2 ॥

ಊರುಗಳಿಗೆ ಉತ್ತಮ ಬೌದ್ಧನಿಗೆ ।
ಚರಣಕ್ಕೆ ಮಂಗಳ ಶ್ರೀ ಕಲ್ಕಿಗೆ ॥
ಪರಿಪರಿರೂಪಗೆ ಪರಮಾನಂದಗೆ ।
ಪುರಂದರವಿಠಲಗೆ ಜಯ ಮಂಗಳ ॥ 3 ॥

****

83. ಆಯಿತು ಸೇವೆಯು, ಸೇವೆಯು ಕೃಷ್ಣನಿಗೆ

ಉಗಾಭೋಗ

ರಾಗ: ಸುರುಟಿ ತಾಳ: ಆದಿ

ಆಯಿತು ಸೇವೆಯು, ಸೇವೆಯು ಕೃಷ್ಣನಿಗೆ
ಹೋಯಿತು ಜನ್ಮ ಜನ್ಮದ ಪಾಪ
ಇಂದಿನ ದಿನವೇ ಶುಭದಿನವು
ಇಂದಿನ ವಾರವೇ ಶುಭವಾರ ಇಂದಿನ ತಾರೆ ಶುಭತಾರೆ
ಇಂದಿನ ಕರಣ ಶುಭಕರಣ ಇಂದಿನ ದಿನವೇ ಶುಭದಿನವು

****

84. ಗುರು ಕರುಣ ಹೊಂದುವುದು

ಉಗಾಭೋಗ

ರಾಗ: ಅಮೃತವರ್ಷಿಣಿ

ಗುರು ಕರುಣ ಹೊಂದುವುದು ಪರಮದುರ್ಲಭವಯ್ಯ ।
ಪರಿಪರಿ ವ್ರತಗಳಾಚರಿಸಲು ಫಲವೇನು ॥
ಶರೀರಾದಿ ಪುತ್ರ ಮಿತ್ರ ಕಳತ್ರ ಬಾಂಧವರು ಇರೆ ।
ಸೋರೆ ಸದ್ಗತಿಗೆ ಸಾಧನವು ನಿರುತವು ॥
ಗುರುಪಾದ ನಿಜವಾಗಿ ಮನದಲ್ಲಿ ಅರಿತು ಭಜಿಸಲು ।
ಅಖಿಳ ಸಂಪದವಕ್ಕು ಪುರಂದರವಿಠಲ. ॥

****

85. ಧನುಮುರಿದ ಶ್ರೀರಾಮ ಶೌರ್ಯವನು ತೋರಿ

ರಾಗ ಮಾಲಿಕೆ

ರಾಗ: ಭೌಳಿ **ತಾಳ: ಮಿಶ್ರಛಾಪು**

ಧನುಮುರಿದ ಶ್ರೀರಾಮ ಶೌರ್ಯವನು ತೋರಿ ।
ಜನಕನಾ ಸಭೆಯಲ್ಲಿ ಜಾನಕಿಯ ಮನ ಸೆಳೆದಾ ॥ ಪ ॥

ವಸುಧೀಶರೆಲ್ಲರೂ ದೆಸೆಗೆಟ್ಟು ಕುಳಿತಿರಲು ।
ದಶಕಂಠ ಧನುವೆತ್ತಿ ಬಸವಳಿದು ಬಿದ್ದ ॥
ಪಸರಿಸಿತು ಹಾಸ್ಯಧ್ವನಿ ನೆರೆದ ಸಭೆಯೊಳಗೆಲ್ಲಾ ।
ನಸುನಕ್ಕು ವಿಶ್ವಾಮಿತ್ರ ರಾಮನನು ಎಬ್ಬಿಸಿದ ॥ 1 ॥

ರಾಗ: ಅಠಾಣ

ಶ್ಯಾಮಸುಂದರನೆದ್ದು ಪ್ರೇಮದಿಂ ಮುನಿಗೆರಗಿ ।
ಆ ಮಹಾ ಧನುವಿದ್ದ ಸ್ಥಳಕೆ ಬಂದು ॥
ಕೋಮಲ ಕರಗಳಿಂ ಧನುವೆತ್ತಿ ತಾ ಪಿಡಿದು
ಸಾಮರ್ಥ್ಯದಿಂದೆಳೆಯೆ, ಧನು ಮುರಿದು ಎರಡಾಯ್ತು ॥ 2 ॥

ರಾಗ: ಮಧ್ಯಮಾವತಿ

ಜಯಭೇರಿ ಹೊಡೆಯಿತು ಜಯವಾಯ್ತು ರಾಮಗೆಂದು ।
ಜಯ ಜಯ ಜಯವೆಂದು ವನಪುಷ್ಪ ಮಳೆಗರೆಯೆ ॥
ಜಯ ಮಾಲೆ ಹಾಕಿದಳು ಜಾನಕಿನಡೆತಂದು ।
ಜಯಪಡೆದು ನಿಂತ ಶ್ರೀ **ಪುರಂದರವಿಠಲ.** ॥ 3 ॥

****

86. ಗಂಗಾ ತೀರದ ಮನೆ ನಮ್ಮದು

ರಾಗ: ಬೇಹಾಗ್ **ತಾಳ: ಆದಿ**

ಗಂಗಾತೀರದ ಮನೆ ನಮ್ಮದು ।
ಪಂಚಗಂಗಾತೀರದ ಮನೆ ನಮ್ಮದು ॥ ಪ ॥

ಕಾಶೀ ಬಿಂದುಮಾಧವನಲ್ಲಿ ಇರುವುದೋ ಮನೆ ॥ ಅ.ಪ. ॥

ಆವಾವ ಕಾಲದ ಆನಂದದ ಮನೆ ।
ತಾವರೆ ತಳಿತದ ನದಿಯ ಮನೆ ॥
ಆವಾಗ ಕಮಲಜ ಅವತರಿಸಿದ ಮನೆ ।
ಆವೇದಂಗಳಿಗೆಲ್ಲಾ ತೌರು ಮನೆ ॥ 1 ॥

ಚಿತ್ರವಲ್ಲಿದಲ್ಲಿಯ ಮನೆ ಚಿನ್ಮಯರೂಪನ ಮನೆ ।
ನಿತ್ಯಲೋಕಂಗಳಾ ರಕ್ಷಿಸುವಾ ಮನೆ ॥
ಭಕ್ತಜನರನ್ನೆಲ್ಲಾ ಉದ್ಧರಿಸಿದ ಮನೆ ।
ಮುಕ್ತಿ ಸಾಯುಜ್ಯಕ್ಕೆ ಕೊನೆಯಿಲ್ಲದಾ ಮನೆ ॥ 2 ॥

ಪರಮ ಪವಿತ್ರ ಚರಿತ್ರೆ ತೀರ್ಥರ ಮನೆ ।
ಪರಬ್ರಹ್ಮರಥಕೆ ಸಾಧನದ ಮನೆ ॥
ಪರಮಾತ್ಮನಾಗಿ ಅವತರಿಸಿದ ಮನೆ ।
ವರದ **ಪುರಂದರವಿಠಲನಾ** ಮನೆ ॥ 3 ॥

****

87. ಕೇಶವ ಮಾಧವ ಗೋವಿಂದ ಹರಿ

ರಾಗಮಾಲಿಕೆ

ರಾಗ: ಭೀಂಪಲಾಸ್ **ತಾಳ: ಆದಿ**

ಕೇಶವ ಮಾಧವ ಗೋವಿಂದ ಹರಿ ।
ಎಂಬ ದಾಸಯ್ಯ ಬಂದ ಕಣೇ ॥ ಪ ॥

ದೋಷರಹಿತ ನರವೇಷವ ಧರಿಸಿದ ।
ದಾಸಯ್ಯ ಬಂದ ಕಣೇ ॥ ಅ.ಪ ॥

ಖಳನು ವೇದವನೊಯ್ಯೆ ಪೊಳೆವ ಕಾಯನಾದ ।
ದಾಸಯ್ಯ ಬಂದ ಕಣೇ ॥
ಘಳಲನೆ ಕೂರ್ಮ ತಾನಾಗಿ ಗಿರಿಯ ಪೊತ್ತ ।
ದಾಸಯ್ಯ ಬಂದ ಕಣೇ ॥
ಇಳೆಯ ಕದ್ದಸುರನ ಕೋರೆದಾಡೀಲಿ ಕೊಂದ ।
ದಾಸಯ್ಯ ಬಂದ ಕಣೇ ॥
ಛಲದಿ ಕಂಬದಿ ಬಂದ ಅಸುರನ ಸೀಳಿದ ।
ದಾಸಯ್ಯ ಬಂದ ಕಣೇ ॥ 1 ॥

ರಾಗ: ಕಮಾಚ್
ಬಲಿಯ ದಾನವ ಬೇಡಿ ನೆಲವ ಅಳಿದು ನಿಂತ
ದಾಸಯ್ಯ ಬಂದ ಕಣೇ ।
ಛಲದಿ ಕ್ಷತ್ರಿಯರ ಕುಲವ ಸಂಹರಿಸಿದ
ದಾಸಯ್ಯ ಬಂದ ಕಣೇ ॥
ಲಲನೆಯನೊಯ್ಯೆ ತಾ ತಲೆ ಹತ್ತನೆಕೊಂದ
ದಾಸಯ್ಯ ಬಂದ ಕಣೇ ।
ನೆಲಕೊತ್ತಿ ಕಂಸನ ಬಲವನಳಿದ ಮುದ್ದು
ದಾಸಯ್ಯ ಬಂದ ಕಣೇ ॥ 2 ॥
ರಾಗ: ಸುರುಟಿ

ಮುಂಡತನದಿ ಪೋಗಿ ಪುರವನುರುಪಿ ಬಂದ
ದಾಸಯ್ಯ ಬಂದ ಕಣೇ ।
ಲಂಡರ ಸದೆಯಲು ತುರಗವ ನೇರಿದ
ದಾಸಯ್ಯ ಬಂದ ಕಣೇ ॥
ಹಿಂಡು ವೇದಗಳೆಲ್ಲ ಅರಸಿ ನೋಡಲುಸಿಗದ
ದಾಸಯ್ಯ ಬಂದ ಕಣೇ ।
ಪಾಂಡುರಂಗ ನಮ್ಮ **ಪುರಂದರವಿಠಲ**
ದಾಸಯ್ಯ ಬಂದ ಕಣೇ ॥ 3 ॥

****

88. ಇದು ಏನಂಗ ಮೋಹನಾಂಗ

ರಾಗ: ಅಭೋಗಿ **ತಾಳ: ಆದಿ**

ಇದು ಏನಂಗ ಮೋಹನಾಂಗ ।
ಮದನಜನಕ ತೊರವೆಯ ನರಸಿಂಗ ॥ ಪ ॥

ಸುರರು ಸ್ತುತಿಸಿ ಕರೆಯೆ ತುಟಿಯ ಮಿಸುಕದವ ।
ಬರಿದೆ ಏತಕೆ ಬಾಯ್ತೆರೆದೆ ಹೇಳೊಮ್ಮೆ ॥ 1 ॥

ವರನೀಲ ಮುತ್ತು ಮಾಣಿಕ್ಯ ಹಾರಗಳಿರೆ
ಕೊರಳಲಿ ಕರುಳಮಾಲೆಯ ಹಾಕಿ ಮೆರೆವುದು ॥ 2 ॥

ತೊರವೆಯ ನರಹರಿ **ಪುರಂದರವಿಠಲ** ।
ಸಿರಿಇಪ್ಪ ತೊಡೆಯೊಳು ಅರಿಯನಿಟ್ಟಿರುವುದು ॥ 3 ॥

89. ಸ್ಮರಿಸುವ ಜನಕೆಲ್ಲ ಭವಭಯ

ರಾಗ: ಸುರಟಿ   ತಾಳ: ಆದಿ

ಸ್ಮರಿಸುವ ಜನಕೆಲ್ಲ ಭವಭಯ ಪರಿತಾಪಗಳಿಲ್ಲ ॥ ಪ ॥

ಶರಣಾಗತ ಜನರಕ್ಷಕನೆನಿಸಿದ ।
ಕರಿಗಿರಿದುರ್ಗದ ನರಹರಿ ನಿನ್ನನು ॥ ಅ.ಪ. ॥

ಪೂರ್ವಸುಕೃತದಿಂದ ಸುಜನಕೆ ತೋರುವೆ ನೀ ।
ಮುದದಿಂದ ಸಾರ್ವಕಾಲದೊಳು ಮಹದಾನಂದದಿ ।
ದೂರ್ವಾಸರು ಪೂಜಿಪ ಮೂರುತಿ ನಿನ್ನ ॥ 1 ॥

ಕಾಶಿತೀರ್ಥದಿಂದ ಚಕ್ರ ಪರಾಶರತೀರ್ಥದಿಂದ ।
ಲೇಸಾದ ಮಾರುತಿ ಪಾದತೀರ್ಥ ನರ ।
ಕೇಸರಿ ತೀರ್ಥದಿಂದೊಪ್ಪುವ ನಿನ್ನನು ॥ 2 ॥

ನೀನಿಹಕ್ಷೇತ್ರದೊಳು ಸೇರಿಹ ವಾನರ ಪಕ್ಷಿಗಳು ।
ಮಾನವಾದಿ ಬಹುಪ್ರಾಣಿ ಸಮೂಹಕೆ ।
ಏನು ಪುಣ್ಯಫಲವಿರುವುದೋ ತಿಳಿಯದು ॥ 3 ॥

ಅತ್ತಿಯಮರದಲಿ ಕಾಯ್ಗಳು ಹತ್ತಿರುವಂದದಲಿ ।
ಮೊತ್ತಮೊತ್ತವಾದ ಬ್ರಹ್ಮಾಂಡನಿನ್ನೊಳು ।
ಹತ್ತಿಕೊಂಡಿಹುದನಂತಕೋಟಿಯೆಂದು ॥ 4 ॥

ಅಡವಿಯ ಮೃಗಗಳಿಗೆ ಬಹುಬಗೆ ।
ಗಿಡಲತೆಮರಗಳಿಗೆ ಒಡೆಯ ನೀನಲ್ಲದೆ ಅನ್ನಾದರಗಳ ।
ಕೊಡುವರೆ ಮನುಜರು ನೀಗತಿ ಸಲಹೆಂದು ॥ 5 ॥

ಕ್ಷುದ್ರ ದೈತ್ಯರಗಂಡ ಕರುಣಸಮುದ್ರ ತಿಮಿರ ।
ಪ್ರಚಂಡ ರೌದ್ರರ ಅಸುರರ ಮದಿಪ ।
ಲೋಕೋಪದ್ರವ ಬಿಡಿಸಿದ ರೌದ್ರಾಂತನಟ ನಿನ್ನ ॥ 6 ॥

ಭೂತಗ್ರಹಾದಿಗಳು ಸೋಕಿದ ಭೀತಿಜ್ವರಾದಿಗಳು ।
ಚೇತೋಮುಖ ನಿನ್ನನೋಡಲು ಇನ್ನು ।
ಪಾತಕವಳಿದು ಯಾತನೆ ಕಳೆವುದು ॥ 7 ॥

ಲಕ್ಷ್ಮೀಸಹಿತನಾಗಿ ಭಕ್ತರ ರಕ್ಷಿಸುವುದಕಾಗಿ ।
ಲಕ್ಷ್ಮಣಯುಕ್ತದಿಬಂದು ನಿಂದೆ ।
ಲಕ್ಷ್ಮೀನರಸಿಂಹ ನಿನ್ನ ಚರಿತ್ರೆಯ ॥ 8 ॥

ಕರಿಗಿರಿ ನರಸಿಂಹ ಭಕ್ತರ ದುರಿತದಂತಿಸಿಂಹ ।
ಪರಿಪಾಲಿಸು ನಾ ಮೊರೆಹೊಕ್ಕೆನೊ ನಿನ್ನ ।
ಗುರು **ಪುರಂದರವಿಠಲ** ನಿನ್ನನು ॥ 9 ॥

****

90. ಜ್ಞಾನವೊಂದೇ ಸಾಕುಮುಕ್ತಿಗೇ

ರಾಗ: ಮಾಂಡ್ **ತಾಳ: ಆದಿ**

ಜ್ಞಾನವೊಂದೇ ಸಾಕುಮುಕ್ತಿಗೇ ।
ಇನ್ನೇನು ಬೇಕು ಹುಚ್ಚು ಮರುಳೇ ॥ ಪ ॥

ಪಿತಮಾತೆ ಸತಿಸುತರ ಅಗಲಿರಬೇಡ ।
ಯತಿಯಾಗಿ ಅರಣ್ಯ ಚರಿಸಲುಬೇಡ ॥
ವ್ರತನೇಮವ ಮಾಡಿ ದಣಿಯಲು ಬೇಡ ।
ಸತಿಯಿಲ್ಲದವರಿಗೆ ಸದ್ಗತಿ ಇಲ್ಲೋ ಮೂಢ ॥ 1 ॥

ಜಪತಪವನೆಮಾಡಿ ದಣಿಯಲುಬೇಡ ।
ಕಪಿಯಾಗಿ ಅಡಿಗಡಿಗೆ ಹಾರಲುಬೇಡ ॥
ಉಪಮಾರರಸಕಾಶಿ ಕಳಿಯಲುಬೇಡ ।
ಚಪಲತನದಲ್ಲಿ ಫಲವಿಲ್ಲಾಮೂಡಾ ॥ 2 ॥

ಜಾಗ್ರತೆಯಲಿ ನಿದ್ರೆ ಕಳೆಯಲುಬೇಡ ।
ಆಗ್ರಹವನು ಬಿಟ್ಟು ಒಣಗಲುಬೇಡ ॥
ಸೋಗುಮಾಡಿ ಮಾತು ಕಳೆಯಲುಬೇಡ ।
ಗೂಗೆಹಾಗೆ ಕಣ್ಣುಮುಚ್ಚಲುಬೇಡ ॥ 3 ॥

ಹೊನ್ನುಹೆಣ್ಣುಮಣ್ಣು ಜರೆದಿರಬೇಡ ।
ಅನ್ನವಸ್ತ್ರನೀನು ತೊರೆದಿಡಬೇಡ ॥
ನನ್ನದೆಂದು ದೇಹ ನಂಬಲುಬೇಡ
ತಣ್ಣೀರುಮುಣುಗಿ ನಡುಗಲುಬೇಡ ॥ 4 ॥

ಮಹಾ ವಿಷ್ಣುಮೂರ್ತಿಯ ಮರೆದಿರಬೇಡ ।
ಸಾಹಸದಿಂದಲಿ ಶ್ರಮಪಡಬೇಡ ॥
ಕುಹಕಬುದ್ಧಿಯಲಿ ಕುಣಿದಾಡಬೇಡ ।
ಪುರಂದರವಿಠಲನ್ನ ಮರೆದಿರಬೇಡ ॥ 5 ॥

****

91. ಧರ್ಮಕ್ಕೆ ಕೈ ಬಾರದೀಕಾಲ

ರಾಗ: ಆನಂದಭೈರವಿ **ತಾಳ: ಆದಿ**

ಧರ್ಮಕ್ಕೆ ಕೈಬಾರದೀಕಾಲ ।
ಪಾಪಕರ್ಮಕ್ಕೆ ಮನಸೋಲೋದೀ ಕಾಲ ॥ ಪ ॥

ದಂಡದ್ರೋಹಕೆವುಂಟು ಪುಂಡುಪೋಕರಿಗುಂಟು ।
ಹೆಂಡತಿ ಮಕ್ಕಳಿಗಿಲ್ಲವೀಕಾಲ ॥
ದಿಂಡೇರಿಗುಂಟು ಜಗಭಂಡರಿಗುಂಟು ।
ಅಂಡಲೆವವರೀಗಿಲ್ಲವೀಕಾಲ ॥ 1 ॥

ಮತ್ತೆ ಸುಳ್ಳರಿಗುಂಟು ನಿತ್ಯಹಾದರಕುಂಟು ।
ಉತ್ತಮರಿಗಿಲ್ಲವೀಕಾಲ ॥
ತುತ್ತೇರಿಗುಂಟು ತಾಟಕಿಗೂಉಂಟು ।
ಹೆತ್ತ ತಾಯಿಗಿಲ್ಲವೀಕಾಲ ॥ 2 ॥

ಹುಸಿದಿಟವಾಯಿತು ರಸಕಸವಾಯಿತು ।
ಸೊಸೆ ಅತ್ತೆಗೆದಂಡಿಸೋದೀಕಾಲ ॥
ಬಿಸಜಾಕ್ಷ **ಪುರಂದರವಿಠಲನ** ।
ಮನದಲ್ಲಿ ಸ್ತುತಿಸುವವರಿಗಿಲ್ಲವೀಕಾಲ ॥ 3 ॥

****

92. ಘಟಿಕಾಚಲದಿ ನಿಂತ ಶ್ರೀಹನುಮಂತ

ರಾಗ: ದರ್ಬಾರಿಕಾನಡ ತಾಳ: ಆದಿ

ಘಟಿಕಾಚಲದಿ ನಿಂತ ಶ್ರೀಹನುಮಂತ ॥ ಪ ॥

ಘಟಿಕಾಚಲದಿ ನಿಂತ ಪಟು ಹನುಮಂತನ ।
ಪಠನೆಯ ಮಾಡಲುತ್ಕಟದಿ ಪೊರೆವೆನೆಂದು ॥ ಅ. ಪ ॥

ಚತುರಯುಗದಿ ತಾನು ಮುಖ್ಯ ಪ್ರಾಣನು ।
ಚತುರಮುಖನಯ್ಯನ ಚತುರಮೂರ್ತಿಗಳನು ॥
ಚತುರತನದಿ ಭಜಿಸಿ ಚತುರ್‌ಮುಖನಾಗಿ ಜಗಕೆ ।
ಚತುರ್ವಿಧ ಫಲಕೊಡುತ ॥ 1 ॥

ಸರಸಿಜಭವಗೋಸ್ಕರ ಕಲ್ಮಷದೂರ ।
ವರಚಕ್ರತೀರ್ಥಸರ ॥
ಮೆರವಾಚಲದಿ ನಿತ್ಯ ನರಹರಿಗೆದುರಾಗಿ ।
ಸ್ಥಿರಯೋಗಾಸನದಿ ಕರೆದು ವರಗಳ ಕೊಡುತ ॥ 2 ॥

ಶಂಖಚಕ್ರವಧರಿಸಿ ಭಕ್ತರ ಮನ ।
ಪಂಕವ ಪರಿಹರಿಸಿ ॥
ಪಂಕಜನಾಭ ಶ್ರೀ **ಪುರಂದರವಿಠಲನ** ।
ಬಿಂಕದ ಸೇವಕ ಸಂಕಟಕಳೆಯುತ ॥ 3 ॥

****

93. ರೊಕ್ಕ ಎರಡಕ್ಕು ದುಃಖ ಕಾಣಕ್ಕ

ರಾಗ: ಸಿಂಧುಭೈರವಿ ತಾಳ: ಆದಿ

ರೊಕ್ಕ ಎರಡಕ್ಕು ದುಃಖ ಕಾಣಕ್ಕ ॥ ಪ ॥

ಮಕ್ಕಳಮರಿಗಳ ಮಾಡೋದು ರೊಕ್ಕ ।
ಸಕ್ಕರೆ ತುಪ್ಪವ ತಿನಿಸೋದು ರೊಕ್ಕ ॥
ಕಕ್ಕುಲಾತಿಯನ್ನು ಬಿಡಿಸೋದು ರೊಕ್ಕ ।
ಘಕ್ಕನೆ ಹೋದರೆ ಘಾತ ಕಾಣಕ್ಕ ॥ 1 ॥

ನೆಂಟರ ಇಷ್ಟರ ಮರಸೋದು ರೊಕ್ಕ ।
ಕಂಟಕಗಳ ಪರಿಹರಿಸೋದು ರೊಕ್ಕ ॥
ಗಂಟು ಕಟ್ಟಲಿಕ್ಕೆ ಕಲಿಸೋದು ರೊಕ್ಕ ।
ತುಂಟತನಗಳನ್ನು ಒಲಿಸೋದು ರೊಕ್ಕ ॥ 2 ॥

ಇಲ್ಲದ ಗುಣಗಳ ತರಿಸೋದು ರೊಕ್ಕ ।
ಒಲಿದಿಹ ಗುಣಗಳ ಮರೆಸೋದು ರೊಕ್ಕ ॥
ಸಲ್ಲದ ನಾಣ್ಯವ ನಡೆಸೋದು ರೊಕ್ಕ ।
ಬೆಲ್ಲಕ್ಕಿಂತಲು ಬಲು ಸವಿಯು ರೊಕ್ಕ ॥ 3 ॥

ಉಂಟಾದ ಗುಣಗಳ ಮರೆಸೋದು ರೊಕ್ಕ ।
ಬಂಟರನ್ನೆಲ್ಲರ ಬರಿಸೋದು ರೊಕ್ಕ ॥
ಕಂಠಿಸರಿಗೆಯನು ಗಳಿಸೋದು ರೊಕ್ಕ
ಒಂಟೆ ಕುದುರೆ ಆನೆ ತರಿಸೋದು ರೊಕ್ಕ ॥ 4 ॥

ವಿದ್ಯದ ಮನುಜರ ಕರಸೋದು ರೊಕ್ಕ ।
ಹೊಂದಿದ್ದ ಜನರನ್ನು ಬಿಡಿಸೋದು ರೊಕ್ಕ ॥
ಮುದ್ದು ಪುರಂದರವಿಠಲನ್ನ ಮರೆಸುವ ।
ಬಿದ್ದುಹೋಗುವ ರೊಕ್ಕವ ಸುಡು ನೀನಕ್ಕ ॥ 5 ॥

****

94. ಪ್ರಾಣನಾಥ ಪಾಲಿಸೋ ನೀ ಎನ್ನ

ರಾಗ: ನಾಟಕುರಂಜಿ **ತಾಳ: ರೂಪಕ**

ಪ್ರಾಣನಾಥ ಪಾಲಿಸೋ ನೀ ಎನ್ನ ।
ಜಾಣ ಲಕ್ಷ್ಮಣಗೆ ಜೀವವಿತ್ತ ಘನ್ನ ॥ ಪ ॥

ವಾಣಿಪತಿಸಮನಾದವನೆ ।
ರಾಣಿ ಭಾರತಿರಮಣನೆ ॥ 1 ॥

ಅಂಜನಾದೇವಿಯ ಆತ್ಮಜನೆ ।
ಕಂಜಾಕ್ಷ ರಾಮದೂತನೆ ॥ 2 ॥

ಪಾಂಡುಸುತ ಭೂಮಂಡಲೇಶ ।
ಪಾಂಡುರಂಗನ ಭಕ್ತರಪೋಷ ॥ 3 ॥

ಮೂಲಗುರು ಮಧ್ವರಾಯರಾಗಿ ।
ಮೂಲದೈತ್ಯರ ನೀಗಿ ॥ 4 ॥

ನರಹರಿ **ಪುರಂದರವಿಠಲನ** ಕೀರ್ತಿ ।
ನರರಿಗೆ ತೋರಿದ ನಿಜಗುರುಮೂರ್ತಿ ॥ 5 ॥

****

95. ಸಾಧು ಸಜ್ಜನರೊಳಗಿರುವುದೇ ಹಬ್ಬ

ರಾಗ: ದೇಶ್ **ತಾಳ: ಆದಿ**

ಸಾಧು ಸಜ್ಜನರೊಳಗಿರುವುದೇ ಹಬ್ಬ ।
ವೇದಾಂತದರ್ಥವ ತಿಳಿವೋದೆ ಹಬ್ಬ ॥ ಪ ॥

ಭೇದಬುದ್ಧಿಗಳೆಲ್ಲ ಬಿಡುವುದೇ ಹಬ್ಬ ।
ಭಾಗೀರಥೀಲಿ ಓಲಾಡುವುದೇ ಹಬ್ಬ ॥ ಅ.ಪ ॥

ಸಂಕಲ್ಪಸಿದ್ಧಿ ಮನಕೆ ದೊಡ್ಡ ಹಬ್ಬ ।
ನಿಶ್ಚಿಂತಯೋಗಿಗೆ ಅನುದಿನ ಹಬ್ಬ ॥ 1 ॥

ಸಾಲವಿಲ್ಲದವನ ಸಂಸಾರವೇ ಹಬ್ಬ ।
ಶರೀರಕ್ಕೆ ವ್ಯಾಧಿ ಬಾರದಿರೆ ಹಬ್ಬ ॥ 2 ॥

ಸಂಚಿತಕರ್ಮವ ಕಳೆವೋದೆಹಬ್ಬ ।
ಪಂಚಮುಖನಾಭನ ಭಜಿಸೋದೆಹಬ್ಬ ॥ 3 ॥

ಕಂಗಳು ಕಾಶಿಯ ಕಾಂಬೋದೆ ಹಬ್ಬ ।
ಪಂಕಜನಾಭನ ಭಜಿಪುದೇ ಹಬ್ಬ ॥ 4 ॥

ಭೂಲೋಕದೊಳು ಕಾಶಿವಾಸವೆ ಹಬ್ಬ ।
ಪುರಂದರವಿಠಲನ ಭಜಿಸುವುದೇ ಹಬ್ಬ ॥ 5 ॥

96. ಶರಣು ಭಾರತಿ ದೇವಿಗೆ

ರಾಗ: ಸರಸ್ವತಿ ತಾಳ: ಆದಿ

ಶರಣು ಭಾರ್ರತಿದೇವಿಗೆ ಶರಣು ವಾಯುರಮಣಿಗೆ ॥ ಪ ॥

ಶರಣು ಶರಣರ ಪೊರೆವ ಕರುಣಿಗೆ ।
ಶರಣು ಸುರವರ ದೇವಿಗೆ ॥ ಅ.ಪ ॥

ಸುರರು ಮೊದಲಾದವರಿಗೆಲ್ಲಾ ।
ಪರಮಮಂಗಳವೀವಳೆ ॥
ಚರಣಕಮಲಕೆ ಮೊರೆಯ ಹೊಕ್ಕೆನು ।
ಕರುಣಿಸೆನಗೆ ಸುಮಂಗಲ ॥ 1 ॥

ಪಿಂಗಳರೂಪಳೆ ಮಂಗಳಮಹಿಮಳೆ ।
ಹಿಂಗದೆ ಕೊಡು ಹರಿಭಕುತಿಯ ॥
ರಂಗನಾಥ ಪಾದಾಬ್ಜಭೃಂಗಳೆ ।
ಸಂಗೀತಕೆ ಬಹುಪ್ರಿಯಳೆ ॥ 2 ॥

ಪಕ್ಷಿವಾಹನ ಲಕ್ಷ್ಮೀರಮಣನ ।
ದಕ್ಷ ಪುರಂದರವಿಠಲನ ॥
ಅಕ್ಷಯದಿಂದಲಿ ಕೊಟ್ಟು ಭಕುತಿಯ
ರಕ್ಷಿಸೆನ್ನನು ಅನುದಿನ ॥ 3 ॥

****

97. ನಿಮ್ಮ ಭಾಗ್ಯ ದೊಡ್ಡದೋ

ರಾಗ: ಅಮೃತವರ್ಷಿಣಿ ತಾಳ: ಆದಿ

ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯ ದೊಡ್ಡದೋ ।
ಸಮ್ಮತ್ತಿಂದ ನಾವು ನೀವು ಸಾಟಿಮಾಡಿ ನೋಡುವ ಬನ್ನಿ ॥ ಪ ॥

ಹೇಮ ಹೊನ್ನು ಹಣಗಳಿಗೆ ಹೇರಳ ಭಯಗಳುಂಟು ।
ರಾಮನಾಮ ದ್ರವ್ಯಕ್ಕಿನ್ನು ಯಾರಭಯವು ಇಲ್ಲವಯ್ಯ ॥ 1 ॥

ಕಡಗ ಕಂಠ ಮಾಲೆಗಳಿಗೆ ಕಳ್ಳರ ಅಂಜಿಕೆ ಯುಂಟು ।
ಅಡವಿ ತುಳಸಿ ಮಾಲೆಗಿನ್ನು ಯಾರಂಜಿಕೆ ಇಲ್ಲವಯ್ಯಾ ॥ 2 ॥

ವ್ಯಾಪಾರ ಉದ್ಯೋಗಕ್ಕೆ ವ್ಯಾಕುಲದ ಭಯಗಳುಂಟು ।
ಗೋಪಾಳದ ವೃತ್ತಿಗಿನ್ನು ಯಾರಗೊಡವೆ ಇಲ್ಲವಯ್ಯ ॥ 3 ॥

ಸರಕು ಬೆಲ್ಲ ತುಪ್ಪ ಧಾನ್ಯ ಸವೆದೀತೆಂಬ ಚಿಂತೆಯುಂಟು ।
ಹರಿನಾಮಾಮೃತಕೆ ಇನ್ನು ಯಾವಚಿಂತೆ ಇಲ್ಲವಯ್ಯ ॥ 4 ॥

ನಿಮ್ಮಭಾಗ್ಯ ಲಕ್ಷ್ಮೀದೇವಿ ನಮ್ಮಭಾಗ್ಯ ನಾರಾಯಣನು ।
ನಮ್ಮ ನಿಮ್ಮ ಭಾಗ್ಯದೊಡೆಯ **ಪುರಂದರವಿಠಲ** ॥ 5 ॥

****

98. ಮನಶುದ್ಧಿ ಇಲ್ಲದವನಿಗೆ

ಉಗಾಭೋಗ

ಮನಶುದ್ಧಿ ಇಲ್ಲದವನಿಗೆ ಮಂತ್ರದ ಫಲವೇನು
ತನುಶುದ್ಧಿ ಇಲ್ಲದವಗೆ ತೀರ್ಥದ ಫಲವೇನು
ನಿಂದಲ್ಲಿ ಫಲವೇನು ಶ್ರೀಶೈಲ ಕಾಗೆಯಂತೆ
ಹೊರಗೆ ಮಿಂದು ಒಳಗೆ ಮೀಯದವರ ಕಂಡು
ಬೆರಗಾಗಿ ನಗುತಿದ್ದ **ಪುರಂದರವಿಠಲ**

ರಾಗ: ಪೂರ್ವಿಕಲ್ಯಾಣಿ **ತಾಳ: ಆದಿ**

ಸ್ನಾನವ ಮಾಡಿರೋ ಜ್ಞಾನತೀರ್ಥದಲಿ
ನಾನುನೀನೆಂಬುವ ಅಹಂಕಾರವ ಬಿಟ್ಟು ॥ ಪ ॥

ತಂದೆತಾಯಿಗಳಸೇವೆ ಒಂದು ಸ್ನಾನ ।
ಬಂಧನದವರ ಬಿಡಿಸಲೊಂದುಸ್ನಾನ ॥
ಮುಂದಣಮಾರ್ಗ ತಿಳಿದರೊಂದು ಸ್ನಾನ ।
ಇಂದಿರೇಶನ ಧ್ಯಾನವೇ ಗಂಗಾಸ್ನಾನ ॥ 1 ॥

ಪರಸತಿಯ ಬಯಸದಿದ್ದರೆ ಒಂದುಸ್ನಾನ ।
ಪರನಿಂದೆ ಮಾಡದಿದ್ದರೆ ಒಂದುಸ್ನಾನ ॥
ಪರದ್ರವ್ಯ ಅಪಹರಿಸಿದರೆ ಒಂದುಸ್ನಾನ ।
ಪರತತ್ತ್ವ ತಿಳಿದುಕೊಂಡರೆ ಒಂದುಸ್ನಾನ ॥ 2 ॥

ತನ್ನೊಳುತಾನೇ ತಿಳಿದರೊಂದುಸ್ನಾನ ।
ಅಸತ್ಯನುಡಿಯದಿದ್ದರೆ ಒಂದುಸ್ನಾನ ॥
ಅನ್ಯಾಯಮಾಡದಿರಲು ಒಂದುಸ್ನಾನ ।
ಚೆನ್ನಾಗಿ ಹರಿಯ ನೆನೆಯೆ ಗಂಗಾಸ್ನಾನ ॥ 3 ॥

ಅತ್ತೆಮಾವರಸೇವೆಯೇ ಒಂದುಸ್ನಾನ ।
ಭರ್ತನಮಾತುಕೇಳುವುದು ಒಂದುಸ್ನಾನ ॥
ಕ್ಷೇತ್ರಪಾತ್ರರಸಹವಾಸ ಒಂದುಸ್ನಾನ ।
ಪಾರ್ಥಸಾರಥಿ ಧ್ಯಾನವೆ ಗಂಗಾಸ್ನಾನ ॥ 4 ॥

ವೇದಶಾಸ್ತ್ರವ ಓದುವುದೊಂದು ಸ್ನಾನ ।
ಭೇದಾಭೇದವ ತಿಳಿದರೊಂದು ಸ್ನಾನ ॥
ಸಾಧುಸಜ್ಜನಸಂಗವೊಂದು ಸ್ನಾನ ।
ಪುರಂದರವಿಠಲನ ಧ್ಯಾನವೇ ಗಂಗಾಸ್ನಾನ ॥ 5 ॥

****

99. ಸುಮ್ಮನೆ ದೊರಕುವುದೇ ಶ್ರೀರಾಮನ

ರಾಗ: ಆನಂದಭೈರವಿ **ತಾಳ: ಏಕ**

ಸುಮ್ಮನೆ ದೊರಕುವುದೇ ಶ್ರೀರಾಮನ ದಿವ್ಯನಾಮವು ॥ ಪ ॥

ಜನ್ಮಜನ್ಮಾಂತರದ ದುಷ್ಕರ್ಮ ಹೋದವಗಲ್ಲದೆ ॥ ಅ.ಪ ॥

ಭಕ್ತಿರಸದಲ್ಲಿ ತನ್ನ ಚಿತ್ತ ಪರವಶವಾಗಿ ।
ಅಚ್ಯುತನ ನಾಮವ ಬಚ್ಚಿಟ್ಟುಕೊಂಡವಗಲ್ಲದೆ ॥ 1 ॥

ಕಂತುಪಿತನ ದಿವ್ಯನಾಮ ಅಂತರಂಗದೊಳಿಟ್ಟು ।
ಚಿಂತೆಯೆಲ್ಲವ ಬಿಟ್ಟು ನಿಶ್ಚಿಂತನಾದವಗಲ್ಲದೆ ॥ 2 ॥

ಕಣ್ಣೊಳಗಿದ್ದಮೂರುತಿ ತನ್ನೊಳಗೆ ತಂದು ।
ಘನ್ನಪೂರ್ಣ ಪುರಂದರವಿಠಲನ ಭಜಿಸದೆ ॥ 3 ॥

****

100. ಕ್ಷೀರಾಬ್ಧಿಕನ್ನಿಕೆ ಶ್ರೀ ಮಹಾಲಕ್ಷ್ಮೀ

ರಾಗಮಾಲಿಕೆ

ರಾಗ: ಆರಭಿ **ತಾಳ: ಆದಿ**

ಕ್ಷೀರಾಬ್ಧಿಕನ್ನಿಕೆ ಶ್ರೀ ಮಹಾಲಕ್ಷ್ಮೀ ।
ಯಾರಿಗೆ ವಧುವಾಗುವೆ ॥ ಪ ॥

ಶರಧಿಬಂಧನ ಶ್ರೀ ರಾಮಚಂದ್ರಮೂರ್ತಿಗೋ ।
ಪರಮಾತ್ಮ ಅನಂತಪದ್ಮನಾಭನಿಗೋ ॥
ಸರಸಿಜನಾಭ ಶ್ರೀ ಜನಾರ್ದನಮೂರ್ತಿಗೋ ।
ಉಭಯ ಕಾವೇರಿರಂಗ ಪಟ್ಟಣದರಸಗೋ ॥ 1 ॥

ರಾಗ: ಮೋಹನ

ಚೆಲುವ ಬೇಲೂರ ಚೆನ್ನಿಗರಾಯನಿಗೋ ।
ಗೆಳತಿ ಹೇಳೆ ಉಡುಪಿ ಶ್ರೀಕೃಷ್ಣರಾಯಗೋ ॥
ಇಳೆಯೊಳು ಪಾಂಡುರಂಗವಿಠಲರಾಯಗೋ ।
ನಳಿನಾಕ್ಷಿ ಹೇಳಮ್ಮ ಬದರಿನಾರಾಯಣಗೋ ॥ 2 ॥

ರಾಗ: ಕಾಂಬೋಧಿ

ಮಲಯಜಗಂಧಿ ಬಿಂದುಮಾಧವರಾಯಗೋ ।
ಸುಲಭ ದೇವರು ಪುರುಷೋತ್ತಮಗೋ ॥
ಫಲದಾಯಕ ನಿತ್ಯಮಂಗಳನಾಯಕಗೋ ।
ಚಲುವೆ ನಾಚದೆ ಪೇಳೆ ಶ್ರೀವೆಂಕಟೇಶಗೋ ॥ 3 ॥

ರಾಗ: ಸಿಂಹೇಂದ್ರಮಧ್ಯಮ

ವಾಸವಾರ್ಚಿತ ಕಂಚಿ ವರದರಾಜನಿಗೋ ।
ಅಸುರಾರಿ ಶ್ರೀಮುಷ್ಣದ ಆದಿವರಾಹನಿಗೋ ॥
ಶೇಷಶಾಯಿಯಾದ ಶ್ರೀಮನ್ನಾರಾಯಣಗೋ ।
ಸಾಸಿರನಾಮದೊಡೆಯ ಅಳಗಿರೀಶಗೋ ॥ 4 ॥

ರಾಗ: ಸಿಂಧುಭೈರವಿ

ಶರಣಾಗತವತ್ಸಲ ಸಾರಂಗಪಾಣಿಗೋ ।
ವರಗಳನೀಡುವ ಶ್ರೀನಿವಾಸಗೋ ॥
ಕುರುಕುಲಾಂತಕ ಶ್ರೀಗೋಪಾಲಮೂರ್ತಿಗೋ ।
ಸ್ಥಿರವಾಗಿ **ಪುರಂದರವಿಠಲ**ರಾಯಗೋ ॥ 5 ॥

****

101. ಆರಿದ್ದರೇನಯ್ಯ ನೀನಲ್ಲದೆ

ಉಗಾಭೋಗ

ರಾಗ: ಭಾಗೇಶ್ವರಿ

ನಿನ್ನ ನಾಮದ ಭಂಡಾರವನು ಕದ್ದ ಕಳ್ಳನು ನಾನು ।
ನಿನ್ನವರ ಕೈಲಿ ಎನ್ನ ಪಿಡಿದೆತ್ತು ॥
ನಿನ್ನ ನಾಮಾವಳಿಯ ಪೊಗಳುವಂತೆ ಶಿಕ್ಷೆ ವಿಧಿಸಿ ।
ನಿನ್ನ ವೈಕುಂಠದುರ್ಗದೊಳಗೆನ್ನ ಸೆರೆಯಿಡು **ಪುರಂದರವಿಠಲ** ॥

ರಾಗ: ಖಂಡಛಾಪು

ಆರಿದ್ದರೇನಯ್ಯ ನೀನಲ್ಲದೆ ।
ಕಾರುಣ್ಯನಿಧಿ ಹರಿಯೆ ಕೈಯ ಬಿಡಬೇಡ ॥ ಪ ॥

ದುರುಳ ಕೌರವನಂದು ದ್ರುಪದಜೆಯ ।
ಸೀರೆಯನು ಭರದಿಂದ ಸೆಳೆಯುತಿರೆ ॥
ಪತಿಗಳೆಲ್ಲಾ ಗರಹೊಡೆದಂತಾದರಲ್ಲದೆ ।
ನರಹರಿಯೆ ಕರುಣದಿ ನೀನಲ್ಲದಿನ್ಯಾರು ಕಾಯ್ದುವರು ॥ 1 ॥

ಅಜಾಮಿಳನು ಕುಲಗೆಡಲು ಕಾಲದೂತರು ಬರಲು ।
ನಿಜಸುತನ ಕರೆಯೆ ನೀನತಿವೇಗದಿ ॥
ತ್ರಿಜಗದೊಡೆಯನೇ ಸಿರಿ **ಪುರಂದರವಿಠಲ** ।
ನಿಜದೂತರನು ಕಳುಹಿ ಕಾಯ್ದೇ ನರಹರಿಯೆ ॥ 2 ॥

****

102. ಹೊತ್ತಾರೆದ್ದು ಕುಳಿತು ಯಶೋದಮ್ಮ

ರಾಗ: ಶಂಕರಾಭರಣ **ತಾಳ: ಆದಿ**

ಹೊತ್ತಾರೆದ್ದು ಕುಳಿತು ಯಶೋದಮ್ಮ ।
ಮುತ್ತು ಪೋಣಿಸುತ್ತಿದ್ದಳು ॥ ಪ ॥

ಹತ್ತಿರಿದ್ದ ಕೃಷ್ಣ ಬಂದು ।
ಮುತ್ತನೊಂದು ತೆಗೆದುಕೊಂಡು ॥
ಸುತ್ತಲಿದ್ದ ಹುಡುಗರ್ ಸಹಿತ
ಹಿತ್ತಲೊಳಗೆ ಬಿತ್ತಿಹೋದ ॥ 1 ॥

ಏನಪೇಳಲಿ ನಾನು ಕೃಷ್ಣನ ಮಹಿಮೆ ।
ಯಾರಿಗೂ ತಿಳಿಯದಮ್ಮ ॥
ಪರಿಪರಿ ಚಿಂತೆಯಲಿ ಯಶೋದಮ್ಮ ।
ನಾರಿಯರ ಕಳುಹಿದಳು ॥ 2 ॥

ಸಂದುಸಂದಿಲಿ ಹುಡುಕಿ ಹುಡುಕಿ ।
ಕಂದ ಕಾಣನೆಂದು ಬರಲು ॥
ಒಂದುಕ್ಷಣದಲಿ ಕೃಷ್ಣ ಬಂದು
ಎದುರಾಗಿ ನಿಂದನಮ್ಮ ॥ 3 ॥

ಕಂದಯ್ಯನ ಕರ ಪಿಡಿದು ಯಶೋದಮ್ಮ ।
ಕರೆತಂದಳರಮನೆಗೆ ॥
ಕಂದ ಬಹಳ ಹಸಿದನೆಂದು ।
ತುತ್ತುಮಾಡಿ ಉಣಿಸಿದಳು ॥ 4 ॥

ಮುತ್ತ ಏನಮಾಡಿದ್ದೆಂದು ।
ಸಿಟ್ಟಿನಲ್ಲಿ ಕೇಳಿದಳು ॥
ಹೆತ್ತ ತಾಯಿಯ ಕರೆದು ಹಿತ್ತಿಲ ಒಳಗೆ ।
ಮುತ್ತಿನ ಗಿಡ ತೋರಿದ ॥ 5 ॥

ಪೆಂಟೆ ಪೆಂಟೆಗೆ ಎಂಟುಎಂಟು
ಗೊಂಚಲಾಗಿ ಜೋಲುತಿರಲು ॥
ಕಡಿದು ಕಡಿದು ರಾಶಿಹಾಕಿದ ।
ಪರಮ ಪುರಂದರವಿಠಲರಾಯ ॥ 6 ॥

****

103. ಕಮಲಕೋಮಲ ಕರತಲಲಾಲಿತ

ರಾಗ: ನಾದನಾಮಕ್ರಯ **ತಾಳ: ಆದಿ**

ಕಮಲಕೋಮಲ ಕರತಲಲಾಲಿತ ।
ಪಾದಪದ್ಮನೀದಾರ್ರೈ ಕೃಷ್ಣ ॥
ಕಾಮಿನಿ ಭಾಮಿನಿ ರೂಪದ ಚಂದವ ।
ನೋಡಬಂದೆನೇ ಭಾಮೇನಾನು ॥ 1 ॥

ನಂದನಂದನ ಯದುಕುಲವಂದ್ಯನೆ ।
ಇಂದುವದನ ನೀದಾರ್ರೈ ಕೃಷ್ಣ ॥
ಮಂಜುಳಭಾಷಿಣಿ ಕುರವಕಗಂಧಿನಿ ।
ಕಂಜನಾಭನೇ ಬಾಲೇನಾನು ॥ 2 ॥

ಉದಧಿಶಯನ ನೀನವನೀತ ಕದ್ದವ ।
ಜಾರಚೋರ ನೀದಾರ್ರೈ ಕೃಷ್ಣ ॥
ಕಾಮಿನಿ ಸುಂದರಿ ನೀರಜಲೋಚನೆ ।
ಚೋರನಲ್ಲವೆ ಬಾಲೆ ನಾನು ॥ 3 ॥

ಮಂದರಧರನೆ ಪರಿಮಳಚೆನ್ನನೆ ।
ಕಂಬುಕಂಧರ ನೀದಾರ್ರೈ ಕೃಷ್ಣ ॥
ಚಂಚಲ ಲೋಚನೆ ಕುಟಿಲ ಕುಂತಳೆ ।
ಕೋಮಲಾಂಗನೇ ಭಾಮೆ ನಾನು ॥ 4 ॥

ಕಮಲಾರಮಣ ಕಲುಷನಿವಾರಣ ।
ನಿಷ್ಕಾಭರಣ ನೀದಾರ್ಯೈಕೃಷ್ಣ ॥
ಕಾಮುಕ ಕಾಮಿನಿ ಚಂಪಕಗಂಧಿನಿ ।
ಪುರಂದರವಿಠಲನೆ ಬಾಲೇ ನಾನು ॥ 5 ॥

****

104. ಬಾರೋ ಬ್ರಹ್ಮಾದಿವಂದ್ಯ

ರಾಗ: ಹಿಂದೋಳ **ತಾಳ: ಮಿಶ್ರಛಾಪು**

ಬಾರೋ ಬ್ರಹ್ಮಾದಿವಂದ್ಯ ।
ವಸುದೇವಸುತನೇ ಬಾರೋ ಬ್ರಹ್ಮಾದಿವಂದ್ಯ ॥ ಪ ॥

ಗೊಲ್ಲರ ಮನೆಗೆ ಹೋಗಲಿ ಬೇಡ ಗೋವಿಂದ ಕೇಳೋ ನಿನಗೆ ॥
ಹಾಲು ಮೊಸರು ಬೆಣ್ಣೆಯ ಕೊಡುವೆ ಜಾಲ ಮಾಡದೆ ಬೇಗನೆ ಬಾರೋ ॥ 1

ದಿಗಿ ದಿಗಿ ನೀ ಕುಣಿದಾಡುತ ಬಾರೋ ದೀನರಕ್ಷಕನೇ ಚಂದದಿ ॥
ಜಗದೀಶ ನೀ ಕುಣಿದಾಡುತ ಬಾರೋ ಚೆನ್ನಕೇಶವನೇ ಬಾರೋ ॥ 2 ॥

ದೊಡ್ಡ ದೊಡ್ಡ ಮುತ್ತಿನಹಾರ ಹಾಕಿ ನೋಡುವೆನೋ ನೀನು ॥
ದೊಡ್ಡ ಪುರದ ದ್ವಾರಕವಾಸ **ಪುರಂದರವಿಠಲ** ಬೇಗ ಬಾರೋ ॥ 3

****

105. ಏನು ಮೆಚ್ಚಿದೆ ಹೆಣ್ಣೆ ಏನು ಮರುಳಾದೆ

ರಾಗ: ಬೇಹಾಗ್ **ತಾಳ: ಆದಿ**

ಏನು ಮೆಚ್ಚಿದೆ ಹೆಣ್ಣೆ ಏನು ಮರುಳಾದೆ ॥ ಪ ॥

ನೋಟದಿ ಚೆಲುವನಿವನೆಂಬೆನೆ ಚಂಚಲ ।
ಮಾಟದಿ ಚೆಲುವನೆಂಬೆನೆ ಬೆನ್ನು ಗುಪುಟು ॥
ಗೂಟದಂಥ ಹಲ್ಲು ಮೊಳದುದ್ದದಾ ಮೋರೆ ।
ಬೂಟಕತನದಿ ಬಾಯ್ ತೆರೆದು ಅಂಜಿಪಗೆ ॥ 1 ॥

ಅಣುರೂಪದವನಿವ ನಿಲುವುಳ್ಳ ನರನಲ್ಲ ।
ಬನವ ತರಿವವನಂತೆ ಕೈಯಲ್ಲಿ ಕೊಡಲಿ ॥
ಮನುಜರನು ತಾಬಿಟ್ಟು ಕಪಿಗಳನು ಕೂಡುವ ।
ಮನೆ ಮನೆಯನೂ ಪೊಕ್ಕು ಕದ್ದು ತಿಂಬುವಗೆ ॥ 2 ॥

ಗಂಭೀರ ಪುರುಷನಿವನೆಂಬನೆ ದಿಗಂಬರ ।
ಅಂಬರದೊಳಗೆ ಕುದುರೆಯನು ಕುಣಿಸುವ ॥
ಅಂಬುಜಾಕ್ಷ ಸಿರಿ **ಪುರಂದರವಿಠಲನ** ।
ಸಂಭ್ರಮದಿ ನೀ ಮೆಚ್ಚಿ ಮದುವೆಯಾದ್ಯಲ್ಲೆ ॥ 3 ॥

****

106. ಇಟ್ಟಿಗೆ ಮೇಲೆ ನಿಂತ ನಮ್ಮ ವಿಠಲ ತಾನು

ರಾಗ: ನಾದನಾಮಕ್ರಿಯ **ತಾಳ: ಆದಿ**

ಇಟ್ಟಿಗೆ ಮೇಲೆ ನಿಂತ ನಮ್ಮ ವಿಠಲ ತಾನು ।
ಪುಟ್ಟಪಾದ ಊರಿನಿಂತ ದಿಟ್ಟತಾನು ॥ ಪ ॥

ಪುಟ್ಟಪಾದಊರಿ ಗಟ್ಟಿಯಾಗಿ ನಿಂತುಕೊಂಡು ।
ಟೊಂಕದ ಮೇಲೆ ಕೈಯನ್ನಿಟ್ಟು ।
ಭಕ್ತರು ಬರುವುದ ನೋಡುವನು ॥ ಅ. ಪ ॥

ಪಂಡರಪುರದಲ್ಲಿ ಇರುವನಂತೆ ।
ಪಾಂಡುರಂಗನೆಂಬುವನಂತೆ ॥
ಚಂದ್ರಭಾಗಪಿತನಿವನಂತೆ ।
ಅಂಗನೆರುಕ್ಮಿಣಿಗರಸನಂತೆ ॥ 1 ॥

ಹಣದಾಸೆ ಇವಗಿಲ್ಲವಂತೆ ।
ಕನಕದಾಸೆ ಬೇಕಿಲ್ಲವಂತೆ ॥
ನಾದಬ್ರಹ್ಮನೆಂಬುವನಂತೆ ।
ಭಕ್ತರ ಭಜನೆಗೆ ಒದಗುವನಂತೆ ॥ 2 ॥

ಕರಿಯ ಕಂಬಳಿ ಹೊದ್ದಿಹನಂತೆ ।
ಹಣೆಯಲಿ ನಾಮವ ಹಚ್ಚಿಹನಂತೆ ॥
ತುಳಸೀಮಾಲೆ ಹಾಕಿಹನಂತೆ ।
ಪುರಂದರವಿಠಲ ತಾ ಒಲಿಯುವನಂತೆ ॥ 3 ॥

****

107. ಕರವಮುಗಿದ ಮುಖ್ಯಪ್ರಾಣ

ರಾಗ: ಕಾನಡ **ತಾಳ: ಆದಿ**

ಕರವ ಮುಗಿದ ಮುಖ್ಯಪ್ರಾಣ ಕರವ ಮುಗಿದ ॥ ಪ ॥

ಕರವ ಮುಗಿದ ಶ್ರೀ ಹರಿಗೆ ಎದುರಾಗಿ ।
ದುರುಳರ ಸದೆದು ಶರಣರ ಪೊರೆಯೆಂದು ॥ ಅ.ಪ ॥

ಜೀವೇಶರೈಕ್ಯವು ಜಗತುಮಿಥ್ಯವೆಂದು ।
ಈ ವಿಧ ಪೇಳುವಮಾಯಿಗಳಳಿಯೆಂದು ॥ 1 ॥

ಇಲ್ಲಿಮಾತ್ರವುಭೇದ ಅಲ್ಲಿಒಂದೇಎಂಬ ।
ಕ್ಷುಲ್ಲಕರನು ಪಿಡಿದ್ಹಲ್ಲು ಮುರಿಯೆಂದು ॥ 2 ॥

ತಾರತಮ್ಯ ಪಂಚಭೇದ ಸತ್ಯವೆಂಬ ।
ಮಾರುತಮತ ಪೊಂದಿದವರ ನೀ ಕಾಯೆಂದ ॥ 3 ॥

ಪರಿ ಪರಿ ಭಕ್ತರ ಹೃದಯದೊಳಗೆ ನಿಂತು ।
ನಿರುತ ಮಾಡುವ ಕರ್ಮ ಹರಿಗೆ ಅರ್ಪಿತವೆಂದು ॥ 4 ॥

ಹರಿ ಮಾಡುವ ವ್ಯಾಪಾರ ಬಲ್ಲ ಕಾರಣನಾಗಿ ।
ಗುರು **ಪುರಂದರವಿಠಲ**ಗೆರಗಿನಿಂತು ॥ 5 ॥

****

5. ಶ್ರೀ ಕನಕದಾಸರ ಕೀರ್ತನೆಗಳು

(ಅಂಕಿತ: ಆದಿಕೇಶವ. ಕಾಲ: 1508–1606)

108. ಸತ್ಯವಂತರ ಸಂಗವಿರಲು

ರಾಗ: ಹಂಸಾನಂದಿ ತಾಳ: ಆದಿ

ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ ।
ನಿತ್ಯ ಅನ್ನದಾನವಿರಲು ಭಯವು ಏತಕೆ ॥ ಪ ॥

ತಾನು ಉಣ್ಣದೆ ಪರರಿಗಿಕ್ಕದ ಅನ್ನವಿದ್ಯಾತಕೆ ।
ಮಾನಿನಿಯ ತೊರೆದ ಮೇಲೆ ಭೋಗವ್ಯಾತಕೆ ॥
ಜ್ಞಾನವಿಲ್ಲದೆ ನೂರುಕಾಲ ಬದುಕಲ್ಯಾತಕೆ ।
ಮಾನಹೀನನಾಗಿ ಬಾಳ್ವ ಮನುಜನ್ಯಾತಕೆ ॥ 1 ॥

ಮಾತುಕೇಳದೆ ಮಲೆತು ನಡೆವ ಮಕ್ಕಳ್ಯಾತಕೆ ।
ಪ್ರೀತಿಯಿಲ್ಲದೆ ಎಡೆಯಲಿಕ್ಕಿದ ಅನ್ನವ್ಯಾತಕೆ ॥
ನೀತಿಯರಿತು ನಡೆಯದಿರುವ ಬಂಟನ್ಯಾತಕೆ ।
ಸೋತು ಹೆಣ್ಣಿಗೆ ಹೆದರಿ ನಡೆವ ಪುರುಷನ್ಯಾತಕೆ ॥ 2 ॥

ಸನ್ನೆಯರಿತು ನಡೆಯದಿರುವ ಸತಿಯು ಯಾತಕೆ ।
ಮನ್ನಣೆಯ ನಡೆಸದಿರುವ ದೊರೆಯು ಯಾತಕೆ ॥
ಮುನ್ನಕೊಟ್ಟು ಪಡೆಯದನ್ನ ಬಯಸಲ್ಯಾತಕೆ ।
ಚೆನ್ನ **ಆದಿಕೇಶವ**ನಲ್ಲದ ದೈವ ಯಾತಕೆ ॥ 3 ॥

****

109. ಏಳು ನಾರಾಯಣ ಏಳು ಲಕ್ಷ್ಮೀರಮಣ

ರಾಗ: ಭೌಳಿ ತಾಳ: ಛಾಪು

ಏಳು ನಾರಾಯಣ । ಏಳು ಲಕ್ಷ್ಮೀರಮಣ ।
ಏಳು ಶ್ರೀಗಿರಿಯೊಡೆಯ ವೆಂಕಟೇಶ । ಏಳಯ್ಯ ಬೆಳಗಾಯಿತು ॥ ಪ ॥

ಕಾಸಿದ್ದ ಹಾಲನ್ನು ಕಾವಡಿಯೊಳ್ ಹೆಪ್ಪಿಟ್ಟು ।
ಲೇಸಾಗಿ ಕಡೆದು ಹೊಸಬೆಣ್ಣೆಯನು ಕೊಡುವೆ ॥
ಶೇಷಶಯನನೆ ಏಳು ಸಮುದ್ರಮಥನವ ಮಾಡು ।
ದೇಶ ಕೆಂಪಾಯಿತೇಳಯ್ಯ ಹರಿಯೇ ॥ 1 ॥

ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ ।
ಸುರರು ತಂದಿದ್ದಾರೆ ಬಲು ಭಕುತಿಯಲಿ
ಅರವಿಂದನಾಭ ಸಿರಿ ವಿಧಿಭವಾದಿಗಳೊಡೆಯ
ಪಿರಿದಾಗಿ ಕೋಳಿ ಕೂಗಿತ್ತೇಳಯ್ಯ ಹರಿಯೇ ॥ 2 ॥

ದಾಸರೆಲ್ಲರು ಬಂದು ಧೂಳಿದರುಶನಗೊಂಡು
ಲೇಸಾಗಿ ತಾಳ ದಂಡಿಗೆಯ ಪಿಡಿದು ॥
ಶ್ರೀಶಾದಿಕೇಶವನೆ ನಿಮ್ಮ ಪಾದಗಳನ್ನು ।
ಲೇಸಾಗಿ ಸ್ಮರಿಸಿ ಪೊಗಳುವರು ಹರಿಯೆ ॥ 3 ॥

****

110. ರಾಮ ಗೋವಿಂದ ಹರೇಕೃಷ್ಣ

ರಾಗ: ಷಣ್ಮುಖ ಪ್ರಿಯ **ತಾಳ: ಆದಿ**

ರಾಮ ಗೋವಿಂದ ಹರೇಕೃಷ್ಣ ।
ಗೋವಿಂದ ರಾಮಹರೇ ಕೃಷ್ಣ ।
ದಾಮೋದರ ಹರಿ ವಿಷ್ಣು ಮುಕುಂದ ॥ ಪ ॥

ಮತ್ಸ್ಯಾವತಾರದೊಳ್ ಆಡಿದನೆ ।
ಮಂದರಗಿರಿ ಬೆನ್ನಲ್ ಆಂತವನೆ ॥
ಅಚ್ಚ ಸೂಕರನಾಗಿ ಬಾಳಿದನೆ ಮದ ।
ಹೆಚ್ಚೆ ಹಿರಣ್ಯನ ಸೀಳಿದನೆ ॥ 1 ॥

ಬಲಿಯೊಳು ದಾನವ ಬೇಡಿದನೆ ಕ್ಷತ್ರ ।
ಕುಲವ ಬಿಡದೆ ಕ್ಷಯ ಮಾಡಿದನೆ ॥
ಜಲನಿಧಿಗೆ ಬಿಲ್ಲ ಹೂಡಿದನೆ ವ್ರಜ ।
ಗೊಲ್ಲತಿಯರೊಳು ಆಡಿದನೆ ॥ 2 ॥

ಸಾಧಿಸಿ ತ್ರಿಪುರರ ಗೆಲಿದವನೆ ।
ಪ್ರತಿವಾದಿಸಿ ಹಯವೇರಿ ನಲಿದವನೆ ॥
ಭೇದಿಸಿ ವಿಶ್ವವ ಗೆಲಿದವನೆ ಬಾಡ ।
ದಾದಿಕೇಶವ ಮನಗೊಲಿದವನೆ ॥ 3 ॥

****

111. ತನು ನಿನ್ನದು ಜೀವನ ನಿನ್ನದು

ರಾಗ: ಕೇದಾರ ಗೌಳ　　　　　　　　　　　　　　　ತಾಳ: ಆದಿ

ತನು ನಿನ್ನದು ಜೀವನ ನಿನ್ನದು ।
ಅನುದಿನದಲಿ ಬಾಹೋ ಸುಖದುಃಖ ನಿನ್ನದು ॥ ಪ ॥

ಸವಿನುಡಿ ವೇದ ಪುರಾಣ ಶಾಸ್ತ್ರಗಳ ।
ಕಿವಿಗೊಟ್ಟು ಕೇಳುವ ಕಥೆ ನಿನ್ನದು ॥
ನವಮೋಹನಾಂಗಿಯರ ರೂಪದ ಕಣ್ಣಲ್ಲಿ ।
ಎವೆ ಇಕ್ಕದೆ ನೋಡುವ ಆ ನೋಟ ನಿನ್ನದು ॥ 1 ॥

ಒಡಗೂಡಿ ಗಂಧ ಕಸ್ತೂರಿ ಪರಿಮಳಗಳ ।
ಬಿಡದೆ ಲೇಪಿಸಿ ಕೊಂಬುವುದು ನಿನ್ನದು ॥
ಷಡುರಸದನ್ನಕೆ ನಲಿದಾಡುವ ಜಿಹ್ವೆ ।
ಕಡುರುಚಿಗೊಂಡರೆ ಆ ರುಚಿ ನಿನ್ನದಯ್ಯ ॥ 2 ॥

ಮಾಯಾಪಾಶದ ಬಲೆಯೊಳಗೆ ಸಿಲುಕಿರುವಂಥ ।
ಕಾಯ ಪಂಚೇಂದ್ರಿಯಗಳು ನಿನ್ನದು ॥
ಕಾಯಜಪಿತ ಕಾಗಿನೆಲೆಯಾದಿಕೇಶವ ।
ರಾಯ ನೀನಲ್ಲದೆ ನರರು ಸ್ವತಂತ್ರರೆ ॥ 3 ॥

****

112. ಹೂವು ತರುವರ ಮನೆಗೆ

ರಾಗ: ಚಾರುಕೇಶಿ　　　　　　　　　　　　　　　ತಾಳ: ಝಂಪೆ

ಹೂವು ತರುವರ ಮನೆಗೆ ಹುಲ್ಲ ತರುವೆ ।
ಆವ ಪರಿಯಲಿ ಸಲಹೊ ದೇವ ಚಿನ್ಮಯನೇ ॥ ಪ ॥

ಈರೇಳು ಜನುಮದಿಂ ದಾಸನಾಗಿಹೆ ನಾನು ।
ಸೇರಿದೆನೊ ತವಶರಣರ ಸೇವೆಗೆ ॥
ಘೋರದುರಿತಗಳೆಂಬ ವಾರಿಧಿಯ ಬತ್ತಿಸಿ ।
ನಾರಸಿಂಹನೆ ದಯದಿ ಸಲಹೆನ್ನ ಸ್ವಾಮಿ ॥ 1 ॥

ರಂಗನಾಥನೆ ನಿನ್ನ ಡಿಂಗರಿಗನೋ ನಾನು ।
ಡಂಗುರವ ಹೊಡಿಸಯ್ಯ ದಾಸನೆಂದು ॥
ಭಂಗಪಡಿಸದೆ ನಿನ್ನ ಶರಣರೊಳಗಿಂಬಿಟ್ಟು ।
ಗಂಗೆಜನಕನೆ ಕಾಯೋ ಚರಣಕ್ಕೆ ಶರಣು ॥ 2 ॥

ಎಷ್ಟು ಮಾಡಲು ನಿನ್ನ ಬಂಟನೊ ವೈಷ್ಣವರ ।
ಹುಟ್ಟುದಾಸಿಯ ಮಗನು ಪರದೇಶಿಯೊ ॥
ಸೃಷ್ಟಿಗೊಡೆಯನೆ ಕಾಗಿನೆಲೆಯಾದಿ **ಕೇಶವನೆ** ।
ಕೈಬಿಟ್ಟೆಯಾದರೆ ನಿನಗೆ ಹರಿದಾಸರಾಣೆ ॥ 3 ॥

****

113. ವರವ ಕೊಡು ಎನಗೆ ವಾಗ್ದೇವಿ

ರಾಗ: ಕಲ್ಯಾಣಿ **ತಾಳ: ಆದಿ**

ವರವ ಕೊಡು ಎನಗೆ ವಾಗ್ದೇವಿ ।
ನಿಮ್ಮ ಚರಣಕಮಲಂಗಳ ದಯಮಾಡು ದೇವಿ ॥ ಪ ॥

ಶಶಿಮೊಗದ ನಸುನಗೆಯ ಬಾಲೆ ।
ಎಸೆವ ಕರ್ಣದಿ ಮುತ್ತಿನೋಲೆ ॥
ನಸುನಗುವ ಸುಲಿಪಲ್ಲ ಗುಣಶೀಲೆ ದೇವಿ ।
ಬಿಸಜಾಕ್ಷಿ ಎನ್ನ ಹೃದಯದೊಳು ನಿಂದವಳೆ ॥ 1 ॥

ಇಂಪು ಸೊಂಪಿನ ಚಂದ್ರಬಿಂಬೆ ।
ಕೆಂಪುತುಟಿಗಳ ನಾಸಿಕದ ರಂಬೆ ।
ಜೊಂಪು ಮದನನ ಪೂರ್ಣ ಶಕ್ತಿಬೊಂಬೆ ।
ಒಳ್ಳೆಸಂಪಿಗೆಯ ಮುಡಿಗಿಟ್ಟು ರಾಜಿಪ ಶಾರದಾಂಬೆ ॥ 2 ॥

ರವಿಕೋಟಿ ತೇಜ ಪ್ರಕಾಶ ಮಹಾ ।
ಕವಿಜನರ ಹೃತ್ಕಮಲವಾಸೆ ॥
ಅವಿರಳಪುರಿಯ ಸಿರಿ ಕಾಗಿನೆಲೆಯಾದಿ ।
ಕೇಶವನ ಸನ್ನುತ ರಾಣಿವಾಸೆ ॥ 3 ॥

****

114. ಭಜರೇ ನರಸಿಂಹಂ ಮಾನಸ

ರಾಗ: ಹಂಸಾನಂದಿ ತಾಳ: ಆದಿ

ಭಜರೇ ನರಸಿಂಹಂ ಮಾನಸ ಭಜರೇ ನರಸಿಂಹಂ ॥ ಪ ॥

ಭಜ ನರಸಿಂಹಂ ಭಜಿತೋತ್ಸಾಹಂ ।
ವಿನುತವರಗಣ ಗಂಧರ್ವಸಮೂಹಂ ॥ ಅ.ಪ ॥

ದುರಿತವಿದೂರಂ ಶರಧಿಗಂಭೀರಂ ।
ಚಾರುಶರೀರಂ ಕರುಣಾಪಾರಂ ॥ 1 ॥

ಶರದಿಂದುವದನಂ ವರಕುಂದರದನಂ ।
ಅರವಿಂದನಯನಂ ಉರಗೇಂದ್ರಶಯನಂ ॥ 2 ॥

ಖಳಜನ ಕಾಲಂ ಕಾಂಚನಚೇಲಂ ।
ಸುಲಲಿತಫಾಲಂ ಸುಗುಣವಿಶಾಲಂ ॥ 3 ॥

ಸತತಾನಂದಂ ಸತ್ಯಮುಕುಂದಂ ।
ಸದ್ಗುಣವರ್ಯಂ ಪ್ರಹ್ಲಾದಸ್ತುತ್ಯಂ ॥ 4 ॥

ಕರುಣಾಪಾಂಗಂ ವರನರಸಿಂಹಂ ।
ಗುರುಚನ್ನಕೇಶವ ಕದಳೀರಂಗಂ ॥ 5 ॥

****

115. ಈ ಸಿರಿಯ ನಂಬಿ ನೀ ಹಿಗ್ಗಲು ಬೇಡ

ರಾಗ: ಆಭೋಗಿ ತಾಳ: ಖಂಡಛಾಪು

ಈ ಸಿರಿಯ ನಂಬಿ ನೀ ಹಿಗ್ಗಲುಬೇಡ ।
ವಾಸುದೇವನ ಭಜಿಸೊ ಒರಟುಜೀವನವೇ ॥ ಪ ॥

ಮಡದಿ ಮಕ್ಕಳು ಎಂಬ ಮಾಯಸಂಸಾರಕ್ಕೆ ।
ಸಡಗರವ ತಾಗೊಂಡು ಭ್ರಮಿಸಲೇಕೆ ॥
ಬಿಡದೆ ಯಮನಾಳುಗಳು ಬಾರೆಂದು ।
ಎಳೆವಾಗ ಮಡದಿಮಕ್ಕಳು ತೊಲಗುವರು ಮನವೇ ॥ 1 ॥

ನೆಂಟರೂರಿಗೆ ಹೋಗಿ ನಾಲ್ಕುದಿವಸವಿದ್ದರೆ ।
ಎಂಟುದಿನದಾಯಾಸ ಅಟ್ಟಬಹುದೋ ॥
ಉಂಟು ಸೌಭಾಗ್ಯವೆಂಬ ಧ್ಯಾನವಬಿಟ್ಟು ವೈ ।
ಕುಂಠವಾಸಿಯ ಭಜಿಸೊ ತುಂಟಜೀವನವೆ ॥ 2 ॥

ಇಷ್ಟು ಸಂಪತ್ತನ್ನು ಬಡವರ ಕರೆತಂದು ।
ಕೊಟ್ಟು ಮಾಡಿದ ಪುಣ್ಯಫಲ ತನ್ನದೋ ॥
ಸೃಷ್ಟಿಯೊಳು **ಕಾಗಿನೆಲೆಯಾದಿ ಕೇಶವ**ನಂಘ್ರಿ ।
ಮುಟ್ಟಿ ಮನದಲಿ ಭಜಿಸೊ ಭ್ರಷ್ಟಜೀವನವೇ ॥ 3 ॥

****

116. ನೆಚ್ಚದಿರು ಸಂಸಾರ ನೆಲೆಯಲ್ಲ ವೀ ಕಾಯ

ರಾಗ: ಸಿಂಧುಭೈರವಿ **ತಾಳ: ಛಾಪು**

ನೆಚ್ಚದಿರು ಸಂಸಾರ ನೆಲೆಯಲ್ಲವೀ ಕಾಯ ।
ಅಚ್ಚುತನ ನಾಮವನು ನೆನೆದು ಸುಖಿಯಾಗು ಮನವೇ ॥ಪ॥

ಗಳಿಸದಿರು ಸೀಮೆಯನು ಗಳಿಸದಿರು ದ್ರವ್ಯವನು ।
ಗಳಿಸದಿರು ನೀ ದುರಿತರಾಶಿಗಳನು ॥
ನಳಿನನಾಭನ ದಿವ್ಯನಾಮವನು ನೆನೆನೆನೆದು
ನೆಲೆಯಾದ ಪರಮಪದವಿಯ ಪಡೆಯೊ ಮನವೇ ॥ 1 ॥

ನೋಡದಿರು ಪರಸತಿಯ ಕೂಡದಿರು ದುರ್ಜನರ ।
ಆಡದಿರು ಮಾತುಗಳ ಗರ್ವದಿಂದ ಬೇಡದಿರು ॥
ಕೈಯ್ಯ ಹಿಂದಕೆ ತೆಗೆವ ಹೇಡಿಯನು ।
ಕೊಂಡಾಡದಿರು ಬೀದಿಗೂಳುಂಬ ದೈವಗಳ ॥ 2 ॥

ನಾನಾಜನ್ಮದಿ ಬಂದ ನಾಟಕದ ಬೊಂಬೆ ಇದು ।
ಮಾನಕ್ಕೆ ಮೆಚ್ಚಿ ನೀ ಮರುಳಾಗದೆ ॥
ಜಾಣತನದಿಂದ ಕಾಗಿನೆಲೆಯಾದಿ **ಕೇಶವ**ನ ।
ಮಾನಸದಿ ನೆನೆದು ಸುಖಿಯಾಗು ಮನವೇ ॥ 3 ॥

117. ನೀ ಎನ್ನ ಕಾಯಬೇಕಯ್ಯ ಆಂಜನೇಯ

ರಾಗ: ಬೃಂದಾವನೀ ತಾಳ: ಆದಿ

ನೀ ಎನ್ನ ಕಾಯಬೇಕಯ್ಯ ಆಂಜನೇಯ ॥ ಪ ॥

ನೀನು ಎನ್ನ ಕಾಯಬೇಕು ನಾನು ನಿನ್ನ ಭಜಿಸಬೇಕು ।
ನೀನು ನಾನು ಒಂದುಗೂಡಿ ರಾಮಭಜನೆ ಮಾಡಬೇಕು ॥ ಅ.ಪ ॥

ದುಸ್ತರದ ಸಂಸಾರಜಲಧಿಯ ।
ರಾಮನಾಮದ ನೌಕೆಯಲ್ಲಿ ॥
ದಾಟಹೊರಟಿಹ ನಾನು ಪಯಣಿಗ ।
ನೀನೆ ಅಂಬಿಗ ದಾಟಿಸಯ್ಯ ॥ 1 ॥

ರಾಮನಾಮದ ಸಾರವನ್ನು
ಹೀರಿ ಸವಿದಿಹ ಧೀರನೀನು ॥
ರಾಮತಾರಕ ಮಂತ್ರಶಕ್ತಿಯ
ಲೋಕಕ್ಕೆಲ್ಲಕೂ ತೋರಿದಾತನು ॥ 2 ॥

ಆಜನ್ಮ ಬ್ರಹ್ಮಚಾರಿ ಅಪ್ರತಿಮ
ಬಲಶಾಲಿ ನೀನು ॥
ಆದಿಕೇಶವನ ಭಂಡಾರವನು ।
ಭಕ್ತವೃಂದಕೆ ನೀಡುವಾತನು ॥ 3 ॥

****

118. ಜಪವ ಮಾಡಿದರೇನು

ರಾಗ: ಹಿಂದೋಳ ತಾಳ: ಖಂಡಛಾಪು

ಜಪವ ಮಾಡಿದರೇನು ತಪವ ಮಾಡಿದರೇನು ।
ಕಪಟಗುಣ ವಿಪರೀತ ಕಲುಷವಿದ್ದವರು ॥ ಪ ॥

ಆದಿಗುರುವರಿಯದೆ ಅತ್ತಲಿತ್ತಲು ತೊಳಲಿ ।
ವೇದಶಾಸ್ತ್ರವನೋದಿ ಬಾಯಾರಲು ॥
ಹಾದಿಯನು ಕಾಣದಿಂದಿರುತಿರ್ದು ಹಲವೆಂಟು ।
ವಾದತರ್ಕದೊಳಿದ್ದ ಭೇದವಾದಿಗಳು ॥ 1 ॥

ನುಡಿ ನಡೆವ ಕಾಲದಲಿ ದಾನಧರ್ಮ ಮಾಡದೆ ।
ಅಡವಿಯೊಳು ಕೆರೆತುಂಬಿ ಬತ್ತಿದಂತೆ ॥
ಮಡದಿ ಮಕ್ಕಳಿಗೆಂದು ಒಡವೆ ವಸ್ತ್ರವ ಗಳಿಸೆ ।
ಹಿಡಿಯಲಾ ಯಮನವನ ಕಟ್ಟಿಗೊಳಗಾಗಿ ॥ 2 ॥

ಚಳಿಮಳೆ ಅತಿಕಾರುಗತ್ತಲೆಯೊಳೆದ್ದು ।
ಹೊಳೆಯೊಳಗೆ ಮುಳುಗಿ ಜಪತಪವ ಮಾಡಿ ॥
ಕಳವಳಿಸಿ ನೂರೆಂಟು ತೊಳಲಿ ಬಳಲಲಿಬೇಡ ।
ನಳಿನಾಕ್ಷ ಆದಿಕೇಶವನ ನೆನೆಮನವೆ ॥ 3 ॥

****

119. ಅರಸನಂತೆ ಬಂಟನೋ ಹನುಮರಾಯ

ರಾಗ: ವೀಣಾನಾದಿನಿ **ತಾಳ: ರೂಪಕ**

ಅರಸನಂತೆ ಬಂಟನೋ ಹನುಮರಾಯ ।
ದೊರೆಯಂತೆ ಸೇವಕನೋ ಹನುಮರಾಯ ॥ ಪ ॥

ಅರಸನಂತೆ ಬಂಟನೆಂದು ನಿನ್ನೊಳು ಕುರುಹುತೋರಿತು ।
ಮೂರುಲೋಕಕೆ ಹನುಮರಾಯ ॥ ಅ.ಪ ॥

ಒಡೆಯ ಅಂಬುಧಿಯೊಳು ಪೊಕ್ಕು ವೇದವ ತಂದು ।
ತಡೆಯದೆ ಅಜಗಿತ್ತನೆಂದೆನುತ ॥
ಸಡಗರದಿಂದ ವಾರಿಧಿಯ ದಾಂಟಿ ಪೇ ।
ರ್ಮುಡಿ ಮಾಣಿಕವ ರಾಘವಗಿತ್ತೆ ಹನುಮ ॥ 1 ॥

ಮಂದರಧರ ಗೋವರ್ಧನ ಗಿರಿ ನಲ ।
ವಿಂದನಿಂದು ನೆಗಹಿದನೆನುತ ॥
ಸಿಂಧುಬಂಧನಕೆ ಸಮಸ್ತ ಪರ್ವತಗಳ ।
ತಂದು ನಳಿನ ಕೈಯೊಳಗಿತ್ತೆ ಹನುಮ ॥ 2 ॥

ಸಿರಿಕಾಗಿನೆಲೆಯಾದಿ ಕೇಶವರಾಯನು ।
ಸುರರಿಗಮೃತವನ್ನು ಎರೆದ ಎನುತ ॥
ಮರೆವ ಗಿರಿಯವಾಸ ಕಪಿಲಕುಲ ಸೌಮಿತ್ರಿ ।
ಗೆರೆದ ದ್ರೋಣಾದ್ರಿ ಸಂಜೀವನ ಹನುಮ ॥ 3 ॥

120. ಅಂಬುಜಾಕ್ಷಗೆ ಮಂಗಳ

ರಾಗ: ಸುರುಟಿ ತಾಳ: ಆದಿ

ಅಂಬುಜಾಕ್ಷಗೆ ಮಂಗಳ ।
ಸರ್ವಜೀವರಕ್ಷಗೆ ಮಂಗಳ ॥

ಜಲಧಿಯೊಳ್ ಮಾಯೆಯ ತಂದಗೆ ಮಂಗಳ ।
ಕುಲಗಿರಿ ತಾಳ್ದಗೆ ಜಯಮಂಗಳ ॥
ನೆಲನ ಕದ್ದ ಅಸುರನ ಗೆಲಿದಗೆ ಮಂಗಳ ।
ಸುಲಭ ನರಸಿಂಹಗೆ ಶುಭಮಂಗಳ ॥ 1 ॥

ವಸುಧೆಯ ಈರಡಿ ಗೈದಗೆ ಮಂಗಳ ।
ವಸುದೀಪ ಅಳಿದಗೆ ಜಯಮಂಗಳ ॥
ದಶಕಂಠನನು ಗೆಲಿದಗೆ ಮಂಗಳ ।
ಪಶುಗಳ ಕಾಯ್ದಗೆ ಶುಭಮಂಗಳ ॥ 2 ॥

ಪುರತ್ರಯ ವಧುಗಳ ಗೆಲಿದಗೆ ಮಂಗಳ ।
ತುರಗವಾಹನನಿಗೆ ಜಯಮಂಗಳ ॥
ವರನೆಲೆಯಾದಿ ಕೇಶವಗೆ ಮಂಗಳ ।
ಪರಮಪವಿತ್ರಗೆ ಶುಭಮಂಗಳ ॥ 3 ॥

****

6. ಕಾಖಂಡಕಿ ಕೃಷ್ಣರಾಯರ ಕೀರ್ತನೆಗಳು

(ಅಂಕಿತ: ಗುರುಮಹಿಪತಿವಿಠಲ. ಕಾಲ: 1670–1710)

121. ಗುರುವನು ಯಾಕೆ ಮರೆಯುವಿರಣ್ಣಾ

ರಾಗ: ಭೀಂಪಲಾಸ್ ತಾಳ: ಆದಿ

ಗುರುವನು ಯಾಕೆ ಮರೆಯುವಿರಣ್ಣಾ ।
ಈ ಲೋಕದೊಳಗೆ ॥ ಪ ॥

ಸಿರಿಯರಸನ ಶುಭಚರಣದರಹು ನೀಡಿ ।
ಧರೆಯೊಳು ದೀನರುದ್ಧರಿಸುತ ಮೆರೆವಾ ॥ ಅ.ಪ ॥

ಮನಸಿನ ಜಾಡ್ಯತನವನು ಬಿಡಿಸಿ ।
ಶ್ರವಣಾದಿಗಳಿಂದ ॥
ಅನುವಾಗಿ ಬೋಧಾಮೃತವನೆ ಕುಡಿಸಿ ।
ಭಕ್ತಿಯ ಕಳೆಯೆಂಬಾ ॥
ಘನವಾದಲಂಕಾರವನೆ ತೊಡಿಸಿ ।
ಯೋಗದಸಿರಿಯಿಂದ ॥
ಚಿನುಮಯ ಮಂದಿರವನು ತೋರಿಸುವೆ
ಶ್ರೀಗುರು ಕೃಪೆಯಿಂದ ॥ 1 ॥

ನೀರಿನಬೊಬ್ಬುಳಿಯಂತೀ ತನುವು ।
ಮಿಂಚಿದಾತೆರನಂತೆ ॥
ತೋರಿ ಅಡಗುವುದು ಸಂಪದ ಧನವು ।
ವಿಷಯಂಗಳ ತಾ ಮಗ ॥
ನೀರಂತೆ ಕಾಣದೆ ಮೋಹಿಪಮನವು ।
ಇದನೆಚ್ಚದೇಭಾಗ ॥
ಘೋರವೆನಿಪ ಸಂಸಾರದ ಬಲಿಯನು ।
ಜಾರಿ ಶುಭೇಚ್ಛೆ ವಿಚಾರಕೆ ತಂದ ॥ 2 ॥

ಅತಿ ಸ್ನೇಹದಿಂದಲಿ ಅಭಯವ ನೀಡಿ ।
ವೇದಾಂತದ ನುಡಿಯಾ ॥
ನತರಿಂಗೆ ವಿಚಾರಿಸಿ ತಾ ದಯಮಾಡಿ ।
ಲೋಹಪರುಸವ ಮೆರೆದಾ ॥

ಗತಿಯಂತೆ ಮುಕ್ತನ ಮಾಡುವ ನೋಡಿ ।
ಸ್ವಾನುಭವದ ಸುಖದಾ ಕ್ಷಿತಿಯೊಳು ॥
ಗುರುಮಹೀಪತಿ ಸತಿಪ್ರಭುವಿನ ।
ಗತಿ ಮತಿ ಕೂಡಿಸಿ ಗತಿಯನು ಕೊಡುವ ॥ 3 ॥

****

122. ಶಂಭೋ ಮಹಾದೇವಾ

ರಾಗ: ರಾಗವಾಸಂತಿ **ತಾಳ: ಆದಿ**

ಶಂಭೋ ಮಹಾದೇವಾ ।
ಶಿವ ಶಿವ, ಶಂಭೋ ಮಹಾದೇವಾ ॥ ಪ ॥

ಅದ್ರಿಧರಪ್ರಿಯ ಅದ್ರಿಕೃತಾಲಯ ।
ಅದ್ರಿಜಾಮಾತ ಅದ್ರಿರಿಪುನುತ ॥
ಅದ್ರಿಜಪತಿ ಪಾಪಾದ್ರಿಕುಲಿಶ ಕನ ।
ಕಾದ್ರಿ ಶರಾಸನ ಮುದ್ರಿತಪಾಣೆ ॥ 1 ॥

ಉನ್ಮತ್ತದಿಂದಲಿ ಮನ್ಮಥ ಬರಲು ದ ।
ಹನ್ಮಾಡಿದ ಷಣ್ಮುಖಜನಕನೆ ।
ಉನ್ಮನಯೋಗಿ ಸನ್ನುತಲೀಲಾ ।
ಜನ್ಮರಹಿತ ಘನ ಚಿನ್ಮಯ ರೂಪ ॥ 2 ॥

ಭರಿಸಿದ ಗಂಗೆಯನಿರಿಸಿದೆ ಜಡೆಯೊಳು ।
ಧರಿಸಿದೆ ಚಂದ್ರನ ಮೆರೆಸಿದೆ ಭಕ್ತರ ॥
ಗುರುಮಹಿಪತಿಯಂಕುರಿಸಿದ ಬಾಲನ ।
ಸಿರಸದಲ್ಲಿಡು ನಿಜಪರಸಾದ ಕೈಯಾ ॥ 3 ॥

****

123. ದೇವಾದಿಗಳ್ ವಂದಿತನಹುದೊ

ರಾಗ: ಹಿಂದೋಳ **ತಾಳ: ಆದಿ**

ದೇವಾದಿಗಳ್ ವಂದಿತನಹುದೊ ।
ಸ್ವಾಮಿಗಣನಾಥ ಶರಣು, ಶರಣು, ಶರಣು ॥ ಪ ॥

ಅಖಿಲಭುವನದೊಳು ಪೂಜಿತ ।
ಭಕುತಜನಕೆ ನೀ ಸಾಕ್ಷಾತ ॥
ಸಕಲವಿದ್ಯಾ ವರದಾತ ।
ಶಕುತಹೃದಯ ಪ್ರಖ್ಯಾತ ॥ 1 ॥

ಶುದ್ಧಬುದ್ಧರ ಸಹಕಾರಬುದ್ಧಿ
ಈಶ ಈವ ಘನ ಉದಾರ ॥
ಋದ್ಧಿಸಿದ್ಧಿಗಾಗಿಹೆ ನೀ ಆಧಾರ ।
ಸಿದ್ಧಿದಾಯಕ ವಿಘ್ನಹರ ॥ 2 ॥

ಜನಕ ಮಾಡುವೆ ದೋಷನಾಶ ।
ಅನುದಿನವು ಮತಿಪ್ರಕಾಶ ॥
ದೀನ**ಮಹಿಪತಿ**ಯ ।
ಮನೋಭಾವಪೂರಿತ ॥ 3 ॥

****

124. ಗುರುವಿನ ಕಾಣದೆ ಪರಗತಿ ದೊರೆಯದು

ರಾಗ: ಸಾರಂಗ **ತಾಳ: ಆದಿ**

ಗುರುವನು ಕಾಣದೆ ಪರಗತಿ ದೊರೆಯದು ॥ ಪ ॥

ಪರಗತಿ ದೊರೆಯದು ಗುರುವಿನ ಕಾಣದೆ ಪರಗತಿ ॥ ಅ.ಪ ॥

ವೇದ ಶಾಸ್ತ್ರಗಳೋದಿ ಭೇದಿಸದೆ ।
ವಾದದಿಂದ ಜನರ ಗೆದ್ದನು ॥
ಕಾದಿಬೂದಿಗೊಂಡ ಗಾದಿಯಂತೆ ನಿಜ ।
ಸಾಧುರ್ಹಾದಿಯನೆ ಮರೆತನು ॥ 1 ॥

ಚಾರು, ಕರ್ಮ, ಧರ್ಮಸಾರ ಯಜ್ಞಾದಿ ।
ಭೂರಿಯಶವನೆ ಪಡೆದನು ॥
ಏರಿ ಸ್ವರ್ಗದಿ ಜಾರಿಬಿದ್ದ ಸಂ ।
ಸಾರವಾರಿಯ ಸೇರಿದನು ॥ 2 ॥

ರಂಜನಿಂದ, ಒಣಭಂಜನ್ಯಾತಗಿದು ।
ಕಂಜನಾಭನು ನೆರೆ ನಿಲುಕನು ॥
ಅಂಜಲೆತ್ತಿದರ **ಗುರುಮಹಿಪತಿ** ।
ಪ್ರಾಂಜಲಾಗಿ ಘನ ತೋರುವವನು ॥ 3 ॥

125. ಜಯ ಜಯ ಸರಸ್ವತಿ ಭಗವತಿ

ರಾಗ: ಸರಸ್ವತಿ ತಾಳ: ಆದಿ

ಜಯ ಜಯ ಸರಸ್ವತಿ ಭಗವತಿ ।
ಜಯವರ ಪೂರ್ಣಮತಿ ಭಗವತಿ ॥ ಪ ॥

ಜಯ ತ್ರೈಲೋಕ್ಯದಲಿ ಖ್ಯಾತಿ ।
ಜಯ ಸುಕೀರ್ತಿ ಜಯ ಜಯ ಸರಸ್ವತಿ ॥ ಅ.ಪ ॥

ವಿದ್ಯಾದಾಯಿನಿ ಸಿದ್ದಿಗೆ ಶಿಖಾಮಣಿ ।
ಬುದ್ದಿಪ್ರಕಾಶಿನಿ ಸದ್‌ಭೂಷಣಿ ॥ 1 ॥

ಕರಕಮಲದಿವೀಣೆ ಸುರಸ ಅಮೃತ ವಾಣಿ ।
ವರವಿದ್ಯದಲಿ ದಾನಿ ಸುಪ್ರವೀಣೆ ॥ 2 ॥

ಪ್ರಸನ್ನವದನೆ ವಿಶ್ವದಲಿ ನೀಪೂರ್ಣೆ ।
ಹಂಸವಾಹಿನಿ ಪೂರ್ಣಸಿದ್ಧಿನೀ ॥ 3 ॥

ಸದಾ ಸದ್ಗುರು ಸ್ತುತಿ ।
ಒದಗೊ ಹಾಂಗೆ ಸ್ಫೂರ್ತಿ ॥ 4 ॥

ಇದೇ **ಮಹಿಪತಿ** ಕುರ್ತಿ ।
ಬೋಧಿಸು ಸುಮತಿ ॥ 5 ॥

****

126. ನೀನೆ ಪರಮಪಾವನಿ ನಿರಂಜನಿ

ರಾಗ: ರಂಜನಿ ತಾಳ: ಆದಿ

ನೀನೆ ಪರಮಪಾವನಿ ನಿರಂಜನಿ ॥ ಪ ॥

ಆದಿನಾರಾಯಣಿ ಸಾಧುಜನವಂದಿನಿ ।
ಸದಾನಂದರೂಪಿಣೀ ಸದ್ಗತಿದಾಯಿನಿ ॥ 1 ॥

ಲಕುಮಿರೂಪಿಣಿ ಸಾಕ್ಷಾತ್‌ಕಾರಣಿ ರಕ್ಷರಕ್ಷಾತ್ಮಿನಿ ।
ಅಕ್ಷಯಪದ ದಾಯಿನಿ ಅನಾಥರಕ್ಷಿಣಿ ॥ 2 ॥

ದೀನೋದ್ಧಾರಿಣಿ ಅನಂತಾನಂತ ।
ಗುಣಿಮುನಿಜನಭೂಷಣಿ ॥ 3 ॥

ದಾರಿದ್ರ್ಯಭಂಜನಿ ದುರಿತವಿಧ್ವಂಸಿನಿ ॥ 4 ॥
ಪರಮಸಂಜೀವಿನಿ ಸುರಮುನಿರಂಜನಿ

ಸ್ವಾಮಿ ಶ್ರೀಗುರುವಿನ ಬ್ರಹ್ಮಾನಂದರೂಪಿಣಿ ।
ಮಹಿಪತಿಕುಲಸ್ವಾಮಿನಿ ॥ 5 ॥

****

127. ಗಣನಾಥ ಸದ್ಗುರು ಗಣನಾಥ

ರಾಗ: ಮಹತಿ **ತಾಳ: ಆದಿ**

ಗಣನಾಥ ಸದ್ಗುರು ಗಣನಾಥ ।
ಘನಸುಖದಾಯಕ ತದೋದಿತಾ ॥ ಪ ॥

ಅನುದಿನ ಮಾಡುವೆ ಮನೋಹರಾ ।
ಅಣುರೇಣುವಿನೊಳು ನೀ ಸಾಕ್ಷಾತ್ಕಾರ ॥ ಅ.ಪ ॥

ಮುನಿಜನರಿಗಾಗುವೆ ಸಹಕಾರ ।
ನೀನಹುದೋ ಭಕ್ತರ ವಿಘ್ನಹರ ॥ 1 ॥
ನಿಮ್ಮ ಬೋಧನ ಗುಣವೇ ಸರಸ್ವತಿ ।
ಸೌಮ್ಯಜ್ಞಾನ ಬೀರುವ ನಿಜಸ್ಥಿತಿ ॥ 2 ॥

ಬ್ರಹ್ಮಾದಿಗಳೊಂದಿತ ನಿಜಖ್ಯಾತಿ ।
ಬ್ರಹ್ಮಾನಂದ ತೋರುವ ಫಲಶ್ರುತಿ ॥ 3 ॥

ಬೇಡಿಕೊಂಬೆ ನಿಮಗೆ ಅನುದಿನ ।
ಕೊಡುವವರಿಗೆ ನೀ ಎನಗೆ ನಿಧಾನ ॥ 4 ॥

ಮೂಢ **ಮಹಿಪತಿ** ಒಡೆಯ ನೀಪೂರ್ಣ ।
ಮಾಡುತಿಹೆ ನಿತ್ಯವೂ ನಾ ನಮನ ॥ 5 ॥

****

128. ಗುರುಭಕುತಿಯಲಿ ಮನವು

ರಾಗ: ಸಾರಂಗ **ತಾಳ: ಆದಿ**

ಗುರುಭಕುತಿಯಲಿ ಮನವು ಸ್ಥಿರಗೊಳಲಿಬೇಕು ।
ಅರಿತು ಸದ್ಭಾವದಲಿ ದೃಢಗೊಳಿಸಬೇಕು ॥ ಪ ॥

ನಿಶ್ಚಲವಿಡಬೇಕು ದುಶ್ಚಲ ಬಿಡಬೇಕು ।
ನಿಶ್ಚಿಂತದಲ್ಲಿ ನಿಜಸುಖಪಡೆಯಬೇಕು ॥ 1 ॥

ನಂಬಿ ನಡೆಯಬೇಕು ಡಂಭಕವ ಬಿಡಬೇಕು ।
ಹಂಬಲಿಸಿ ಅಂಬುಜಾಕ್ಷನ ನೋಡಬೇಕು ॥ 2 ॥
ವಿಶ್ವಾಸವಿಡಬೇಕು ವಿಷಗುಣವ ಬಿಡಬೇಕು ।
ವಿಶ್ವವ್ಯಾಪಕನ ವಿಶ್ವದಿ ನೋಡಬೇಕು ॥ 3 ॥

ರತಿಪ್ರೇಮ ಬಿಡಬೇಕು ಅತಿಹರುಷ ಪಡಬೇಕು ।
ಸ್ತುತಿಸ್ತವನವನು ಪಾಡಿ ಗತಿಪಡೆಯಬೇಕು ॥ 4 ॥

ಆರು ಜರಿಯಬೇಕು ಮೂರು ಹರಿಯಬೇಕು ।
ಅರಿತು ಗುರುಪಾದ **ಮಹಿಪತಿಯ** ಬೆರೆಯಬೇಕು ॥ 5 ॥

****

129. ಅಕ್ಕ ಕೇಳೇ ನಿನ್ನ ತಪಸಿಯರೊಳಗೊಬ

ರಾಗ: ಜಂಜೂಟಿ **ತಾಳ: ಆದಿ**

ಅಕ್ಕ ಕೇಳೇ ನಿನ್ನ ತಪಸಿಯರೊಳಗೊಬ್ಬ ।
ಮುಕ್ಕಣ್ಣನೀವರಂತೆ ॥
ಮೂರ್ಖನೋ ಗಿರಿರಾಜ ವಿಗಡಮುನಿ ಮಾತನೆ ।
ಲೆಕ್ಕಿಸದೆ ಮದುವೆ ಮಾಡಿಕೊಡುವನಂತೆ ॥ ಪ ॥

ತಲೆಯಲ್ಲಿ ಜಡೆಯಂತೆ ಅದರೊಳಗೆ ಜಲವಂತೆ ।
ತಿಲಕ ಫಣಿಗೆ ಬಾಲಚಂದ್ರನಂತೆ ॥
ಹೊಳೆವ ಕಿಡಿಗಣ್ಣನಂತೆ ನಂಜುಗೊರಳನಂತೆ ।
ಸಲೆ ರುಂಡಮಾಲೆಯ ಕೊರಳಿಗ್ಹಾರ ಹಾಕಿರ್ಪನಂತೆ ॥ 1 ॥

ಉರಗಭೂಷಣನಂತೆ ಭಸ್ಮಲೇಪನನಂತೆ ।
ಕರಿಯ ಚರ್ಮಾಂಬರದ ಉಡಿಗೆಯಂತೆ ॥
ತಿರಿದುಂಬುವನಂತೆ ಬಿಳಿಯ ಮೈಯ್ಯವನಂತೆ ।
ನಿರುತ ಡಮರುಗ ಬಾರಿಸುವ ಜೋಗಿಯಂತೆ ॥ 2 ॥

ಹಡೆದವರಿಲ್ಲವಂತೆ ಎತ್ತನೇರುವನಂತೆ ।
ಅಡವಿಗಿರಿಯಲಿ ಇಪ್ಪನಂತೆ ॥
ಒಡನೆ ಪುಲಿದೊಗಲದ ಹಾಸಿಗೆ ಇಹುದಂತೆ ।
ನುಡಿಗೊಮ್ಮೆ ರಾಮ ರಾಮ ಎಂಬ ಸ್ಮರಣೆ ಇಹುದಂತೆ ॥ 3 ॥

ಮಾರನ ರಿಪುವಂತೆ ಐದು ಮೋರೆಗಳಂತೆ ।
ಆರೂ ಇಲ್ಲದ ಪರದೇಶಿಯಂತೆ ॥
ಧಾರುಣಿಯೊಳು **ಗುರುಮಹಿಪತಿ**ಸುತಪ್ರಭೋ ಭವ ।
ತಾರಕ ಶಿವನೆಂದು ಮರೆಹೋಗಬೇಕಂತೆ ॥ 4 ॥

****

130. ಶರಣೆಂಬೆ ತನುಮನದಿ ಗಣರಾಯ

ರಾಗ: ಹಂಸಧ್ವನಿ **ತಾಳ: ಆದಿ**

ಶರಣೆಂಬೆ ತನುಮನದಿ ಗಣರಾಯ ।
ಕರುಣಿಸೆನಗೆ ನೀ ನರಮೃಗಕಾಯ ॥ 1 ॥

ಸುರಾಸುರ ಪೂಜೆಗೊಳ್ವ ಚರಣವನು ।
ಮೊರೆಯಹೊಕ್ಕೆನು ಕೇಳಿಕೀರ್ತಿಯನು ॥ 2 ॥

ಕೊಂಡಾಡುತಿಹೆ ಪದಪದ್ಯದಿ ಚರಿತೆಯ ।
ಶುಂಡಾಲ ಶುಭಮುಖ ನೀ ಕೊಡುಮತಿಯ ॥ 3 ॥

ಎಂದೆಂದಿಗೂ ಅಪರಾಧಿಯು ನಾನು ।
ಕುಂದನಾರಿಸದೆ ಮಾತನ್ನು ಕೇಳು ॥ 4 ॥

ಅಗಜೆನಂದನ ಗುರು**ಮಹಿಪತಿ** ಸ್ವಾಮಿ ।
ಭಕುತರಕ್ಷಕ ಮುನಿಜನಪ್ರೇಮಿ ॥ 5 ॥

****

7. ಪ್ರಸನ್ವೆಂಕಟದಾಸರ ಕೀರ್ತನೆಗಳು

(ಅಂಕಿತ: ಪ್ರಸನ್ವೆಂಕಟ. ಕಾಲ: 1680–1752)

131. ದಯಮಾಡು ದಯಮಾಡು ಶ್ರೀನಿವಾಸ

ರಾಗ: ರಂಜನಿ ತಾಳ: ಆದಿ

ದಯಮಾಡು ದಯಮಾಡು ಶ್ರೀನಿವಾಸ ।
ಭವಭಯನಿವಾರಣ ಭಜಕ ಭಕ್ತರಘನಾಶ ॥
ನೇಮವೆನ್ನಲಿಲ್ಲ ನಾಮದರಿಕೆಯಿಲ್ಲ ।
ನಾ ಮಹಾಪಾಪಿಯು ಸ್ವಾಮಿ ನೀನೊಲಿದುಗಡ ॥ 1 ॥

ಸದ್ಧರ್ಮಸರಕಿಲ್ಲ, ಶುದ್ಧಬುದ್ಧಿಯು ಇಲ್ಲ ।
ಉದ್ಧರಿಸೆನ್ನ ಅನಿರುದ್ಧ ಹರಿ ಕರುಣಿ ॥
ಸತ್ಕುಲ ಹೊಂದೇನು, ಸದ್ಧರ್ಮಮಾರ್ಗಿಲ್ಲ ।
ಭಕ್ತರಕ್ಷಕ ಪಾಪಮುಕ್ತ ದೇವರದೇವ ॥ 2 ॥

ಅವಗುಣದೆಣಿಕೆಯ ವಿವರನೋಡದೆ ಅಯ್ಯ ।
ಜವನ ಬಲೆಯನು ತಪ್ಪಿಸುವ ಸರೀಸೃಪಶಯ್ಯ ॥
ಅಜಮಿಳ ವ್ಯಾಧ ಆಗಜ ಅಹಲ್ಯೋದ್ಧಾರ ನಿಜ ।
ಪ್ರಸನ್ವೇಂಕಟೇಶ ಸುಜನ ಪರಿಪೋಷ ॥ 3 ॥

****

132. ಕರ್ತಾಕೃಷ್ಣಯ್ಯ ನೀಬಾರಯ್ಯ

ರಾಗ: ಬೃಂದಾವನ ಸಾರಂಗ ತಾಳ: ಆದಿ

ಕರ್ತಾಕೃಷ್ಣಯ್ಯ ನೀಬಾರಯ್ಯ ಎ ।
ನ್ನಾರ್ತಧ್ವನಿಗೊಲಿದು ನೀ ಬಾರಯ್ಯ ॥

ಸುಗುಣದ ಖಣಿಯೆ ನೀ ಬಾರಯ್ಯ ನ ।
ಮ್ಮಘವನೋಡಿಸಲು ನೀ ಬಾರಯ್ಯ ॥
ಧಗೆಯೇರಿತು ತಾಪ ನೀ ಬಾರಯ್ಯ ಸದಾ ।
ಮುಗುಳ್ನಗೆಯ ಮಳೆಗರೆಯೆ ನೀ ಬಾರಯ್ಯ ॥ 1 ॥

ವೈರಿವರ್ಗದಿನೊಂದೆ ನೀ ಬಾರಯ್ಯ ಮ ।
ತ್ತ್ಯಾರು ಗೆಳೆಯರಿಲ್ಲ ನೀ ಬಾರಯ್ಯ ॥
ಸೇರಿದೆ ನಿನ್ನಯ ಕರುಣೆಗೆ ಬಾರಯ್ಯ ಒಳ್ಳೆ ।
ದಾರಿಯ ತೋರಲು ನೀ ಬಾರಯ್ಯ ॥ 2 ॥

ವೈರಾಗ್ಯಭಾಗ್ಯವಕೊಡು ನೀ ಬಾರಯ್ಯ ।
ನಾನಾ ರೋಗದ ಭೇಷಜ ನೀ ಬಾರಯ್ಯ ॥
ಜಾರುತದಾಯು ಬೇಗ ನೀ ಬಾರಯ್ಯ ಉ ।
ದಾರಿ **ಪ್ರಸನ್ವೆಂಕಟ** ನೀ ಬಾರಯ್ಯ ॥ 3 ॥

****

8. ಶ್ರೀ ವಿಜಯ ವಿಠಲರ ಕೀರ್ತನೆಗಳು

(ಅಂಕಿತ: ವಿಜಂಯವಿಠಲ. ಕಾಲ: 1682–1755)

133. ಶರಣು ಗಜಮುಖ ಅಖುವಾಹನ

ರಾಗ: ಹಂಸಧ್ವನಿ ತಾಳ: ಝಂಪೆ

ಶರಣು ಗಜಮುಖ ಅಖುವಾಹನ ।
ಶರಣು ಸುರಗಣಸೇವಿತ ॥
ಶರಣು ಸಕಲಾಭೀಷ್ಟದಾಯಕ ।
ಶರಣು ವಿಘ್ನವಿನಾಯಕ ॥ 1 ॥

ಹೇಮಖಚಿತ ಕಿರೀಟಕುಂಡಲ ।
ಕಾಮಿತಾರ್ಥದಾಯಕ ॥
ಅಮಿತಸೌಲಭ್ಯ ಪ್ರಬಲಶಾಸ್ತ್ರೋ ॥
ದ್ಧಾಮ ವಿದ್ಯಾಶರನಿಶಧೇ ॥ 2 ॥

ಪಾಶ ಮೋದಕ ಪರಶುಧರ ।
ಫಣಿಭೂಷ ಪಾರ್ವತಿನಂದನ ॥
ವಾಸವಾರ್ಚಿತ **ವಿಜಯವಿಠಲನ** ।
ದಾಸಭೋಗಗಣನಾಯಕ ॥ 3 ॥

****

134. ಪಾಲಿಸೆ ಪದುಮಾಲೆಯೇ

ರಾಗ: ವಾಚಸ್ಪತಿ ತಾಳ: ಆದಿ

ಪಾಲಿಸೆ ಪದುಮಾಲಯೇ ನೀನೇಗತಿ ॥ ಪ ॥

ಬಾಲಕನು ತಾನಾಗಿ ಗೋಪಿಗೆ ।
ಲೀಲೆಯಿಂದಲಿ ನಂದಗೋಕುಲ ॥
ಬಾಲೆಯರ ಮೋಹಿಸುತ ಅಸುರರ ।
ಕಾಲನೆನಿಸಿದ ಬಾಲಕನ ಪ್ರಿಯೆ ॥ ಅ.ಪ ॥

ಅನ್ಯರ ನೆನೆಯಲೊಲ್ಲೆ ನಿನ್ನಯ ಪಾದ ।
ವನ್ನು ನಂಬಿದೆ ನೀಬಲ್ಲೆ ತಡಮಾಡದಲೆ ॥
ಚೆಣ್ಣ ಕರೆಯಲು ಘನ್ನ ಮಹಿಮನು ।

ಉನ್ನತದ ರೂಪಿನಲಿ ಗುಣಸಂ ॥
ಪನ್ನರಕ್ಕಸನನ್ನು ಸೀಳಿದ ।
ಪನ್ನಗಾದ್ರಿನಿವಾಸ ಹರಿಪ್ರಿಯೆ ॥ 1 ॥

ಅರಿಯದ ತರಳನೆಂದು ಶ್ರೀಪತಿಸತಿ ।
ಕರುಣದಿ ಸಲಹೆ ಬಂದು ಕರುಣಾಸಿಂಧು ॥
ಸರಸಿಜಾಸನ ರುದ್ರರೀರ್ವರ ।
ವರದಿ ಮೂರ್ಖನು ಸುರರಬಾಧಿಸೆ ॥
ಹರಿಹರರ ದಂಡೆತ್ತಿ ಬಹುಮುಖ ।
ದುರುಳನ ಶಿರತರಿದನ ಪ್ರಿಯೆ ॥ 2 ॥

ಅಜಮನಸಿಜಜನನಿ ಅಂಬುಜಪಾಣಿ ।
ಭುಜಗಸನ್ನಿಭವೇಣಿ ನಿತ್ಯಕಲ್ಯಾಣಿ ॥
ಕುಜನಮರ್ದನ **ವಿಜಯವಿಠಲನ** ।
ಭಜಿಸಿಪಾಡುವ ಭಕ್ತಕೂಟವ ॥
ನಿಜದಿ ಸೇರುವೆನೆಂಬ ಬಿರುದುಳ್ಳ ।
ವಿಜಯಸಾರಥಿ ವಿಶ್ವಂಭರಪ್ರಿಯೆ ॥ 3 ॥

****

135. ರಾಮ ರಾಮ ಎಂಬೆರಡಕ್ಷರ

ರಾಗ: ಮೋಹನ **ತಾಳ: ರೂಪಕ**

ರಾಮ ರಾಮ ಎಂಬೆರಡಕ್ಷರ ।
ಪ್ರೇಮದಿ ಸಲಹಿತು ಸುಜನರನು ॥ ಪ ॥

ಹಾಲಾಹಲವನ್ನು ಪಾನವ ಮಾಡಿದ ।
ಫಾಲಲೋಚನನೆ ಬಲ್ಲವನು ॥
ಆಲಾಪಿಸುತಾ ಶಿಲೆಯಾಗಿದ್ದ ।
ಬಾಲೆ ಅಹಲ್ಯೆಯ ಕೇಳೇನೊ ॥ 1 ॥

ಅಂಜಿಕೆ ಇಲ್ಲದೆ ಗಿರಿ ಸಾರಿದ ।
ಕಪಿಕುಂಜರ ರವಿಸುತ ಬಲ್ಲವನು ॥
ಎಂಜಲ ಫಲಗಳ ಹರಿಗರ್ಪಿಸಿದ ।
ಕಂಜಲೋಚನೆಯ ಕೇಳೇನೊ ॥ 2 ॥

ಕಾಲವನರಿತು ಸೇವೆಯ ಮಾಡಿದ ॥
ಲೋಲಲಕ್ಷ್ಮಣನೆ ಬಲ್ಲವನು ॥
ವ್ಯಾಳಶಯನ ಸಿರಿವಿಜಯವಿಠಲನ ।
ಲೀಲೆಶರಧಿಯ ಕೇಳೇನೊ ॥ 3 ॥

****

136. ಸೀತೆಯಾ ಭೂಮಿಜಾತೆಯಾ

ರಾಗ: ಸಿಂಹೇಂದ್ರ ಮಧ್ಯಮ ತಾಳ: ಆದಿ

ಸೀತೆಯಾ ಭೂಮಿಜಾತೆಯಾ ಜಗ ।
ನ್ಮಾತೆಯ ಸ್ಮರಿಸಿ ವಿಜ್ಞಾತೆಯಾ ॥ ಪ ॥

ಕ್ಷೀರವಾರಿಧಿಯ ಕುಮಾರಿಯ ತನ್ನ ।
ಸೇರಿದವರ ಭಯಹಾರಿಯಾ ॥
ತೋರುವಳು ಮುಕ್ತಿದಾರಿಯ ಸತ್ಯ ।
ಸಾರ ಸುಂದರನಾರಿಯ ॥ ಅ.ಪ ॥

ಈಶಕೋಟಿಯೊಳ್ ಗಣನೆಯ ।
ಸ್ವಪ್ರಕಾರವಾದ ಗುಣಶ್ರೇಣಿಯ ॥
ಈಶಾದ್ಯರ ಪೆತ್ತ ತರುಣಿಯ ನಿ ।
ರ್ದೋಷವಾರಿಧಿ ಕಲ್ಯಾಣಿಯ ॥ 1 ॥

ವಿಜಯವಿಠಲನ ರಾಣಿಯ ಪಂ ।
ಕಜಮಾಲೆ ಪಿಡಿದ ಪಾಣಿಯ ॥
ವಿಜಯಲಕ್ಷ್ಮೀ ಗಜಗಮನೆಯ ನಿತ್ಯ ।
ಸುಜನವಂದಿತೆ ಅಹಿವೇಣಿಯ ॥ 2 ॥

****

137. ಉಮಾಕಾತ್ಯಾಯನಿ ಗೌರಿ

ರಾಗ: ಮಾಯಮಾಳವ ಗೌಳ **ತಾಳ: ಆದಿ**

ಉಮಾ ಕಾತ್ಯಾಯನಿ ಗೌರೀ ದಾಕ್ಷಾಯಣಿ ।
ಹಿಮವಂತ ಗಿರಿಯಕುಮಾರಿ ॥ ಪ ॥

ಶಿವೆಯರಸ ಪದಕಮಲ ಮಧುಪೆ ನಿತ್ಯ ।
ಅಮರವಂದಿತೆ ಗಜಗಮನೆ ಭವಾನಿ ॥ ಅ.ಪ ॥

ಪನ್ನಗಧರನ ರಾಣಿ ಪರಮಪಾವನಿ ।
ಪುಣ್ಯಫಲಪ್ರದಾಯಿನಿ ॥
ಪನ್ನಗವೇಣಿ ಶರ್ವಾಣಿ ಕೋಕಿಲವಾಣಿ ।
ಉನ್ನತಗುಣಗಣಶ್ರೇಣಿ ॥ 1 ॥

ಎನ್ನಮನದ ಅಭಿಮಾನಿದೇವತೆಯ ।
ಸ್ವರ್ಣಗಿರಿಸಂಪನ್ನೆ ಭಾಗ್ಯನಿಧಿ ॥
ನಿನ್ನಮಹಿಮೆಯನು ಬಿನ್ನಾಣದಲಿ ನಾ ।
ಬಣ್ಣಿಸಲಳವೆ ಪ್ರಸನ್ನವದನಳೆ ॥ 2 ॥

ಮುತ್ತಿನ ಪದಕಹಾರ ಮೋಹನಸರ ।
ಉತ್ತಮಾಂಗದ ಅಲಂಕಾರ ॥
ಜೊತ್ಯಾಗಿಟ್ಟ ಪಂಜರದೋಲೆ ಒಯ್ಯಾರ ।
ರತ್ನಕಂಕಣದ ಉಂಗುರ ॥ 3 ॥

ತೆತ್ತಿಸಕೋಟಿ ದೇವತೆಗಳ್ ಪೊಗಳುತ ।
ನೆತ್ತಿಗೆ ಚಾಮರವೆತ್ತಿಹಿಡಿಯುತಿರೆ ॥
ಸುತ್ತಲು ಆಡುವ ನರ್ತನಸಂದಣಿ ।
ಎತ್ತನೋಡಿರತ್ತ ತಥೈವಾದ್ಯ ॥ 4 ॥

ಪೊಳೆವವಸನ ಕಂಚುಕ, ತಿಲಕ ।
ಥಳಿಪ ಮೂಗುತಿ ನಾಸಿಕ ॥
ಕಳಿತಮಲ್ಲಿಗೆ ಗಂಧಕ ಮುಡಿದಸೂಸುಕ ।
ಸಲೆ ಭುಜಕೀರ್ತಿಪಾರಿಕ ॥ 5 ॥

ಇಳೆಯೊಳು ಮಧುರಾಪುರದೊಳು ವಾಸಳೆ ।
ಅಳಗಿರಿ ವಿಜಯವಿಠಲನ ಕೊಂಡಾಡುವ ॥
ಸುಲಭಜನರಿಗೆಲ್ಲ ಒಲಿದು ವರವನೀವ ।
ಗಿಳಿಕರಶೋಭಿತೆ ಪರಮಮಂಗಳೆ ॥ 6 ॥

****

138. ಶ್ರೀ ಮಹಾಲಕುಮಿ ದೇವಿ

ರಾಗ: ಸಿಂಧೂ ಭೈರವಿ **ತಾಳ: ಆದಿ**

ಶ್ರೀ ಮಹಾಲಕುಮಿದೇವಿ ಕೋಮಲಾಂಗಿಯೇ ।
ಸಾಮಗಾಯನ ಪ್ರಿಯಳೆ ಶುಭಶೀಲೆ ॥ ಪ ॥

ಹೇಮಗರ್ಭ ಕಾಮಾರಿ ಶಕ್ರಸುರ ।
ಸ್ತೋಮವಂದಿತಳೆ ಸೋಮಸೋದರಿಯೆ ॥ ಅ.ಪ ॥

ಬಟ್ಟ ಕುಂಕುಮನೊಸಲೋಳೆ ಮುತ್ತಿನ ಹೊಸ ।
ಕಟ್ಟಾಣಿ ತ್ರಿವಳಿಕೊರಳೋಳೆ ॥
ಇಟ್ಟ ಪೊನ್ನೋಲೆ ಕಿವಿಯೋಳೆ ಪವಳದ ಕೈ ।
ಕಟ್ಟು ಕಂಕಣ ಕೈಬಳೆ ॥
ತೊಟ್ಟಕುಪ್ಪಸ ಬಿಗಿದುಟ್ಟ ಪೀತಾಂಬರ ।
ಗಟ್ಟಿಒಡ್ಯಾಣ ಕಾಲಂದಿಗೆ ರುಳಿಗೆಜ್ಜೆ ॥
ಘಟ್ಟಾಲಿ ಪೊಳೆವುದು ಮೆಟ್ಟಿಗೆ ಕಿರುಪಲ್ಲಿ ।
ಇಟ್ಟು ಶೋಭಿಸುವ ಅಷ್ಟಸಂಪನ್ನೆ ॥ 1 ॥

ಸಕಲ ಶುಭಗುಣಭರಿತಳೆ ।
ಏಕೋ ದೇವಿಯೆ ವಾಕುಲಾಲಿಸಿ ನೀಕೇಳೆ ॥
ಲೋಕನೀಯೆನ್ನ ಮಹಲೀಲೆ ಕೊಂಡಾಡುವಂಥ ।
ಏಕಮನವ ಕೊಡು ಶೀಲೆ ॥
ಬೇಕು ಬೇಕು ನಿನ್ನ ಪತಿ ಪಾದಾಬ್ಜ ।
ಏಕಾಂತದಿ ಪೂಜಿಪರ ಸಂಗವ ಕೊಡೆ ॥
ಲೋಕದ ಜನರಿಗೆ ನಾ ಕರ ಒಡ್ಡದಂತೆ ।
ನೀ ಕರುಣಿಸು ತಾಯೇ ರಾಕೇಂದುವದನೆ ॥ 2 ॥

ಮಂದರಧರನರಸಿಯೆ ಇಂದಿರೆ ಎನ್ನ ।
ಕುಂದು ದೋಷಗಳಳಿಯೆ ॥
ಅಂದ ಸೌಭಾಗ್ಯಸಿರಿಯೆ ತಾಯೇ ನಾ ನಿನ್ನ ।
ಕಂದನು ಮುಂದಕೆ ಕರೆಯೆ ॥
ಸಿಂಧುಶಯನ ಸಿರಿವಿಜಯವಿಠಲನಯ್ಯ ।
ಎಂದೆಂದಿಗೂ ಮನದಿಂದಗಲದೆ ॥ ಆ
ನಂದದಿಂದಲಿ ಬಂದು ಮುಂದೆ ಕುಣಿಯುವಂತೆ ।
ವಂದಿಸಿ ಪೇಳಮ್ಮ ಸಿಂಧುಸುತಯಳೆ ॥ 3 ॥

****

139. ಹರೇ ವಿಠಲ ಪಾಂಡುರಂಗ

ರಾಗ: ಮಾಯಾಮಾಳವಗೌಳ **ತಾಳ: ಆದಿ**

ಹರೇ ವಿಠಲ ಪಾಂಡುರಂಗ ।
ಪರಿಪಾಲಯ ಕಂಸಾರೇ ॥ ಪ ॥

ಕರಕಮಲದ್ವಯ ಕಟಿಯ ಮೇಲಿಟ್ಟು ।
ಪರಮಪುರುಷ ಶೌರೇ ಮುರಾರೇ ॥
ಜಲಜಭವಾದಿ ಸುರಸನ್ನುತಪದ ।
ಜಲಜನಾಭನಾದ ಶ್ರೀಹರೇ ॥ 1 ॥

ಪುಂಡಲೀಕ ವರದಾತ ಮುಕುಂದ ।
ಕುಂಡಲಿಶಯನ ಹರೇ ॥
ಅಂಡಜವಾಹನ ಅಪ್ರಾಕೃತಕಾಯ ।
ಕುಂಡಲಧರ ಹರೇ ಶ್ರೀಹರೇ ॥ 2 ॥

ದಿಟ್ಟತನದಿ ಹರಿಭಕ್ತ ಕೊಟ್ಟ ।
ಇಟ್ಟಿಗಿಯ ಮೇಲೆ ನಿಂತೆ॥
ಸೃಷ್ಟಿಗೊಡೆಯ ಶ್ರೀ **ವಿಜಯವಿಠಲ** ।
ದುಷ್ಟಕುಲಾಂತಕನೆ ॥ 3 ॥

****

140. ಶರಣು ಶೇಷಾಚಲನಿವಾಸಗೆ

ರಾಗ: ಆರಭಿ   ತಾಳ: ಮಿಶ್ರಛಾಪು

ಶರಣು ಶೇಷಾಚಲನಿವಾಸಗೆ ।
ಶರಣು ವರಹಾ ತಿಮ್ಮಪ್ಪಗೆ ॥
ಶರಣು ಅಲಮೇಲುಮ್ಮನರಮಣಗೆ ।
ಶರಣು ತಿರುವೆಂಕಟೇಶಗೆ ॥ ಪ ॥

ಧರಣಿಧರ ಗೋವಿಂದ ಮಾಧವ ।
ನರಹರಿ ಮಧುಸೂದನ ॥
ಮುರಹರ ಮುಕುಂದ ।
ಅಚ್ಯುತ ಗಿರಿಜೆನುತ ನಾರಾಯಣ ॥ 1 ॥

ಶರಣು ಕ್ಷೀರವಾರಧಿಶಯನ ವಾಮನ ।
ಮಾರಜನಕ ಗೋಪೀಜನ ॥
ಜಾರ ನವನೀತಚೋರ ।
ರಿಪುಸಂಹಾರ ಹರಿದಾಮೋದರ ॥ 2 ॥

ಗರುಡಗಮನನೆ ಗರಳತಲ್ಪನೆ ।
ಕರುಣಾಳುಗಳ ಒಡೆಯನೆ ॥
ಉರಗಗಿರಿಸಿರಿ **ವಿಜಯವಿಠಲನ** ।
ಚರಣಕಮಲಕೆ ನಮೋ ನಮೋ ॥ 3 ॥

****

141. ಮುಂಜಾನೆದ್ದು ಸಂಜೀವನೆನ್ನಿ

ರಾಗ: ಭೂಪಾಳಿ **ತಾಳ: ಆದಿ**

ಮುಂಜಾನೆದ್ದು ಸಂಜೀವನೆನ್ನಿ ।
ಅಂಜಿಪದುರಿತ ದೂರವೆನ್ನಿ ॥ ಪ ॥

ವಾಯುನಂದನನ್ನೆನ್ನಿ ವಜ್ರಕಾಯನೆನ್ನಿ ।
ರಾಯರಾಘವನ ಕಿಂಕರನೆನ್ನಿ ॥
ಛಾಯಾಗ್ರಿಯನ ಕೊಂದು ವನವ ಕಿತ್ತಿದನೆನ್ನಿ ।
ಮಾಯದಲಂಕೆಯ ದಹನಗೈದವನೆನ್ನಿ ॥ 1 ॥

ಪಾಂಡುಕುವರನ್ನೆನ್ನಿ ಪಾಪಸಂಹಾರನೆನ್ನಿ ।
ಉಂಡವಿಷವ ತೇಗಿದನೆನ್ನಿ ॥
ಚಂಡಕುರುವಂಶವ ಹತಗೈದವನೆನ್ನಿ ।
ಲಂಡಹಿಡಂಬಕನ ಕೊಂದವನೆನ್ನಿ ॥ 2 ॥

ಆನಂದತೀರ್ಥರೆನ್ನಿ ಅಮಿತಜೀವಾತ್ಮನೆನ್ನಿ ।
ಜ್ಞಾನಕೆ ಮೊದಲು ದೇವತೆ ಎನ್ನಿ ॥
ಆನಂದಮಯನಾದ **ವಿಜಯವಿಠಲನ** ।
ಧೇನಿಪ ಜನರಿಗೆ ಮಾರ್ಗವೆನ್ನಿ ॥ 3 ॥

****

142. ಭಕ್ತಜನಪಾಲಕ ಭಕ್ತಿಸುಖದಾಯಕ

ರಾಗ: ಭೌಳಿ **ತಾಳ: ತಿಶ್ರ**

ಭಕ್ತಜನಪಾಲಕ ಭಕ್ತಿಸುಖದಾಯಕ ।
ಮುಕ್ತೀಶ ದೀನಬಂಧೋ ಕೃಷ್ಣಾ ॥ ಪ ॥

ಯುಕ್ತಿಯಲಿ ನಿನ್ನಂಥ ದೇವರನು ನಾ ಕಾಣೆ ।
ಸತ್ಯವತಿಸುತನೆ ಕಾಯೋ ಕೃಷ್ಣ ॥ ಅ.ಪ ॥

ಆನಂದತೀರ್ಥಮುನಿ ಧ್ಯಾನಿಪರ ಸಂಗ ।
ಆನಂದದಲಿ ನಿಲ್ಲಿಸೋ ಕೃಷ್ಣ ॥
ದೀನಜನಮಂದಾರ ನೀ ಎಂದು ನಂಬಿದೆನೊ ।
ಸಾನುರಾಗದಲಿ ಕಾಯೋ ಕೃಷ್ಣ ॥ 1 ॥

ಕೆಟ್ಟ ಜನರಸಂಗ ಇಷ್ಟುದಿನವೂ ಮಾಡಿ ।
ಭ್ರಷ್ಟನಾಗಿ ಪೋದೆನೋ ಕೃಷ್ಣ ॥
ಬೆಟ್ಟದೊಡೆಯನೆ ನಿನ್ನ ಮುಟ್ಟಿ ಭಜಿಸುವ ಭಾಗ್ಯ ।
ಇಷ್ಟಗಳ ಎನಗೆ ಕೊಡಿಸೋ ಕೃಷ್ಣ ॥ 2 ॥

ಅಜಜನಕ ಗಜವರದ ಭುಜಗಶಯನನೆ ನಿನ್ನ ।
ಭಜಿಪ ಭಾಗ್ಯವನೆ ಕೊಡಿಸೋ ಕೃಷ್ಣ ॥
ನಿಜವಾಗಿ ನಿನ್ನೊರತು ಸಲಹುವರ ನಾ ಕಾಣೆ ।
ವಿಜಯವಿಠಲರೇಯ ಕೃಷ್ಣ ॥ 3 ॥

****

143. ಡೀ ಡೀ ಆಡೋಣೆ ರಂಗ

ರಾಗ: ದೇಶ್ **ತಾಳ: ಆದಿ**

ಡೀ ಡೀ ಆಡೋಣೆ ರಂಗ ಡೀ ಡೀ ಆಡೋಣೆ ।
ಓಡಿ ಓಡಿ ಬಂದು ಹಣೆಗೆ ನೀಡಿ ।
ಡೀಡೀಡೀ ಡೀಡೀ ಎಂದು ॥ ಪ ॥

ಮರಕತ ನವರತ್ನ ವಜ್ರ ।
ಹರಳು ಕೆತ್ತಿಸಿ ದ್ಯುಮಣಿ ॥
ಮಕುಟಧರಿಸಿದ ಶಿರದಿ ।
ಸರಿ ಸರಿ ಸರಿದಾಡು ॥ 1 ॥

ಚಂದ್ರಶೇಖರ ಹಂಸವಾಹನ ।
ಇಂದ್ರಾದಿಗಳಾಗಸದಿ ಧುಂ ಧುಂ ॥
ದುಂದುಭಿ ಧುಂಧುಂನುಡಿಸೆ ।
ಬಂದೆ ಇಕ್ಕೊ ಬಂದೆಎನುತ ॥ 2 ॥

ಹಿಂತಿರುಗಿ ಪೋಗಿ ನೀನು ।
ವಿಜಯವಿಠಲರೇಯ ನಿಂತು ॥
ಅಂತರಿಸೆ ದೂರದಿಂದ ।
ಇತ್ತಿಂ ತ್ತಿಂ ತ್ತಿಂ ತ್ತಿಂತ್ತೆನ್ನುತಲಿ ॥ 3 ॥

****

144. ಜಯ ಜಯ ಮೂಷಿಕಗಮನ

ರಾಗ: ಹಂಸಧ್ವನಿ ತಾಳ: ಆದಿ

ಜಯ ಜಯ ಮೂಷಿಕಗಮನ ಜಯ ಜಯ ಗಜಾನನ ।
ಜಯ ಜಯ ನಾಗಾಭರಣ ಜಯ ಏಕದಂತ ಜಯ ಜಯ ॥ ಪ ॥

ಮತಿಯಕೊಡು ಪಾರ್ವತಿನಿಜತನುಜನೆ ।
ನಿನ್ನನು ನಾನು ನುತಿಸುವೆ ಕ್ಷಿತಿಯೊಳಗೆ ॥
ಶ್ರೀಲಕುಮಿಪತಿಯ ಕೊಂಡಾಡಿ ಸದ್ಗತಿಯ ।
ಪಡೆಯುವುದಕ್ಕೆ ಸಾರಥಿಯಾಗು ದೇವಾ ॥ 1 ॥

ಆಕಾಶದಭಿಮಾನಿ ಅಂಗಜನಶಾಪ । ನಿ
ರಾಕರಿಸಿ ಬಿಸುಟ ಲಂಬೋದರನೆ ॥
ಏಕಪಿಂಗಾದಿಗಳ ಪಿರಿಯಹಸ್ತ ಚತುಷ್ಟ ।
ಲೋಕದೊಳು ಭಜಿಸುವರ ವಿದ್ಯಾನಿಧಿಯೆ ॥ 2 ॥

ಸೀತಾರಮಣನಿಂದ ಪೂಜಿಪನಾಗಿ ।
ವನದಿ ತೀರದಲಿ ಮೆರೆವ ಗಣೇಶ ॥
ಸೇತುಮಾಧವ **ವಿಜಯವಿಠಲ**ನ ।
ದೂತನು ನೀನೇ ಪಾಶಾಂಕುಶಧರನೆ ॥ 3 ॥

****

145. ಬಾರಯ್ಯ ಶ್ರೀನಿವಾಸ ಭಕ್ತರ ಬಳಿಗೆ

ರಾಗ: ಮೋಹನ ತಾಳ: ಆದಿ

ಬಾರಯ್ಯ ಶ್ರೀನಿವಾಸ ಭಕ್ತರ ಬಳಿಗೆ ॥ ಪ ॥

ತೋರಯ್ಯ ನಿನ್ನದಯ ತೋಯಜಾಂಬಕನೆ ॥ ಅ.ಪ ॥

ದುರುಳನ ತರಿದಂಥ ವರಚಕ್ರಧಾರಿ ।
ಪರಮಾತ್ಮ ಪರಬ್ರಹ್ಮ ಪರರಿಗುಪಕಾರಿ ॥ 1 ॥

ಅರಣ್ಯದಿ ಮೊರೆಇಟ್ಟ ಕರಿರಾಜಗೊಲಿದಿ ।
ತರಳ ಪ್ರಹ್ಲಾದನ ವೈರಿಯ ಮುರಿದಿ ॥ 2 ॥

ವರಶೇಷಗಿರಿಯಲ್ಲಿ ನಿರುತ ನೀನಿರುವಿ ।
ಹರಿದಾಸರು ಕರಿಯೆ ನೀನೆಲ್ಲಿದ್ದರೂ ಬರುವಿ ॥ 3 ॥

ಅನಂತನಾಭನು ನೀನು ಅನಂತಸದ್ಗುಣನು ।
ನೆನೆವರಿಗೊಲಿವಂಥ ಹನುಮಂತವಿನುತಾ ॥ 4 ॥

ಅಜಭವಾಧಿಪನೀನು ವಿಜಯಸಾರಥಿಯೇ ।
ತ್ರಿಜಗವಂದಿತ ಈಶ **ವಿಜಯವಿಠಲನೇ** ॥ 5 ॥

****

9. ಬಾಗಣ್ಣನವರ ಕೀರ್ತನೆಗಳು

(ಅಂಕಿತ: ಗೋಪಾಲವಿಠಲ. ಕಾಲ1722–1762)

146. ಭಾರತಿ ಭಕುತಿಯನು ಕೊಡುವುದು

ರಾಗ: ಖರಹರಪ್ರಿಯ ತಾಳ: ಆದಿ

ಭಾರತಿ ಭಕುತಿಯನು ಕೊಡುವುದು ಮಾರುತ ಸತಿ ನೀನು ॥ಪ॥

ಮೂರು ಲೋಕದೊಳು ಯಾರು ನಿನಗೆ ಸರಿ ।
ಮಾರಾರಿಗಳಿಂದ ಆರಾಧಿತಳೆ ॥ ಅ.ಪ ॥

ಸುಂದರಿ, ಶುಭಕರಿ, ಸುಮನಸವೃಂದಶೋಭಿತ ಕಬರಿ ।
ಮಂದಹಾಸ ಮುಖದಿಂದ ನೋಡಿ ನಿನ್ನ ।
ಕಂದನೆಂದು ಎನ್ನ ಮುಂದಕೆ ಕರೆಯೆ ॥ 1 ॥

ವಾಣಿ ಎನ್ನ ವದನದಲ್ಲಿಡು ಮಾಣದೆ ಹರಿಸ್ತವನ ।
ವೀಣಾಧೃತ ಸುಜ್ಞಾನಿಯೆ ಪಂಕಜ ।
ಪಾಣಿಯೇ ಕೋಕಿಲವಾಣಿಯೇ ಎನ್ನಯ ॥ 2 ॥

ಮಂಗಳಾಂಗಿಯೇ ಎನ್ನ ಅಂತರಂಗದಲ್ಲಿ ಮುನ್ನ ।
ತುಂಗವಿಕ್ರಮ **ಗೋಪಾಲವಿಠಲ**ನ್ನ ।
ಹಿಂಗದೆ ನೆನೆವ ಸುಖಂಗಳ ಕರುಣಿಸು ॥ 3 ॥

****

147. ಏಕೆ ಭಿಕ್ಷೆಯ ಚರ್ಮಚೇಲ ನಿನಗೆ

ರಾಗ: ಹಿಂದೋಳ ತಾಳ: ಚಾಪು

ಏಕೆ ಭಿಕ್ಷೆಯ ಚರ್ಮಚೇಲ ನಿನಗೆ ।
ಶ್ರೀಕಂಠ ಎನ್ನ ಮೇಲೆ ಎಳ್ಳಷ್ಟು ದಯವಿಲ್ಲ ॥ ಪ ॥

ಕನಕಾಚಲವೆ ನಿನ್ನ ಕೈಯೊಳಗೆ ಇಹಧನವು ।
ಮನೆಯ ರಜತಾಚಲವು ಸ್ವಾಮಿ ಶಿವನೇ ॥
ಅನ್ನಪೂರ್ಣೆ ನಿನಗೆ ಪಟ್ಟದರಾಣಿ ಲೋಕವಿಘ್ನವ ।
ಕಳೆವ ಗಣನಾಥ ನಿನ್ನ ಮಗ ಶಿವರೂಪಿ ನೀನು ॥ 1 ॥

ರಾಜಶೇಖರ ನೀನು ಸಕಲಲೋಕಾಧ್ಯಕ್ಷ ।
ರಾಜರಾಜರು ನಿನಗೆ ಪರಮಸಖರು ॥
ಮೂರ್ಜಗತ್ಪಾವನಳು ಸುರಗಂಗೆ ಜಟೆಯೊಳಗೆ ।
ಸೋಜಿಗವಿದೇನಯ್ಯ ಶಂಕರನೆ ನಿನಗೆ ॥ 2 ॥

ತ್ರಿನಯನನು ನೀನೇ ಪಂಚಾಸ್ಯಬ್ರಹ್ಮನಾ ಮಗನು ।
ನಿನಗೊಬ್ಬ ಮಗನಿಹನು ಆರುಮೊಗನು ॥
ಅನಿಮಿಷ ಪ್ರಿಯಗುರು **ಗೋಪಾಲವಿಠಲನು** ।
ನಿನಗೆ ಅತ್ಯಂತ ಪ್ರಿಯನಾಗಿರಲು ದೇವಾ ॥ 3 ॥

****

148. ಆವರೋಗವೊ ಎನಗೆ ದೇವ ಧನ್ವಂತ್ರಿ

ರಾಗ: ಆಹಿರ್ ಭೈರವಿ:(ಚಕ್ರವಾಕ) **ತಾಳ: ಆದಿ**

ಆವರೋಗವೊ ಎನಗೆ ದೇವ ಧನ್ವಂತ್ರಿ. ॥ ಪ ॥
ಸಾವಧಾನದಿ ಕೈಪಿಡಿದು ನೀ ನೋಡಯ್ಯ ॥ ಅ.ಪ ॥

ಹರಿಮೂರ್ತಿಗಳು ಕಾಣಿಸವು ಎನ್ನ ಕಂಗಳಿಗೆ ।
ಹರಿಯುಕೀರ್ತನೆಯೂ ಕೇಳಿಸದೆನ್ನ ಕಿವಿಗೆ ॥
ಹರಿಮಂತ್ರ ಸ್ತೋತ್ರ ಬಾರದು ಎನ್ನ ನಾಲಿಗೆಗೆ ।
ಹರಿಪ್ರಸಾದವೂ ಜಿಹ್ವೆಗೆ ಸವಿಯಾಗದಯ್ಯ. ॥ 1 ॥

ಹರಿಪಾದ ಸೇವೆಗೆನ್ನ ಹಸ್ತಗಳು ಚಲಿಸವು ।
ಗುರುಹಿರಿಯರಂಘ್ರಿಗೆ ಶಿರಬಾಗದು ॥
ಹರಿಯ ನಿರ್ಮಾಲ್ಯವಾಘ್ರಾಣಿಸದು ನಾಸಿಕವು ।
ಹರಿಯಾತ್ರೆಗಳಿಗೆನ್ನ ಕಾಲೇಳದಯ್ಯ ॥ 2 ॥

ಅನಾಥಬಂಧು **ಗೋಪಾಲ ವಿಠಲರಾಯ** ।
ಎನ್ನ ಭಾಗ್ಯದ ವೈದ್ಯ ನೀನೇಯಾದೇ ॥
ಅನಾದಿಕಾಲದ ಭವರೋಗ ಕಳೆಯಯ್ಯ ।
ನಾನೆಂದಿಗೂ ಮರೆಯೆ ನೀಮಾಡಿದ ಉಪಕಾರ ॥ 3 ॥

****

149. ಶರಣ ಜನರನ್ನೆಲ್ಲ ಪೊರೆವ ಭಾರತಿ

ರಾಗ: ಧನ್ಯಾಸಿ **ತಾಳ: ಆದಿ**

ಶರಣ ಜನರನ್ನೆಲ್ಲ ಪೊರೆವ ಭಾರತಿ ನಿನ್ನ ।
ಚರಣಕ್ಕೆ ಕೈಮುಗಿವೆ ತಾಯೇ ಚರಣಕ್ಕೆ ಕೈ ಮುಗಿವೆ ॥ ಪ ॥

ಕರೆಕರೆಗೊಳಿಸುವ ಕಠಿಣಭವವನ್ನೆಲ್ಲ ।
ಪರಿಹಾರ ಮಾಡಬೇಕು ಪರಾಕು ॥ ಅ.ಪ ॥

ಸ್ತುತಿಪಬಲ್ಲೆನೆ ನಿನ್ನ ಸುತನ ಬಿನ್ನಪವನು ।
ಅತಿಶಯದಿ ಕೇಳಬೇಕು ಈ ವಾಕು ॥
ಮತಿವಂತ ಜನರನು ಮಾನ್ಯಗೊಳಿಸುವಂಥ ।
ಹಿತವಾದ ಭಾಗ್ಯವೀಯೆ ನೀಕಾಯೆ ॥ 1 ॥

ಕಾಮಾದಿಗಳನ್ನೇ ನೇಮದಿ ಗೆಲುವಂಥ ।
ಪ್ರೇಮಕವಚ ತೊಡಿಸೆ ಉದ್ಧರಿಸೆ ॥
ಹೇಮ, ಕಾಮಿನಿ, ಭೂಮಿ ಹೇಯವೆಂದೆನಿಸಿ ।
ಸೋಮಶೇಖರನ ಜನನಿ ಸುಜ್ಞಾನಿ ॥ 2 ॥

ಮಾತೆ ಎನ್ನದು ಒಂದುಮಾತು ಲಾಲಿಸುವುದು ।
ವಾತನ ನಿಜ ದಯಿತೆಪ್ರಖ್ಯಾತೆ ॥
ದಾತೆ ಶ್ರೀ ವರದ **ಗೋಪಾಲವಿಠಲ**ನ ।
ಆತುಮದೊಳಗೆ ನಿಲಿಸೆ ಸುಮನಸೇ ॥ 3 ॥

****

150. ಏಕೆ ಮಲಗಿದೆ ಹರಿಯೆ ಏಸು ಆಯಾಸ

ರಾಗ: ಅಭೋಗಿ **ತಾಳ: ಛಾಪು**

ಏಕೆ ಮಲಗಿದೆ ಹರಿಯೆ ಏಸು ಆಯಾಸ ।
ಜೋಕೆಮಾಡುವ ಬಿರುದು ಸಾಕಾಯಿತೇನೋ ॥ ಪ ॥

ತಮನೊಡನೆ ಹೋರಾಡಿ ತಪಿಸಿ ಮೈಬೆವರಿತೋ ।
ಅಮೃತಮಥನದಿ ಗಿರಿಯು ಅತಿಭಾರವಾಯ್ತೋ ॥
ರಮಣಿಯರ ತರುವಾಗ ರಣರಂಗ ಬಹಳಾಯ್ತೋ ।
ಅಮರರಿಪುವನು ಸೀಳೆ ಆಯಾಸವಾಯ್ತೋ ॥ 1 ॥

ಆಕಾಶಭೇದಿಸಲು ಆಕಾಲು ಉಳುಕಿತೋ ।
ಕಾಕುನೃಪರನು ಸೀಳೆ ಕರಸೋತಿತೋ ॥
ಭೂಕಾಂತೆಯನರಸಿ ಬಳಲಿಕೆಯು ಬಹಳಾಯ್ತೋ ।
ಲೋಕಭಾರವ ಇಳುಹಿ ಸಾಕುಸಾಕಾಯ್ತೋ ॥ 2 ॥

ಚಪಲೆಯರ ಮೋಹಿಸಲು ಉಪಟಳವು ಬಹಳಾಯ್ತೋ ।
ಅಪವಿತ್ರನಡಗಿಸಲು ಅಧಿಕಶ್ರಮವಾಯ್ತೋ ॥
ಕೃಪೆಮಾಡಿ ನೋಡಯ್ಯಾ ಕಣ್ಣುತೆರದೆನ್ನಕಡೆ ।
ಕಪಟನಾಟಕ ಶ್ರೀ**ಗೋಪಾಲವಿಠಲ**ರೇಯ ॥ 3 ॥

****

151. ಕಾಯೋ ಶ್ರೀನಾರಸಿಂಹ

ರಾಗ: ಪಂತುವರಾಳಿ **ತಾಳ: ಆದಿ**

ಕಾಯೋ ಶ್ರೀನಾರಸಿಂಹ ಕಾಯೋ ಜಯನಾರಸಿಂಹ ॥ ಪ ॥

ಕಾಯೋ ಶ್ರೀನಾರಸಿಂಹ ತ್ರಯಂಬಕಾದ್ಯಮರೇಶ ।
ಭಯಾಂಧತಿಮಿರ ಮಾರ್ತಾಂಡ ಶ್ರೀನಾರಸಿಂಹ ॥ ಅ.ಪ ॥

ಘೋರ ಅಕಾಲಮೃತ್ಯು ಮೀರಿ ಬರಲು ।
ಧೀರನೀ ಬಿಡಿಸದಿನ್ಯಾರೋ ಶ್ರೀನಾರಸಿಂಹ ॥ 1 ॥

ಭೀಷಣನೆ ಸುಭದ್ರ ದೋಷ ಮೃತ್ಯುಗೆ ಮೃತ್ಯು ।
ಸುಷುಮ್ನಾನಾಡಿಸ್ಥಿತ ವಿಭುವೆ ಶ್ರೀನಾರಸಿಂಹ ॥ 2 ॥

ಜ್ಞಾನರಹಿತನಾಗಿ ನಾ ನಿನ್ನ ಮರೆತರೆ ।
ನೀನು ಮರೆತಿದ್ದೇಕೊ ಪೇಳೋ ಶ್ರೀನಾರಸಿಂಹ ॥ 3 ॥

ಪ್ರಬಲೋತ್ತಮನೆನಿಸಿ ಅಬಲರಕಾಯದಿರೆ ।
ಸುಬಲರು ಕಂಡು ಮೆಚ್ಚುವರೆ ಶ್ರೀನಾರಸಿಂಹ ॥ 4 ॥

ಕ್ಷೀರಸಾಗರಾಗಾರ ಪದುಮಮನೋಹರ ।
ಗೋಪಾಲವಿಠಲ ಜಗತ್ಪಾಲ ಶ್ರೀನಾರಸಿಂಹ ॥ 5 ॥

****

10. ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು

(ಅಂಕಿತ: ಹೆಳವನಕಟ್ಟೆರಂಗ. ಕಾಲ: 1750)

152. ಈತ ಲಿಂಗ ದೇವ ಶಿವನು

ರಾಗ: ಶುದ್ಧ ಸಾವೇರಿ **ತಾಳ: ರೂಪಕ**

ಈತ ಲಿಂಗದೇವ ಶಿವನು ।
ಆತ ರಂಗಧಾಮ ವಿಷ್ಣು ॥
ಮಾತನಾಡೊ ಮಂಕುಮನುಜ ।
ಮನದಹಂಕಾರವನು ಜರಿದು ॥ ಪ ।

ವೇದಕ್ಕೆ ಸಿಲ್ಕಿದನೀತ ।
ವೇದ ನಾಲ್ಕು ತಂದನಾತ ॥
ಬೂದಿಮೈಯಲಿ ಧರಿಸಿದನೀತ ।
ಭುವನಗಿರಿಯ ಪೊತ್ತನಾತ ॥ 1 ॥

ಆದಿದೈತ್ಯರ ಗೆಲಿದನೀತ ।
ಮಾಧವ ಮಧುಸೂದನನಾತ ॥
ಮದನನನು ದಹಿಸಿದನೀತ ।
ಮದನನು ಪಡೆದನಾತ ॥ 2 ॥

ಗಂಗೆಯ ಪೊತ್ತವನೀತ ।
ಗಂಗೆಪದದಿ ಪಡೆದನಾತ ॥
ತುಂಗ **ಹೆಳವನಕಟ್ಟೆ** ।
ಲಿಂಗನೀತ ರಂಗನಾಥ। ॥ 3 ॥

11. ಶ್ರೀನಿವಾಸಚಾರ್ಯರ ಕೀರ್ತನೆಗಳು
(ಅಂಕಿತ: ಜಗನ್ನಾಥವಿಠಲ. ಕಾಲ 1737–1822)

153. ಲಂಬೋದರ ರಕ್ತಾಂಬರಧರ

ರಾಗ: ಚಕ್ರವಾಕ ತಾಳ: ಮಿಶ್ರಛಾಪು

ಲಂಬೋದರ ರಕ್ತಾಂಬರಧರ ।
ಅಂಬರಾಧೀಶ್ವರ ಗೌರೀಕುಮಾರ ॥ ಪ ॥

ಸಿಂಧೂರವದನಾರವಿಂದ ಸುಂದರವಿಘ್ನ ।
ದಂಧಕಾರ ಶರತ್ ಚಂದಿರ ಧೀರ ॥ ಅ.ಪ ॥

ವರಪಾಶಾಂಕುಶದಂತಧರ ಸುಮೋಹಕ ಶೂರ್ಪ ।
ಕರಣ ತ್ವಚ್ಚರಣ ಪಂಕಜಕಾ ನಮಿಪೆ ॥
ಜಗನ್ನಾಥವಿಠಲನ ಮಗನಾಗಿ ದ್ವಾಪರ ।
ಯುಗದಲ್ಲಿ ಜನಿಸಿದ ಸುಗುಣನೀ ಸಲಹೋ ॥ 1 ॥

****

154. ದಯಮಾಡೇ ದಯಮಾಡೆ ತಾಯೇ ವಾಗ್ದೇವಿ

ರಾಗ: ಹಂಸಾನಂದಿ ತಾಳ: ಆದಿ

ದಯಮಾಡೇ ದಯಮಾಡೆ ತಾಯೇ ವಾಗ್ದೇವಿ ।
ದಯದಿಂದ ನೀನ್ನೆನ್ನ ನೋಡೆ ವಾಗ್ದೇವಿ ॥ ಪ ॥

ಹಿತದಿ ಸನ್ಮತಿಯ ಶ್ರೀಮತಿದೇವಿ ನೀಡೆ ।
ವ್ರತತಿಜ ನೇತ್ರೆ ಭಾರತಿ ದಯಮಾಡೇ ॥ 1 ॥

ಸುಮುಖಿ ತ್ವಚ್ಚರಣಾಬ್ಜ ದ್ರುಮ ಛಾಯಾಶ್ರಿತರ ।
ಸುಮತಿಗಳೊಳಗಿಟ್ಟು ಮಮತೆಯಿಂ ಸಲಹೆ ॥ 2 ॥

ಜಗನ್ನಾಥವಿಠಲನಂಘ್ರಿಗಳ ಸೇವೆಯೋಳು ।
ಸುಗುಣೆ ಸನ್ನುತಿಗೊಟ್ಟು ಬೇಗೆನ್ನ ಸಲಹೆ ॥ 3 ॥

****

155. ನೀಲಲೋಹಿತ ಪಾಲಯ ಮಾಂ

ರಾಗ: ಆರಭಿ ತಾಳ: ಆದಿ

ನೀಲಲೋಹಿತ ಡಮರುಗ ತ್ರಿಶೂಲ ಶೋಭಿತ ।
ಪಾಲಯ ಮಾಂ॥ ಪ ॥

ಫಾಲನಯನ ಶುಂಡಾಲ ಚರ್ಮಸುದು ।
ಕೂಲಮೃಡನೆ ನೀ ಪಾಲಿಸು ಕರುಣದಿ ॥ ಅ.ಪ ॥

ನಂದಿವಾಹನ ನಮಿಪೆ ಖಳಬೃಂದಮೋಹನ ।
ಅಂಧಕರಿಪು ಶಿಖಿಶ್ಚಂದನ ಸನಕಸ ।
ನಂದನಾದಿ ಮುನಿವಂದಿತ ಪದಯುಗ ॥ 1 ॥

ಸೋಮಶೇಖರ ಗಿರೀಶಾ ಸುತ್ರಾಮಲೇಖರ ।
ಸೋಮವಿನುತ ಭವ ಭೀಮಭಯಂಕರ ।
ಕಾಮರಹಿತ ಗುಣಧಾಮ ದಯಾನಿಧೆ ॥ 2 ॥

ನಾಗಭೂಷಣ ವಿಮಲ ಸದ್ರಾಗಪೋಷ್ಣ ।
ಭೋಗಿ ಶಯನ ಜಗನ್ನಾಥವಿಠಲನ ।
ಯೋಗದಿಭಜಿಸುವ ಭಾಗವತರೊಳಿಡು ॥ 3 ॥

****

156. ಸೋಮ ಶಿವ ಶರ್ವಭವ

ರಾಗ: ಅಮೃತವರ್ಷಿಣಿ ತಾಳ: ಖಂಡಛಾಪು

ಸೋಮ ಶಿವ ಶರ್ವಭವ ಶ್ರೀಕಂಠ ನಿನ್ನಪದ ।
ತಾಮರಸಯುಗ್ಮಗಳಿಗಾನಮಿಸುವೆ ॥ ಪ ॥

ಮೃತ್ಯುಂಜಯ ಮೃಗಾಂಕ ಕೃತ್ತಿವಾಸ ಕೃಪಾಳೊ ।
ವಿತ್ತಪತಿಸಖ ವಿನಾಯಕಜನಕ ॥
ಭೃತ್ಯವರ್ಗಕೆ ಬಹಾಪಮೃತ್ಯು ಪರಿಹರಿಸಿ ಸಂ ।
ಪತ್ತು ಪಾಲಿಪುದು ನಿವೃತ್ತಿ ಸಂಗಮವಾ ॥ 1 ॥

ಗೋಪತಿಧ್ವಜ ಘೋರ ಪಾಪಸಂಹರಣ ಹರಿ ।
ತೋಪಲೋಪಮಕಂಠ ಚಾಪಪಾಣೇ ॥
ಶ್ರೀಪತಿಯ ಶ್ರೀನಾಭಿಕೂಪಸಂಭವತನಯ ।
ನೀಪಾಲಿಸೆಮ್ಮನು ವಿರೂಪಾಕ್ಷ ದೇವ ॥ 2 ॥

ಭಸಿತಭೂಷಿತ ಡಮರು ತಿಸುಳಗೈಯನೆ ಶಂಭು ।
ಕಿಸಲಯೋಪಮನವಿರ ಶಶಿಭೂಷಿತಾ ॥
ಅಸುರರಿಪು ಸಿರಿಜಗನ್ನಾಥವಿಠಲನ ಪದ ।
ಬಿಸಜ ಧ್ಯಾನವನೀಯೋ ಹಸನಾಗಿಕಾಯೋ ॥ 3 ॥

****

157. ಅಂಬಾತನಯ ಹೇ ಗಣಪಾ

ರಾಗ: ಕಲಾವತಿ **ತಾಳ: ಆದಿ**

ಅಂಬಾತನಯ ಹೇರಂಬಪೂರ್ಣ ಕರುಣಾಂಬುಧೇ ।
ತವಚರಣಾಂಬುಜಕೆರಗುವೆ ॥ ಪ ॥

ದಶನಮೋದಕ ಪಾಶಾಂಕುಶಪಾಣಿ ।
ಅಸಮ ಚಾರುದೇಷ್ಣ ವಂದಿಪೆ ॥ 1 ॥

ವೃಂದಾರಕ ವೃಂದವಂದಿತ ಚರಣಾರ ।
ವಿಂದಯುಗಳ ದಯದಿಂದ ನೋಡೊ ಎನ್ನ ॥ 2 ॥

ಯೂಥಪವದನ ಪ್ರದ್ಯೋತಸನ್ನಿಭ ಜಗ
ನ್ನಾಥವಿಠಲನ್ನ ಸಂಪ್ರೀತಿ ವಿಜಯಜಯ ॥ 3 ॥

****

158. ಕಾವೇರಿ ಕಲುಷಾಪಹಾರಿ

ರಾಗ: ಬಿಲಹರಿ ತಾಳ: ಖಂಡಛಾಪು

ಕಾವೇರಿ ಕಲುಷಾಪಹಾರಿ ಪಾವನ ।
ಶರೀರೀ ಶುಭತೋಷಕಾರೀ ॥ ಪ ॥

ಶ್ರೀ ವಾಸುದೇವ ರಂಗೇಶನಾಲಯಕೆ ।
ನೀನಾವರಣವಾಗಿರ್ಪೆ ವಿರಜಯಂತೇ ॥
ದೇವ ಋಷಿ ಗಂಧರ್ವ ಪಿತೃಪ ನರವರರಿಂದ ।
ಸೇವನೀಯಳಾಗಿ ಸರ್ವಾರ್ಥ ಪೂರೈಸೆ ॥ 1 ॥

ಆಲಚರಾನ್ವೇಷಣ ಲುಬ್ಧಸಾಲಿಗ್ರಾಮ ।
ತುಲಸಿವೃಕ್ಷವನೆ ಕೊಡಿಸಿದ ಮಾತ್ರದಿ ॥
ಕಲುಷರಾಶಿಗಳೆಲ್ಲ ಕಳೆದು ಮುಕ್ತಿಯನಿತ್ತೆ ।
ಸಲಿಲಮಂದಿರೆ ನಿನ್ನ ಕರುಣಕೇನೆಂಬೆ ॥ 2 ॥

ರವಿ ತುಲಾ ರಾಶಿಗೈದಿದ ಸಮಯದೊಳಗೊಂದು ।
ದಿವಸ ಮಜ್ಜನಗೈವ ಮಾನವರಿಗೇ ॥
ಪವನಾಂತರಾತ್ಮಕನ ಪಾದಕಮಲವ ತೋರಿ ।
ಭವರೋಗ ಕಳೆದು ಭಾಗ್ಯವಂತರನ್ನು ಮಾಳ್ಪೆ ॥ 3 ॥

ಶ್ರೀ ಪವನ ಶಿವರಿಂದ ತಾ ಪೂಜೆಗೊಳುತ ಬಹು ।
ರೂಪಗಳ ಧರಿಸಿಕೊಂಡಾ ಪರಮನು ॥
ವ್ಯಾಪಿಸಿಹ ನಿನ್ನೊಳವ್ಯಾಪಿ ಸ್ವರ್ಗಸ್ಥಜನ ।
ರೀಪೊಡವಿಯೊಳು ತವಸಮೀಪದಲಿ ಜನಿಸುವರು ॥ 4 ॥

ಮೂಢಮತಿಯು ನಾನು ಕೊಂಡಾಡಬಲ್ಲೆನೆ ನಿನ್ನ ।
ಬೇಡಿಕೊಂಬೆನು ಹೃದಯ ನೀಡದೊಳಗೇ ॥
ಗೂಢಪದಶಯನ **ಜಗನ್ನಾಥ ವಿಠಲ**ನಂಘ್ರಿ ।
ನೋಡುವಾ ಸೌಭಾಗ್ಯ ದಯಮಾಡು ಪ್ರತಿದಿವಸ ॥ 5 ॥

****

159. ಬಲು ರಮ್ಯವಾಗಿದೆ ಶ್ರೀಹರಿಯ ಮಂಚ

ರಾಗ: ಜೋಧಪುರಿ **ತಾಳ: ಝಂಪೆ**

ಬಲು ರಮ್ಯವಾಗಿದೆ ಶ್ರೀಹರಿಯ ಮಂಚ ॥ ಪ ॥

ಎಲರುಣಿಕುಲ ರಾಜರಾಜೇಶ್ವರನ ಮಂಚ ॥ ಅ.ಪ ॥

ಪವನತನಯನೆನಿಪ ಪಾವನತರ ಮಂಚ ।
ಭುವನತ್ರಯವ ಪೊತ್ತ ಭಾರಿಮಂಚ ॥
ಕಿವಿಗಳಿಲ್ಲದ ಮಂಚ ಶ್ರೀನಿಕೇತನ ಮಂಚ ।
ಶಿವರೂಪದಲಿ ಹರಿಯ ಒಲಿಸಿದ ಮಂಚ ॥ 1 ॥

ನೀಲಾಂಬರವನುಟ್ಟ ನಳನಳಿಸುವ ಮಂಚ ।
ನಾಲಿಗೆ ಎರಡುಳ್ಳ ನೈಜ ಮಂಚ ॥
ನಲ್ವತ್ತು ಕಲ್ಪದಿ ತಪವ ಮಾಡಿದ ಮಂಚ ।
ಕಾಲ ಮುಸಲ ಹಲವ ಪಿಡಿದಿಹ ಮಂಚ ॥ 2 ॥

ರಾಮನನುಜನಾಗಿ ರಣವ ಜಯಿಸಿದ ಮಂಚ ।
ತಾಮಸರುದ್ರನ ಪಡೆದ ಮಂಚ ॥
ಭೀಮನನುಜರೊಳು ಆವೇಶಿಸಿದ ಮಂಚ।
ಜೀಮೂತಮಂಡಲವ ತಡೆಗಟ್ಟಿದ ಮಂಚ ॥ 3 ॥

ಜೀವನಾಮಕನೆನಸಿ ವ್ಯಾಪ್ತನಾದ ಹರಿಯ ।
ಸೇವಿಸಿ ಸುಖಿಸುವ ದಿವ್ಯಮಂಚ ॥
ಸಾವಿರಮುಖದಿಂದ ತುತಿಸಿ ಹಿಗ್ಗುವ ಮಂಚ ।
ದೇವಕಿಯ ಜಠರದಲಿ ಜನಿಸಿದ ಮಂಚ ॥ 4 ॥

ವಾರುಣಿದೇವಿಗೆ ವರನೆನಿಸುವ ಮಂಚ ।
ಸಾರುವ ಭಕುತರನು ಪೊರೆವ ಮಂಚ ॥
ಕಾರುಣ್ಯನಿಧಿ ಸ್ವಾಮಿ **ಜಗನ್ನಾಥವಿಠಲನ** ।
ವಿಹಾರಕ್ಕೆ ಯೋಗ್ಯವಾದ ಶೇಷಮಂಚ ॥ 5 ॥

****

160. ಮುಖ್ಯ ಪ್ರಾಣದೇವ ನೀನಲ್ಲದೆ

ರಾಗ: ಮಧ್ಯಮಾವತಿ　　　　　　　　　　ತಾಳ: ಚತುರಶ್ರ ಏಕ

ಮುಖ್ಯಪ್ರಾಣದೇವ ನೀನಲ್ಲದೆ ।
ಕಾಯ್ವರ ಕಾಣೆನೊ ಜಗದೊಳಗೆ ॥ ಪ ॥

ಪ್ರಾಣಾ ಅಪಾನ ವ್ಯಾನ ಉದಾನ ಸಮಾನನೆನಿಪ ॥ ಅ.ಪ ॥

ವಾಸವ ಕುಲಿಶದಿ ಘಾಸಿಸೆ ಜೀವರಶ್ವಾಸ ನಿರೋಧಿಸಿದೇ ।
ಆ ಸಮಯದಿ ಕಮಲಾಸನ ಕೇಳಲು ನೀ ಸಲಹಿದೆ ಜಗವಾ ॥ 1 ॥

ಅಂಗದ ಪ್ರಮುಖ ಪ್ಲವಂಗರು ರಾಮನ ಅಂಗನೆಯನ ಹುಡುಕೇ ।
ತಿಂಗಳು ಮೀರಲು ಕಂಗೆಡೆ ಕಪಿಗಳ ಜಂಗುಳಿ ಪಾಲಿಸದೇ ॥ 2 ॥

ಪಾವಿನ ಪಾಶದಿ ರಾವಣ ನೀಲ ಸುಗ್ರೀವ ಮುಖ್ಯರಾ ಬಿಗಿಯೆ ।
ಸಾವಿರದ್ಯೈವತ್ತು ಗಾವುದಲ್ಲಿಹ ಸಂಜೀವನವನು ತಂದೆ ॥ 3 ॥

ಪರಿಸರ ನೀನಿರೆ ಹರಿ ತಾನಿರುವನು ಇರದಿರೆ ತಾನಿರನೂ ।
ಕರುಣನಿಯಾಮಕ ಸುರರಗರುವೆ ನೀ ಕರುಣಿಸೆ ಕರುಣಿಸುವಾ ॥ 4 ॥

ಭೂತೇಂದ್ರಿಯದಧಿನಾಥ ನಿಯಾಮಕ ತಾತನೆನಿಪ ।
ನಾತ್ಯೈಜಸಹಿರನಾ **ಜಗನ್ನಾಥವಿಠಲನ** ಪ್ರೀತಿಪಾತ್ರನಾದೆ ॥ 5 ॥

****

12. ಶ್ರೀ ಯೋಗೀಂದ್ರರಾಯರ ಕೀರ್ತನೆಗಳು

(ಅಂಕಿತ: ಪ್ರಾಣೇಶವಿಠಲ. ಕಾಲ: 1737–1822)

161. ಬಂದ ಗೋವಿಂದ ಮುಕುಂದ

ರಾಗ: ಶುದ್ಧ ಧನ್ಯಾಸಿ ತಾಳ: ಆದಿ

ಬಂದ ಗೋವಿಂದ ಮುಕುಂದ ನಿತ್ಯಾನಂದ ।
ಬಂದ ಗೋವಿಂದ ಮುಕುಂದ ನಿತ್ಯಾನಂದ ॥ ಪ ॥

ಬಂದ ದುರಿತಗಳ ಪರಿಹರಿಸಲು ನಮ್ಮ ।
ಇಂದಿರೇಶ ಸ್ವಾಮಿ ಶ್ರೀ ವೆಂಕಟೇಶ ॥
ಬಂದನು ಭರದಿಂದ ಗರುಡವಾಹನನಾಗಿ ।
ಬಂದ ಬಂದ ಭಕ್ತವೃಂದವ ನೋಡುತ ॥ 1 ॥

ಅರಗಿನ ಮನೆಯೊಳು ಪಾಂಡುಕುಮಾರರು ।
ಇರುತಿರೆ ಅವರಿಗೆ ಬಂದ ವಿಪತ್ತನು ॥
ಪರಿಹಾರವ ಮಾಡಿ ದ್ರುಪದನ ಪುರಿಯೊಳು ।
ಪರಮ ಹರುಷದಿಂದ ಮದುವೆಯ ಮಾಡ್ದವ ಬಂದ ॥ 2 ॥

ದುರುಳನಾದ ದುರ್ಯೋಧನನ ಸಭೆಯೊಳು ।
ತರುಣಿ ದ್ರೌಪದಿಯ ಸೀರೆಯ ಸೆಳೆಸಲು ॥
ಪರಮ ಕರುಣದಿಂದ ತರುಣಿಗಕ್ಷಯವಿತ್ತು ।
ದ್ವಾರಕಾಧಿಪತಿ ಶ್ರೀಪತಿ ಒಲಿಯುತ ಬಂದ ॥ 3 ॥

ಗುಣನಿಧಿ **ಪ್ರಾಣೇಶವಿಠಲ**ನು ಬಂದ ।
ಘನತರ ವಾದ್ಯ ವಿಶೇಷಗಳಿಂದ ॥
ಝುಣಝುಣರೆನ್ನುವ ಗೆಜ್ಜೆ ನಾದಗಳಿಂದ ।
ತದ್ಧಿಮಿ ಧಿಮಿಕೆಂದು ಕುಣಿಯುತ ಬಂದ ॥ 4 ॥

****

162. ತಾಯೆ ನಿನ್ನ ಪದ ತೋಯಜಕೆರಗುವೆ

ರಾಗ: ವಾಚಸ್ಪತಿ **ತಾಳ: ಆದಿ**

ತಾಯೆ ನಿನ್ನ ಪದ ತೋಯಜಕೆರಗುವೆ ।
ಮಾಯಾದೇವಿ ಹರಿಕಾಯನಿವಾಸಿನಿ ॥ ಪ ॥

ಬುದ್ಧಿಯ ಪ್ರೇರಿಸೆ ಪ್ರದ್ಯುಮ್ನನಸತಿ ।
ಕರ್ದಮಜಾಲೆಯೆ ಭದ್ರಶರೀರೇ ॥ 1 ॥

ಇಂಗಡಲಾತ್ಮಜೆ ಅಂಗನಾಕುಲಮಣಿ ।
ರಂಗನಪದಕಂಜ ಭೃಂಗಸರೋರುಣಿ ॥ 2 ॥

ಪ್ರಾಣೇಶವಿಠಲನ ಮಾನಿನಿ ಎನ್ನಯ ।
ಹೀನತೆಯೆಣಿಸದೆ ಪೋಷಿಸುವುದು ಮತಿ ॥ 3 ॥

****

163. ಪಾಲಿಸೆ ಶ್ರೀ ಗೌರಿ ಪಾಲಿಗೆ ಬಂದೆನು

ರಾಗ: ಕೀರವಾಣಿ

ಪಾಲಿಸೆ ಶ್ರೀ ಗೌರಿ ಪಾಲಿಗೆ ಬಂದೆನು ।
ಬೀಳುವೆ ಸರ್ವದಾ ಕಾಲಿಗೆ ಕರುಣದಿ ॥ ಪ ॥

ಶರಣೆಂದವರನ್ನು ಪೊರೆವಳು ಎಂಬುವ ಬಿರುದು ।
ನಿನ್ನದು ಎಂದರಿತೆನು ತ್ವರಿತದಿ ॥ 1 ॥

ಸನ್ನುತ ಪುರುಷನ ಇನ್ನೆಲ್ಲಿ ಕಾಣೆನೊ ।
ಮನ್ಮಥನೆಂಬುವ ಬನ್ನಪಡಿಸಲು ॥ 2 ॥

ಕಾಣೆನು ಶಾಂತಿಯ ಏನೆಂದ್ಹೇಳಲಿ ।
ಪ್ರಾಣೇಶವಿಠಲನು ತಾನೇಯೆ ಬಲ್ಲನು ॥ 3 ॥

****

13 ಜೋಷಿ ವೆಂಕಪ್ಪಾಚಾರ್ಯರ ಕೀರ್ತನೆಗಳು

(ಅಂಕಿತ: ವೆಂಕಟೇಶವಿಠಲ. ಕಾಕ:1815–1925)

164. ಉಮಾಮಹೇಶನ ಕುಮಾರ

ರಾಗ: ಮಧ್ಯಮಾವತಿ **ತಾಳ: ಆದಿ**

ಉಮಾಮಹೇಶನ ಕುಮಾರ ನಿನ್ನ ಸರಿ ಸಮಾನರಾರಯ್ಯ ॥ ಪ ॥

ಕುಮಾರ ಶಕ್ತ್ಯಾದಿ ಸಮಸ್ತ ಸುರಗುಣ ।
ಭಜಿಸಿ ನಿನ್ನಪಾದ ನಮಿಸುತಿರುವರು ॥ ಅ.ಪ ॥

ವಿದ್ಯಾವಿಧಾತನೇ ಮುದ್ದುಗಣೇಶನೆ ।
ಸದ್ಯೋಜಾತನ ಸುತನೇ ॥
ವಿದ್ಯಾಬುದ್ಧಿಯನ್ನಿತ್ತು ಸದ್ಭಕ್ತರನ್ನೆಲ್ಲ ।
ಉದ್ಧಾರ ಮಾಡಯ್ಯ ಸಿದ್ಧಿವಿನಾಯಕ ॥ 1 ॥

ಲಂಬೋದರನೇ ನಿನ್ನ ನಂಬಿದೆ ಎನ್ನಕಾಯೋ ।
ಅಂಬಿಕಾವರಸುತನೇ ॥
ಅಂಬುಜೋದ್ಭವ ಅಮರಾದಿ ಸಂಪೂಜಿತ ।
ಕುಂಭಾತ್ಮಜಾದಿ ಮುನೀಂದ್ರಾದಿ ಸೇವಿತ ॥ 2 ॥

ಘೋರದುರಿತ ಪರಿಹಾರ ವಿಘ್ನೇಶ್ವರ ।
ಕಾರುಣ್ಯಸಾಗರನೇ ॥
ಧೀರಗಂಭೀರ ಉದ್ಧಾರ ಗಣಪೂರ ।
ಮಾರನಪಿತ **ವೆಂಕಟೇಶ**ನ ಸಖಸುತ ॥ 3 ॥

****

165. ಒಲಿದೇ ಯಾತಕಮ್ಮ ಗಿರಿಜೆ

ರಾಗ: ಬಹುದಾರಿ ತಾಳ: ಆದಿ

ಒಲಿದೇ ಯಾತಕಮ್ಮ ಗಿರಿಜೆ ವಾಮದೇವಂಗೆ ॥ ಪ ॥

ಕುಸುಮಗಂಧಿ ಕೋಮಲಾಂಗಿ ಶಶಿಕಲಾಬ್ಜವದನೆ ನೀನು ।
ಅಸಮನೇತ್ರ ಅಸುರವೈರಿ ಭಸುಮಲೇಪನು ॥
ವಸುಮತೀಂದ್ರ ವಂದ್ಯೆ ನೀನು ಮಸಣಮಾರಿ ಒಡೆಯ ಅವನು ।
ಎಸೆವೊ ರುಂಡಮಾಲನಾದ ಪಶುಪ ಸದ್ಯೋಜಾತನಿಗೆ ॥ 1 ॥

ಒಲೆವೊ ಪೀತಾಂಬರಿಯು ನೀನು ಹುಲಿಯ ಕರಿಯ ಚರ್ಮದವನು ।
ಲಲಿತ ಕಂಬುಕಂಠಿ ನೀನು ಗರಳಕೊರಳನು ॥
ಲಲಿತ ಕುಮುದಸದನೆ ನೀನು ನೆಲೆ ಸ್ಮಶಾನವಾಸಿ ಅವನು ।
ಒಲವಿನಿಂದ ತಿರಿದು ಮೆರೆವ ಚೆಲುವ ವಾಮದೇವನಿಗೆ ॥ 2 ॥

ಬೆಚ್ಚಿ ಬೆದರೊ ಅಬಲೆ ನೀನು ಕಿಚ್ಚುಗಣ್ಣ ಘೋರನವನು ।
ಭಕ್ತರಿಷ್ಟದಾನಿ ನೀನು ಬಲು ಬಡವನವನು ॥
ಶಿಸ್ತಿನ ಶಿಂಗಾರಿ ನೀನು ಹುಚ್ಚುನಂತೆ ತಿರಿವನವನು ।
ಉತ್ತಮಾಂಗಿ ಒಲಿವರೇನೆ ಮೃತ್ಯು ವೈರಿ ತತ್‌ಪುರುಷಂಗೆ॥ 3 ॥

ಮಾರ ಮೋಹನಾಂಗಿ ನೀನು ಮಾರ ಭಸ್ಮಲೇಪನವನು ।
ಸಾರ ಸಾಕ್ಷಿ, ಸರ್ಪವೇಣಿ ಚಾರು ಮಂಗಳೆ ॥
ವೀರ **ವೆಂಕಟೇಶ**ನ ಸೋದರಿ ಸೌಂದರ್ಯಶೀಲೆ ।
ಮೂರುಪುರವ ಗೆಲಿದ ಮಾರ ವೈರಿಯಾಧೀಶನಿಗೆ ॥ 4 ॥

****

166. ಗಣಪತಿ ಎನ್ನ ಪಾಲಿಸೋಗಂಭೀರ

ರಾಗ: ಹಂಸಾನಂದಿ **ತಾಳ: ಆದಿ**

ಗಣಪತಿ ಎನ್ನ ಪಾಲಿಸೋ ಗಂಭೀರ ॥ ಪ ॥

ಪಾರ್ವತಿನಂದನ ಸುಂದರವದನ ।
ಶರ್ವಾದಿ ಸುರವಂದ್ಯ ಶಿರಬಾಗುವೆ ನಾ ॥ 1 ॥

ಆದಿಪೂಜಿತ ನೀನು ಮೋದಭಕ್ತರಿಗಿತ್ತು ।
ಮಾಧವನಲ್ಲಿ ಮನ ಸದಾ ನಿಲ್ಲಿಸುನೀ ॥ 2 ॥

ಪಂಕಜನಯನ ಶ್ರೀ **ವೆಂಕಟೇಶ**ವಿಠಲನ ।
ಕಿಂಕರನೆನಿಸೆನ್ನ ಶಂಕರತನಯನೆ ॥ 3 ॥

****

167. ಭುಜಗ ಭೂಷಣ ಕರುಣಾ ಗಜಾನನ

ರಾಗ: ತಿಲಂಗ್ **ತಾಳ: ಆದಿ**

ಭುಜಗಭೂಷಣ ಕರುಣಾ ಗಜಾನನ ॥ ಪ ॥

ಅಂಬರಕೆ ಅಭಿಮಾನಿ ಶಂಭುದೇವನಸುತ ।
ಇಂಬು ತೋರಿಸು ನೀ ವಿಶ್ವಂಭರ ಸ್ಮರಣೆಗೆ ॥ 1 ॥

ದಾಸವರ್ಯನೆ ವೇದವ್ಯಾಸರಿಗತಿಪ್ರಿಯ ।
ದಾಸನೆಂದೆನಿಸೆನ್ನ ಶೇಷಮೂರುತಿಯೆ ॥ 2 ॥

ಶ್ರುತಿ ಪ್ರತಿಪಾದ್ಯ ಶ್ರೀ**ವೆಂಕಟೇಶ**ನ ದೂತ ।
ಹಿತರೆನಗಿಲ್ಲ ನೀಗತಿಯೆಂದು ನಂಬಿದೆ ॥ 3 ॥

****

14. ಹರಪನಹಳ್ಳಿ ಭೀಮವ್ವನ ಕೀರ್ತನೆಗಳು

(ಅಂಕಿತ: ಭೀಮೇಶಕೃಷ್ಣ. ಕಾಲ: 1823–1903)

168. ವಿಷ್ಣು ಪಾದವ ನೋಡಿದೆ

ರಾಗ: ವಸಂತ ತಾಳ: ತ್ರಿಶ್ರ ಏಕ

ವಿಷ್ಣುಪಾದವ ನೋಡಿದೆ ।
ಎನ್ನ ಮನದಿಷ್ಟಫಲಗಳ ಬೇಡಿದೆ ॥ ಪ ॥

ವಿಷ್ಣುಪಾದವ ನೋಡ್ಯಾಭೀಷ್ಟ ಫಲಗಳ ಬೇಡಿ ।
ಶ್ರೇಷ್ಠಪಾದಕೆ ಶಿರವ ಮುಟ್ಟಿ ಸ್ಪಂದನೆ ಮಾಡಿ ॥ ಅ.ಪ ॥

ಗಂಗೆ ಹುಟ್ಟಿದ ಪಾದ ಇದು ನೋಡೆ ।
ಗಯನ ಮೆಟ್ಟಿದ ಪಾದ ॥
ತಂಗಿ ದ್ರೌಪದಿದೇವಿಪತಿಗೆ ಸಾರಥಿಯಾಗಿ ।
ಸಂಗ್ರಾಮದಿ ರಥವ ನೆಲಕೊತ್ತಿ ಉಳುಹಿದ ಪಾದ ॥ 1 ॥

ಬಲಿಯ ಶಿರ ತುಳಿದ ಪಾದ ।
ನೆಲನ ಮೂರಡಿಯ ಮಾಡಿದ ಪಾದ ॥
ಶಿಲೆಯಾಗಿ ಅಹಲ್ಯೆಯ ಉದ್ಧಾರವನು ಮಾಡಿ ।
ಮಲತಾಯಿಯ ಮಾತಿಗರಣ್ಯ ತಿರುಗಿದ ಪಾದ ॥ 2 ॥

ಲಕ್ಷ್ಮೀ ಸೇವಿಸುವ ಪಾದ ಈ ಗಯದಿ ।
ಸಾಕ್ಷಾತ್ ಹರಿಯ ಪಾದ ॥
ಕುಕ್ಷಿಯಲಿ ತ್ರಿಜಗವನ್ನಿಟ್ಟು ರಕ್ಷಿಸುವಂತಾ ।
ಮೋಕ್ಷಪ್ರದ **ಭೀಮೇಶಕೃಷ್ಣ** ಮೂರುತಿ ಪಾದ ॥ 3 ॥

****

15. ಸುರಪುರದ ಆನಂದದಾಸರ ಕೀರ್ತನೆಗಳು

(ಅಂಕಿತ: ಕಮಲೇಶವಿಠಲ. ಕಾಲ: 1840–1910)

169. ಭಾಗ್ಯವ ಕೊಡೆ ಗರತಿ ಭಾಗೀರಥಿ

ರಾಗ: ಬೇಹಾಗ್ **ತಾಳ: ಆದಿ**

ಭಾಗ್ಯವ ಕೊಡೆ ಗರತಿ ಭಾಗೀರಥಿ ॥ ಪ ॥

ಹರಿಪಾದ ನಖದಿಂದ ಹರಿದು ಬಂದಳೆ ಗಂಗೆ ।
ಪರಮಭಕ್ತರಸಂಗ ವರವನ್ನೆ ಕೊಡು ತುಂಗ ॥ 1 ॥

ಕಾಶಿಪಟ್ಟಣದಲ್ಲಿ ವಾಸವಾಗಿರುವೆ ।
ಈಶಾದ್ಯರಿಗೆ ಮಹಾವರವನ್ನೆ ಕೊಡುವೆ ॥ 2 ॥

ಕಮಲೇಶವಿಠಲನ ಮಮತೆಯ ಮಗಳೆ ಉ ।
ತ್ತಮ ಗರತಿಯೆಂದು ಭ್ರಮಿಸಿ ಬಂದೆನು ತಾಯೆ ॥ 3 ॥

****

16. ಓರೆಬಾಯಿ ಲಕ್ಷ್ಮೀದೇವಮ್ಮನವರ ಕೀರ್ತನೆಗಳು

(ಅಂಕಿತ: ನರಸಿಂಹವಿಠಲ. ಕಾಲ: 1865–1950)

170. ಶೃಂಗಾರವಾಗಿಹಳು ಶ್ರೀ ಮಹಾಲಕ್ಷ್ಮೀ

ರಾಗ: ಷಣ್ಮುಖ ಪ್ರಿಯ ತಾಳ: ಮಿಶ್ರಛಾಪು

ಶೃಂಗಾರವಾಗಿಹಳು ಶ್ರೀ ಮಹಾಲಕ್ಷ್ಮೀ ।
ಬಂಗಾರಮಂಟಪದಿ ಬಂದು ಕುಳಿತಿಹಳು ॥ ಪ ॥

ತಾವರೆಯ ಕೊಳದಲ್ಲಿ ಜನಿಸಿಹಳು ಶ್ರೀಲಕ್ಷ್ಮಿ ।
ಕೋಟಿಸೂರ್ಯಪ್ರಭೆಯಂತೆ ಬೆಳಗುತಿಹಳು ॥
ಬಿಳಿಯ ಸೀರೆಯನುಟ್ಟು ಹೊಳೆವೊ ಕುಪ್ಪಸ ತೊಟ್ಟು ।
ನಡೆಮುಡಿಯ ಮೇಲೆ ತಾ ನಡೆದು ಬರುತಿಹಳು ॥ 1 ॥

ಎಡಬಲದಿ ಗಜಲಕ್ಷ್ಮೀ ನಡುವೆ ತಾವರೆ ಲಕ್ಷ್ಮಿ ।
ಥಳಥಳನೆ ಹೊಳೆಯುವಳು ಶ್ರೀಮಹಾಲಕ್ಷ್ಮಿ ॥
ಬಡವರಾದವರನ್ನು ಬಿಡದೆ ಕಾಯ್ವಳು ಲಕ್ಷ್ಮಿ ।
ಸಡಗರದಿ ಬರುತಿಹಳು ಶ್ರೀಮಹಾಲಕ್ಷ್ಮಿ ॥ 2 ॥

ನರಸಿಂಹವಿಠಲನ ಹರಸಿ ಸ್ವೀಕರಿಸಮ್ಮ ।
ಸರಸವಾಡುತಲೊಮ್ಮೆ ಸಲಹು ಮಾತೆ ॥
ಮಾಡಿದಪರಾಧವನು ಮನದಿ ಎಣಿಸದೆ ನೀನು ।
ಕಾಪಾಡಬೇಕೆಂದು ಪಾದಕೆರಗುವೆನು ॥ 3 ॥

****

17. ರಾಮರಾವ್ ಕುಲಕರ್ಣಿ ಅವರ ಕೀರ್ತನೆಗಳು

(ಅಂಕಿತ: ಆನಂದವಿಠಲ. ಕಾಲ: 1869–1917)

171. ಅಂದವಾದ ತೋಯಜದ

ರಾಗ: ಶುದ್ಧಧನ್ಯಾಸಿ ತಾಳ: ಆದಿ

ಅಂದವಾದ ತೋಯಜದ ಚಂದವಾದ ಪಾದದಿಂದ ।
ಓಡಿಬಾರೊ ರಂಗ ಸಾಗಿಬಾರೊ ॥ ಪ ॥

ಸುತ್ತಮುತ್ತ ಗುಮ್ಮಾಗಳು ಎತ್ತಿಕೊಂಡು ಒಯ್ಯುವ ಮುನ್ನ ।
ಸುತ್ತಿಸುತ್ತಿ ತಾಳಲಾರೆ ಓಡಿಬಾರೊ ।
ಕತ್ತಲಾಯಿತೆನ್ನ ಕಂದ ಸಾಗಿಬಾರೊ ॥ 1 ॥

ನೊರೆಹಾಲು ಮೊಸರು ಬೆಣ್ಣೆ ಕರೆವ ತುರುಗಳು ಎಲ್ಲ ।
ಹರಿ ಎಲ್ಲಿ ಎನ್ನುತಲಿವೆ ಓಡಿಬಾರೊ ।
ಕರೆದರೆ ಸುಮ್ಮನೆ ನೀ ಸಾಗಿಬಾರೊ ॥ 2 ॥

ಕಂಡ ಕಂಡ ಜನರು ನಿನ್ನ ಪುಂಡನೆಂದು ಸಾರುತ್ತಿರೆ ।
ಪುಂಡನೇನೊ ನೀನು ಓಡಿಬಾರೊ ।
ಪ್ರಚಂಡ **ಆನಂದವಿಠಲ** ಸಾಗಿಬಾರೊ ॥ 3 ॥

****

18. ಶೇಖ್ ಬಡೆ ಸಾಹೇಬರ ಕೀರ್ತನೆಗಳು

(ಅಂಕಿತ: ರಾಮದಾಸ. ಕಾಲ: 1885–1940)

172. ಇದು ಸ್ನಾನ ಇದು ಸ್ನಾನ

ರಾಗ: ಕುಂತಲವರಾಳಿ **ತಾಳ: ಆದಿ**

ಇದು ಸ್ನಾನ ಇದು ಸ್ನಾನ ಇದು ಸ್ನಾನವಯ್ಯ ॥
ಸದಮಲ ಜ್ಞಾನಿಗಳು ಮನವೊಪ್ಪಿ ಮಾಡುವ ॥ ಪ ॥

ಇಟ್ಟು ಹಂಗಿಸದ್ದೇ ಸ್ನಾನ ಕೊಟ್ಟು ಕುದಿಯದ್ದೆ ಸ್ನಾನ ।
ಕೊಟ್ಟದ್ದು ಕೊಡುವುದೆ ಶಿಷ್ಟ ತುಂಗಾಸ್ನಾನ ॥
ನಿಷ್ಠುರಾಡಿದ್ದೆ ಸ್ನಾನ ದುಷ್ಟಸಂಗಳಿವುದೇ ಸ್ನಾನ ।
ಶಿಷ್ಟಜನ ಸಂಗವೇ ನಿಜ ಕೃಷ್ಣಾ ಸ್ನಾನ ॥ 1 ॥

ಭೋಗದಾಸ್ಯವು ಅಳಿವುದೇ ಸ್ನಾನ ।
ನೀಗಲುಭವ ಅದು ಪುಣ್ಯಸ್ನಾನ ॥
ಭಗವತ್ ಭಜನೆ ಕ್ಷೀರಸಾಗರ ಸ್ನಾನ ।
ರಾಗನೀಗ್ವುದೆ ಸ್ನಾನ ಜಾಗರಣ ಸದಾಸ್ನಾನ ॥ 2 ॥

ಭಾಗವತರೊಲುಮೆ ನಿಜಭಾಗೀರಥಿ ಸ್ನಾನ ।
ಮರೆವತರಿವುದೇ ಸ್ನಾನ ಅರಿವು ತಿಳಿವುದೇ ಸ್ನಾನ ॥
ಶ್ರೀ**ರಾಮದಾಸ**ನ ನೆನೆವುದೇ ಗಂಗಾಸ್ನಾನ ।
ಪರತತ್ತ್ವವರಿವುದೇ ಪರಮೋಚ್ಚಸ್ನಾನ ॥ 3 ॥

****

19. ಮಾನ್ವಿ ಗುಂಡಾಚಾರ್ಯರ ಕೀರ್ತನೆಗಳು

(ಅಂಕಿತ: ಶ್ಯಾಮಸುಂದರವಿಠಲ. ಕಾಲ: 1896–1956)

173. ಅಡವಿ ನಿಲಯನೆ ನಿನ್ನಡಿಗೆರಗುವೆ

ರಾಗ: ದೇಶ್ ತಾಳ: ಆದಿ

ಅಡವಿನಿಲಯನೆ ನಿನ್ನಡಿಗೆರಗುವೆ ।
ಕರಪಿಡಿದು ಪಾಲಿಸಯ್ಯ ॥ ಪ ॥

ಮೃಡನುತ ಭಾರತಿ ಒಡೆಯನೆ ಪ್ರಾರ್ಥಿಪೆ ।
ಬಿಡಿಸು ಭವದ ಮಾಯಾ ॥ ಅ.ಪ ॥

ನಿನ್ನದರುಶನದಿ ಎನ್ನಜನ್ಮ ಪಾವನವಾಯಿತಯ್ಯಾ ।
ನಿನ್ನ ಅನುಗ್ರಹವನ್ನು ಪಿಡಿದು ಸಂಪನ್ನರೊಳಿಡು ಜೀಯಾ ॥ 1 ॥

ತರು ಚರ ನರ ದ್ವಿಜ ವರರೂಪತ್ರಯ ಧರಿಸಿದಂಥಾ ದೇವಾ ।
ದುರುಳ ದೈತ್ಯ ಪರಿವಾರ ಗರ್ವಹರ ಶರಣ ಸಂಜೀವಾ॥ 2 ॥

ಸೃಷ್ಟಿಯೊಳಗೆ ಅತಿಶ್ರೇಷ್ಠನೆಂದೆನಿಸಿದ ಕುಷ್ಟಗಿಪುರವಾಸ ।
ದಿಟ್ಟಮಾರುತಿ **ಶ್ಯಾಮಸುಂದರವಿಠಲ** ಪ್ರಿಯದಾಸ ॥ 3 ॥

****

20. ವಿದ್ಯಾಪ್ರಸನ್ನರ ಕೀರ್ತನೆಗಳು

(ಅಂಕಿತ: ಪ್ರಸನ್ನದಾಸ. ಕಾಲ: 1899–1935)

174. ಹುಚ್ಚು ಹೊಳೆಯ ಪ್ರವಾಹದಲಿ

ರಾಗ: ಸಿಂಧು ಭೈರವಿ   ತಾಳ: ರೂಪಕ

ಹುಚ್ಚು ಹೊಳೆಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದ ಎನ್ನ ।
ಅಚ್ಚಳಿಯದೆ ದಡಕೆ ತಂದಿತ್ತು ಅಚ್ಯುತನದಯ ॥ ಪ ॥

ಬಿಚ್ಚಿ ತೋರಲಾಗದೆನ್ನ ಅಚ್ಚರಿಯನು ದೇವ ।
ನಿನ್ನ ಮೆಚ್ಚುಗೆಯನು ಪಡೆವೆನೆಂದು ಸತ್ಯಮಾಡುವೆ ॥
ಅಷ್ಟದಾರಿದ್ರ್ಯ ಬರಲಿ ಕಷ್ಟ ರಾಶಿ ರಾಶಿ ಬರಲಿ ।
ಶ್ರೇಷ್ಠದ ಮಾನಸದ ಭಾಗ್ಯವಿತ್ತು ಪೊರೆಯಲೊ ॥ 1 ॥

ವಿಷವ ಬಡಿಸುವರಿಗೆ ದಿವ್ಯರಸವ ಕುಡಿಸುವಂತೆ ದೇವ ।
ಹಸನು ಬುದ್ಧಿಯಿತ್ತು ಪೊರೆಯೋ ಹೃಷಿಕೇಶನೇ ॥
ತ್ರಾಣವ ಕೊಡು ಮನಕೆ ದೇವ ಪ್ರಾಣಗಳನು ।
ಚರಣದಲಿ ಕಾಣಿಕೆಯರ್ಪಿಸುವೆ ರಮಾ ಪ್ರಾಣನಾಥನೆ ॥ 2 ॥

ಮದಕೆ ಕಿಚ್ಚನೊಟ್ಟಿ ಕ್ಷಣದಿ ಎದೆಗೆ ಕೆಚ್ಚನಿತ್ತು ।
ಮುದದಿ ಬದುಕಿನಲೆ ಮುಕುತಿ ಸೌಖ್ಯವಿತ್ತು ಪೊರೆಯಲೋ ॥
ಎನ್ನ ಚಿತ್ತ ರಾಜ್ಯದಲ್ಲಿ ಉನ್ನತಪೀಠದಲಿ ಕುಳಿತು ।
ನಿನ್ನ ವಿಭವ ತೋರುತಲಿ ಪ್ರಸನ್ನನಾಗೆಲೋ ॥ 3 ॥

****

175. ಸ್ವೀಕರಿಸೆನ್ನಯ ಪೂಜೆಯ ತುಳಸಿ

ರಾಗ: ಆರಭಿ ತಾಳ: ಆದಿ

ಸ್ವೀಕರಿಸೆನ್ನಯ ಪೂಜೆಯ ತುಳಸಿ ।
ಲೋಕೋತ್ತರನರಸೀ ॥ ಪ ॥

ಈ ಕರಗಳು ಧನ್ಯಗಳಾಗಲೀಮನ ।
ವ್ಯಾಕುಲ ಪರಿಹರಿಸಮ್ಮಜನನಿ ॥ ಅ.ಪ ॥

ಮಲ್ಲಿಗೆ ಸಂಪಿಗೆ ಜಾಜಿ ಸೇವಂತಿಗೆ ।
ಪುಲ್ಲಕುಸುಮವಿರಲೂ ॥
ಬಲ್ಲನು ಹರಿ ನೀನಿಲ್ಲದ ಪೂಜೆಯ ।
ಬಲ್ಲರಿದನು ಜ್ಞಾನಿಗಳ ಮಾತೆ ॥ 1 ॥

ವಂದಿಸಿ ನಿನ್ನಯ ಚರಣಗಳಿಗೆ ಫಲ ।
ಗಂಧಪುಷ್ಪಗಳನರ್ಪಿಸುವೆ ॥
ಬೃಂದಾವನಲೋಲನವಲ್ಲಭೆ ಮೃದು ।
ಮಂದಹಾಸವನು ತೋರೆಮಾತೆ ॥ 2 ॥

ನೀನಿದ್ದೆಡೆ ಹರಿ ತಾನಿರುವನು ।
ಅನುಮಾನವಿಲ್ಲವೆನಗೆ ॥
ದಾನಧರ್ಮಗಳ ಫಲಕೆ ಕಾರಣಗಳು ।
ನೀನಾಗಿರುವೆ ಪ್ರಸನ್ನವದನೆ ॥ 3 ॥

****

21. ಗೋಸಾವಿ ಅನಂತಾಚಾರ್ಯರ ಕೀರ್ತನೆಗಳು
(ಅಂಕಿತ: ಅನಂತಾದ್ರೀಶ. ಕಾಲ: 19ಶ)

176. ಬಾರೆ ಭಾಗ್ಯದ ನಿಧಿಯೇ

ರಾಗ: ಬೇಹಾಗ್ ತಾಳ: ಆದಿ

ಬಾರೆ ಭಾಗ್ಯದ ನಿಧಿಯೇ ಕರವೀರನಿವಾಸಿನಿ ಸಿರಿಯೇ
ಬಾರೆ ಬಾರೆ ಕರವೀರನಿವಾಸಿನಿ ।
ಬಾರಿ ಬಾರಿಗೆ ಶುಭಕೋರೆ ನಮ್ಮ ಮನೆಗೆ ॥ ಪ ॥

ನಿಗಮವೇದ್ಯಳೆ ನೀನು ನಿನ್ನ ಪೊಗಳಲಾಪೆನೆ ನಾನು ।
ಮಗನಪರಾಧವ ತೆಗೆದೆಣಿಸದೆ ನೀ ।
ಲಗುಬಗೆಯಿಂದಲಿ ಪನ್ನಂಗವೇಣಿ ॥ 1 ॥

ಲೋಕಮಾತೆಯು ನೀನು ನಿನ್ನ ತೋಕನಲ್ಲವೆ ನಾನು ।
ಆಕಳು ಕರುವಿನ ಸ್ವೀಕರಿಸುವ ಪರಿ ।
ನೀ ಕರುಣದಿ ಕಾಲ್ಹಾಕೆ ನಮ್ಮ ಮನೆಗೆ ॥ 2 ॥

ಕಡೆಗೆ ನಮ್ಮ ನಿವಾಸ ನಿನ್ನೊಡೆಯ **ಅನಂತಾದ್ರೀಶ** ।
ಒಡೆಯನಿದ್ದಲ್ಲಿಗೆ ಮಡದಿ ಬಾಹುದೇ ।
ರೂಢಿಗುಚಿತವಿದು ನಡೆ ನಮ್ಮ ಮನಿಗೆ ॥ 3 ॥

****

22. ಇಂದಿರೇಶ ವಿಠಲರ ರಚನೆ

177. ಹೊಸ ಕಣ್ಣು ಎನಗೆ ಹಚ್ಚಲಿ ಬೇಕು

ರಾಗ: ಮಾಂಡ್ **ತಾಳ: ಆದಿ**

ಹೊಸ ಕಣ್ಣು ಎನಗೆ ಹಚ್ಚಲಿ ಬೇಕು ಜಗದಂಬ ।
ವಸುದೇವಸುತನ ಕಾಂಬುದಕೆ ॥ ಪ ॥

ಘಸಣಿಯಾಗಿದೆ ಭವವಿಷಯ ವಾರಿಧಿಯೊಳು ।
ಶಶಿಮುಖಿ ಕರುಣದಿಕಾಯೆ, ತಾಯೆ ॥ ಅ.ಪ ॥

ಮಂದಹಾಸನೀ ಭವಸಿಂಧುವಿನೊಳಗಿಟ್ಟು ।
ಚಂದವೆ ಅಮ್ಮ ನೋಡುವುದು ॥
ಕಂದನಂದದಿ ಬಾಲ್ಯದಿಂದ ಸೇರಿದೆ ನಿನ್ನ ।
ಮಂದರೋದ್ಧರನ ತೋರಮ್ಮ ॥ 1 ॥

ಪರರ ಅನ್ನವನುಂಡು ಪರರ ಧನವ ಕೊಂಡು ।
ಪರಿಪರಿ ಕ್ಲೇಶಗಳುಂಡೆ ॥
ವರಲಕ್ಷ್ಮಿ ನಿನ್ನ ಚಾರುಚರಣವ ಮೊರೆಹೊಕ್ಕೆ ।
ಕರುಣದಿ ಕಣ್ಣೆತ್ತಿ ನೋಡೇ ತಾಯೆ ॥ 2 ॥

ಅಂದಚಂದವನೊಲ್ಲೆ ಬಂಧುಬಳಗವನೊಲ್ಲೆ ।
ಬಂಧನಕೆಲ್ಲ ಕಾರಣವು ॥
ಇಂದಿರೇಶನ ಪಾದದ್ವಂದ್ವವ ತೋರು ಹೃ ।
ನ್ಮಂದಿರದಲಿ ಬೇಗ ಈಗ ॥ 3 ॥

****

23. ಶ್ರೀ ಹರಿವಿಠಲರ ರಚನೆ

178. ಸಾರಸಾಕ್ಷರು ವರಲಕ್ಷ್ಮಿದೇವ್ಯರಿಗೆ

ಶಂಕರಾಭರಣ ತಾಳ: ಆದಿ

ಸಾರಸಾಕ್ಷರು ವರಲಕ್ಷ್ಮಿದೇವರಿಗೆ ।
ಪಾದಪೂಜೆಯ ಮಾಡಿ ಧನ್ಯರಾಗಿ ॥ ಪ ॥

ಧನ್ಯರಾಗಿ ಮಾನ್ಯರಾಗಿ ।
ಭಾಗ್ಯವಂತರಾಗಿ ಸಂಪನ್ನರಾಗಿ॥ ಅ.ಪ ॥

ಹಾರಕಂಕಣ ಕೇಯೂರಗೊಂಡ್ಯಾ ।
ತೋರ ವಡ್ಯಾಣವು ಪಾದಭೂಷ ॥
ಓಲೆ ನಾಗರ ಬೇಸೂರಿ ಬಾಳ್ಯ ।
ಪೂರ್ವದ ಬುಗುಡಿ ಬುಲಾಕು ಮುಕುರ ॥ 1 ॥

ಕುಂದ ಮಂದಾರ ಸುಗಂಧ ಪುಷ್ಪ ।
ಗಂಧ ದೂರ್ವ ಪತ್ರಿ ಅರ್ತಿಯಿಂದ ॥
ಚಂದದಿ ಪಾದದಿ ಆಚ್ಹ್ವಾನ ।
ಕುಂದಣಪೀಠದಿ ಧೂಪದೀಪ ॥ 2 ॥

ಫೇಣಿ ಮಂಡಿಗೆ ಚಿರೋಟಿ ಲಾಡು ।
ಹಪ್ಪಳ ಸಂಡಿಗ್ಯಾಂಬೋಡಿ ಬೂಂದಿ ॥
ತಂಡತಂಡದಿ ಪಾಯ್ಸಕ್ಷೀರ ।
ತುಪ್ಪ ಮಂಡಲಮಾಡಿ ನೈವೇದ್ಯಕಿಟ್ಟು ॥ 3 ॥

ನಾರಿಕೇಳ, ಅಂಜೂರ ಬೀಜಫಲ ।
ಸಾರದಾಳಿಂಬ ದ್ರಾಕ್ಷಿ ಕದಳಿಮೀರಿ ಬಾದಾಮಿ ॥
ತಾಂಬೂಲ ಜಾಲ ಆರತಿ ।
ವಂದನೆ ಮಾಡಿ ಬೇಗ ॥ 4 ॥

ಛತ್ರ ಚಾಮರ, ದರ್ಪಣನಾಟ್ಯ ।
ವಿಚಿತ್ರಗಾನ ದಿವ್ಯವಾದ್ಯದಿಂದ ॥
ಸ್ತೋತ್ರ ಶಾಸ್ತ್ರೋಕ್ತದಿ ।
ವಿಶಿಷ್ಟಪೂಜೆ ಪಾತ್ರ ಶ್ರೀ **ಹರಿವಿಠಲದಾಸ** ॥ 5 ॥

****

24. ಶ್ರೀಧರದಾಸರ ರಚನೆ

179. ಶ್ರೀಮತ್ ಶಂಕರಾಚಾರ್ಯ ಶಿವಗುರು ತನಯನೆ

ಶ್ಲೋಕ :

ಪದ್ಮಾಸೀನಂ ಪ್ರಶಾಂತ ಯಮನಿರತ
ಮನಂಗಾರಿ ತುಲ್ಯಪ್ರಭಾವಂ ।
ಫಾಲೇ ಭಸ್ಮಾಂಕಿತಂ ಸುಸ್ಮಿತ ರುಚಿರ
ಮುಖಾಂಭೋಜ ಇಂದೀವರಾಕ್ಷಂ ।
ಕಂಬುಗ್ರೀವಂ ಕರಾಭ್ಯಾಂ ವಿಹಿತವಿಲಸತ್ ಪುಸ್ತಕಂ
ಜ್ಞಾನಮುದ್ರಾಂ ವಂದ್ಯಂ ನಿರ್ವಾಣಮುಖ್ಯೈಃ
ನತಜನವರದಂ ಭಾವಯೇ ಶಂಕರಾಚಾರ್ಯಂ

ರಾಗ: ಶ್ರೀರಂಜನಿ **ತಾಳ: ಆದಿ**

ಶ್ರೀಮತ್ ಶಂಕರಾಚಾರ್ಯ ಶಿವಗುರುತನಯನೆ ।
ಸೋಮಕಲಾ ಪರಿಪೂರ್ಣ ನಿರಾಮಯ ॥ ಪ ॥

ಕಾಲಟಿಯಲಿ ಪುಟ್ಟಿ ಬಾಲನರೂಪದಿ ।
ಲೀಲೆಯ ತೋರಿದ ಬಾಲ ಯೋಗೀಂದ್ರ ॥
ಕಾಲಕರ್ಮವ ಗೆಲಿದ ಶೀಲಸದ್ಗುಣನೆ ।
ಪಾಲಿಪುದೆಮ್ಮನು ದೀನದಯಾನಿಧೇ ॥ 1 ॥

ಅದ್ವೈತಾಮೃತ ತತ್ತ್ವವ ಸಾರಿದ ।
ವಿದ್ಯಾಲೋಲ ವಿಚಾರಮಹಿಮನೆ ॥
ಶುದ್ಧ ಸತ್ತ್ವ ಬ್ರಹ್ಮಜ್ಞಾನವ ಕರುಣಿಸು ॥
ಅಧ್ಯಾತ್ಮತತ್ತ್ವ ಆನಂದ ತಪೋನಿಧೇ ॥ 2 ॥

ವೇದಾಖಿಲಶಾಸ್ತ್ರ ಆಗಮವೇದ್ಯನೆ ।
ವೇದರಹಿತ ಪರಬ್ರಹ್ಮಸ್ವರೂಪನೆ ॥
ಶ್ರೀಧರದಾಸ ಹೃದಯಾಬ್ಜವಾಸ ।
ಮೋದದಿ ಸಲಹೈದೇವ ಕೃಪಾನಿಧೇ ॥ 3 ॥

****

25. ಶಾರದದಾಸಿ ಅವರ ರಚನೆಗಳು

180. ಪುರಂದರದಾಸವರೇಣ್ಯ

ರಾಗ: ದುರ್ಗ **ತಾಳ: ಆದಿ**

ಪುರಂದರ ದಾಸವರೇಣ್ಯ ।
ಶ್ರೀ ಹರಿದಾಸರೊಳು ಅಗ್ರಗಣ್ಯ ॥ ಪ ॥

ರಂಗವಿಠಲನ ಪಾದಾಂಬುಜವನು ।
ನಂಬಿ ಬಾಳಿದ ಭಕ್ತಾಗ್ರಗಣ್ಯ ॥ ಅ.ಪ ॥

ಪಂಡರಿರಂಗನ ಪಾಡಿಕೊಂಡಾಡುತ ।
ಪಾಮರಜನರನು ಪರಿವರ್ತನೆಗೈದು ॥ 1 ॥

ಪೊಡವಿಯೊಳ್ ಅಮರತ್ವವ ತಾ ಗಳಿಸಿದ ।
ಶಾರದದಾಸಿವಂದಿತ ಶ್ರೀಗುರು ॥ 2 ॥

****

181. ಮಹಾಯೋಗಿ ತ್ಯಾಗರಾಜ

ರಾಗ: ನಾಟ **ತಾಳ: ರೂಪಕ**

ಮಹಾಯೋಗಿ ತ್ಯಾಗರಾಜ ಮನೋನಿಗ್ರಹ ತೇಜ ।
ಮಧುರ ರಾಮನಾಮಾಮೃತಪಾನ ಮಾನವ ಕುಲತೇಜ ॥ ಪ ॥

ಮಹಾಮುನಿ ನಾರದ ಗುರು ದರ್ಶನಭಾಗ್ಯಪ್ರದಾ
ದಾನನಿದಾನ ಜ್ಞಾನಸಂಪದಾ ॥ 1 ॥

ಸ್ವರ ರಾಗ ಲಯಶುದ್ಧಗಾನ ಜ್ಞಾನ ತ್ಯಾಗರಾಜ ।
ಸದಾಚಾರ ಸದಾನಂದ ಸದ್ಗುರು ತ್ಯಾಗರಾಜ ॥ 2 ॥

ಶರಣು ಶರಣು ಸಚ್ಚಿದಾನಂದ ಬ್ರಹ್ಮರೂಪ ತ್ಯಾಗರಾಜ ।
ದೇವಿ **ಶಾರದದಾಸಿ** ವಂದಿತ ತ್ಯಾಗರಾಜ ॥ 3 ॥

****

26. ನಾರಾಯಣತೀರ್ಥರ ರಚನೆ

182. ಶಿವ ಶಿವ ಭವ ಭವ ಶರಣಂ ಮಮ

ಶ್ಲೋಕ:

ಆನಂದ ನರ್ತನಸಮಯೇ ।
ನಟನಾಯಕಸ್ಯ ಪಾದಾರವಿಂದ
ಮಣಿನೂಪುರ ಮಂಜಿ ತಾನಿನ್
ಆನಂದಯಂತಿ ಮಂದಯಂತಿ ವಿಮೋಹಯಂತಿ
ರೋಮಾಂಚಯಂತಿ ನಯನಾನಿ ಕೃತಾರ್ಥಯಂತಿ ॥

ರಾಗ: ಚಕ್ರವಾಕ **ತಾಳ: ಆದಿ**

ಶಿವಶಿವ ಭವಭವ ಶರಣಂ ಮಮ ।
ಭವತು ಸದಾ ತವಸ್ಮರಣಂ ॥ ಪ ॥

ಗಂಗಾಧರ ಚಂದ್ರಚೂಡ ಜಗನ್ಮಂಗಳ ಸರ್ವಲೋಕನೀಡ ।
ಕೈಲಾಸಚಲವಾಸ ಶಿವಕರಮುರಹರ ದರಹಾಸ ॥ 1 ॥

ಭಸ್ಮೋದ್ಧೂಲಿತ ದೇಹ ಶಂಭೋ ಪರಮಪುರುಷ ವೃಷವಾಹ ।
ಪಂಚಾನನ ಫಣಿಭೂಷ ಶಿವ ಪರಮಪುರುಷ ಮುನಿವೇಷ ॥ 2 ॥

ಆನಂದ ನಟನ ವಿನೋದ ಸಚ್ಚಿದಾನಂದ ವಿದಳಿತಖೇದ ।
ನವವ್ಯಾಕರಣಸ್ವಭಾವ **ನಾರಾಯಣತೀರ್ಥ**ದೇವ ॥ 3 ॥

****

27. ಗುರುಶೇಷ ವಿಠಲರ ರಚನೆ

183. ಗುರು ಮಧ್ವರಾಯರಿಗೆ ನಮೋ ನಮೋ

ರಾಗ: ಯಮನ್ ತಾಳ: ಆದಿ

ಗುರು ಮಧ್ವರಾಯರಿಗೆ ನಮೋ ನಮೋ ॥ ಪ ॥

ಗುರು ಮಧ್ವಸಂತತಿಗೆ ನಮೋ ನಮೋ ।
ಶ್ರೀಪಾದರಾಜರಿಗೆ ನಮೋ ನಮೋ ॥ 1 ॥

ವೈಕುಂಠದಾಸರಿಗೆ ಮಹೀಪತಿದಾಸರಿಗೆ ।
ಪುರಂದರದಾಸರಿಗೆ ನಮೋ ನಮೋ ॥ 2 ॥

ಗುರುವಿಜಯದಾಸರಿಗೆ ಬಾಗಣ್ಣದಾಸರಿಗೆ ।
ರಂಗ ಒಲಿದ ದಾಸರಿಗೆ ನಮೋ ನಮೋ ॥ 3 ॥

ಕನಕದಾಸರಿಗೆ ತ್ಯಾಗರಾಜರಿಗೆ ।
ವಾದಿರಾಜರಿಗೆ ನಮೋ ನಮೋ ॥ 4 ॥

ಗುರು **ಶೇಷ**ವಿಠಲನ ಪರಮ ಭಕ್ತರ ।
ಚರಣಯುಗಗಳಿಗೆ ನಮೋ ನಮೋ ॥ 5 ॥

****

28. ಭದ್ರಗಿರಿ ಕೇಶವದಾಸರ ರಚನೆ

184. ಗುರು ಚರಣಪಿಡಿ ನಿರತಾ ನಿರತಾ

ರಾಗ: ಕಲ್ಯಾಣಿ ತಾಳ: ಆದಿ

ಗುರು ಚರಣಪಿಡಿ ನಿರುತಾ ನಿರುತಾ ।
ಗುರುವೇ ಪೊರೆಯುವನು ಸತತಾ ಸತತಾ ॥ ಪ ॥

ಹರಿಮುನಿದರೆ ಗುರು ಪೊರೆಯಬಲ್ಲನು ।
ಗುರು ಮುನಿದರೆ ಪೊರೆಯುವರಾರಿಹರು ॥
ಗುರುವೇ ಪರಾತ್ಪರಗುರುವೇ ಸಂಕಟಹರ ।
ಗುರು ಹರಿಹರ ಬ್ರಹ್ಮಸ್ವರೂಪನು ॥ 1 ॥

ಅಜ್ಞಾನ ಹೋಗಲಾಡಿಸುವವ ನಿಜಗುರು ।
ಜ್ಞಾನದೀಪ್ತಿಯನು ಕರುಣಿಸುವವ ಗುರು ॥
ಧ್ಯಾನ ಮೌನಗಳ ಸಾಧಿಸುವವ ಗುರು ।
ಜಾನಕೀನಾಥನ ತೋರುವವವ ಸದ್ಗುರು ॥ 2 ॥

ಆಶಾಪಾಶಗಳ ತರಿದವ ನಿಜಗುರು ।
ದೋಷದೂರ ಮಹಿಮಾನ್ವಿತ ನಿಜಗುರು ॥
ಕೇಶವದಾಸನುತನ ಪ್ರಕಾಶನ ।
ಶೂನ್ಯಹೃದಯದಲಿ ತೋರುವ ಸದ್ಗುರು ॥ 3 ॥

****

ಅನುಬಂಧ

ಸಂಸ್ಕೃತ – ತೆಲುಗು ಕೀರ್ತನೆಗಳು

29. ಅಣ್ಣಮಾಚಾರ್ಯರ ರಚನೆ

185. ಜಯ ಜಯ ನೃಸಿಂಹ ಸರ್ವೇಶಾ

ರಾಗ: ಮೋಹನ ತಾಳ: ಆದಿ

ಜಯ ಜಯ ನೃಸಿಂಹ ಸರ್ವೇಶಾ ।
ಭಯಹರ ವೀರ ಪ್ರಹ್ಲಾದವರದಾ ॥ ಪ ॥

ಮಿಹಿರ ಶಶಿನಯನ ಮೃಗನರವೇಷ ।
ಬಹಿರಂತಸ್ಥಲ ಪರಿಪೂರ್ಣ ॥
ಅಹಿನಾಯಕ ಸಿಂಹಾಸನರಾಜಿತ ।
ಬಹುಳಗುಣಗಣ ಪ್ರಹ್ಲಾದವರದ ॥ 1 ॥

ಚಟುಲಪರಾಕ್ರಮ ಸಮಘನವಿರಹಿತ ।
ನಿಟಲನೇತ್ರ ಮೌನಿಪ್ರಣುತ ॥
ಕುಟಿಲದೈತ್ಯತತಿ ಕುಕ್ಷಿವಿದಾರಣ ।
ಪಟುಲವಜ್ರನಖ ಪ್ರಹ್ಲಾದವರದಾ ॥ 2 ॥

ಶ್ರೀವನಿತಾಶ್ರಿತ ವಾಮಾಂಕ ।
ಭಾವಜ ಕೋಟಿ ಪ್ರತಿಮಾನ ॥
ಶ್ರೀ **ವೇಂಕಟಗಿರಿ** ಶಿಖರನಿವಾಸ ।
ಪಾವನಚರಿತ ಪ್ರಹ್ಲಾದವರದಾ ॥ 3 ॥

****

30. ತ್ಯಾಗರಾಜರ ರಚನೆಗಳು

ಉತ್ಸವ ಸಂಪ್ರದಾಯದ ಕೀರ್ತನೆಗಳು

186. ತವದಾಸೋಹಂ ತವದಾಸೋಹಂ

ರಾಗ: ನಾದನಾಮಕ್ರಿಯೆ **ತಾಳ: ಆದಿ**

ತವದಾಸೋಽಹಂ ತವದಾಸೋಽಹಂ ।
ತವದಾಸೋಽಹಂ ದಾಶರಥೇ ॥ ಪ ॥

ಸರಸಿಜನೇತ್ರ ಪರಮಪವಿತ್ರ ।
ಸುರಪತಿಮಿತ್ರ ದಾಶರಥೇ ॥
ನಿನ್ನ ಕೋರಿತಿರಾ ನಿರುಪಮ ಶೂರ ।
ನನ್ನೇಲುಕೋರ ದಾಶರಥೇ ॥ 1 ॥

ಮನವಿನಿ ವಿನುಮ ಮರುವಕ ಸಮಯಮ ।
ಇನಕುಲ ಧನಮ ದಾಶರಥೇ ॥
ಘನಸಮನೀಲ ಮುನಿಜನಪಾಲ ।
ಕನಕದುಕೂಲ ದಾಶರಥೇ ॥ 2 ॥

ಧರಣಿವಂಟಿ ದೈವಮು ಲೇದಂಟಿ ।
ಶರಣನು ಕುಂಟಿ ದಾಶರಥೇ ॥
ಆಗಮ ವಿನುತ ರಾಗವಿರಹಿತ ।
ತ್ಯಾಗರಾಜನುತ ದಾಶರಥೇ ॥ 3 ॥

****

187. ನಮೋ ನಮೋ ರಾಘವಾಯ

ರಾಗ: ದೇಶ್ ತೋಡಿ **ತಾಳ: ರೂಪಕ**

ನಮೋ ನಮೋ ರಾಘವಾಯ ಅನಿಶಂ ॥ಪ॥

ಶುಕನುತಾಯ ದೀನಬಂಧುವೇ ಹರೇರಾಮ ।
ಸಕಲಲೋಕ ದಯಾಸಿಂಧುವೇ ಹರೇರಾಮ ॥ 1 ॥

ಆಯುರಾರೋಗ್ಯದಾಯಿನೇ ಹರೇರಾಮ ।
ವಾಯುಜನುತ ಭೋಗಿಶಾಯಿನೇ ಹರೇರಾಮ ॥ 2 ॥

ನಾಗರಾಜ ಪಾಲನಾಯ ಹರೇರಾಮ ।
ತ್ಯಾಗರಾಜಸೇವಿತಾಯ ಹರೇರಾಮ ॥ 3 ॥

****

188. ಕ್ಷೀರಸಾಗರ ವಿಹಾರ

ರಾಗ: ಆನಂದ ಭೈರವಿ ತಾಳ: ಛಾಪು

ಕ್ಷೀರಸಾಗರವಿಹಾರ ಅಪರಿಮಿತ ಘೋರಪಾತಕವಿದಾರ ।
ಕ್ರೂರಜನಗಣ ವಿದೂರ ।
ನಿಗಮ ಸಂಚಾರ ಸುಂದರ ಶರೀರ ॥ ಪ ॥

ಶತಮಖಾಹಿತ ವಿಭಾಂಗ ಶ್ರೀರಾಮ ।
ಶಮನರಿಪು ಸನ್ನುತಾಂಗ ಶ್ರಿತಮಾನವಾಂತರಂಗ ।
ಜನಕಜಾ ಶೃಂಗಾರ ಜಲಜ ಭೃಂಗ ॥ 1 ॥

ರಾಜಾಧಿರಾಜವೇಷ ಶ್ರೀರಾಮ ರಮಣೀಯ ಕರಸುಘೋಷ ।
ರಾಜನುತ ಲಲಿತಭಾಷ ಶ್ರೀತ್ಯಾಗರಾಜಾದಿ ಭಕ್ತಪೋಷ ॥ 2 ॥

****

189. ಜಯ ಮಂಗಳಂ ನಿತ್ಯ ಶುಭಮಂಗಳಂ

ರಾಗ: ಮಧ್ಯಮಾವತಿ ತಾಳ: ಆದಿ

ಜಯ ಮಂಗಳಂ ನಿತ್ಯ ಶುಭಮಂಗಳಂ ।
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥

ಕರುಣಾರಸಾಕ್ಷಾಯ ಕಾಮಾರಿ ವಿನುತಾಯ ।
ತರುಣಾರುಣಾಭ ಸುಂದರಪದಾಯ ॥
ನಿರುಪಮಶರೀರಾಯ ನಿಖಿಲಾಗಮಚರಾಯ ।
ಸುರವಿನುತಚರಿತಾಯ ಸುಂದರಪದಾಯ ॥ 1 ॥

ಕುಂದಸುಮರದನಾಯ ಕುಂಭಜಸುಗೇಯಾಯ ।
ಮಂದರಾಗಧರಾಯ ಮಾಧವಾಯ ॥
ಕಂದರ್ಪಜನಕಾಯ ಕಾಮಿತ ಸುಫಲದಾಯ ।
ಬೃಂದಾರಕಾರಾತಿ ಭೀಕರಾಯ ॥ 2 ॥

ಸರ್ವಲೋಕಹಿತಾಯ ಸಾಕೇತಸದನಾಯ ।
ನಿರ್ವಿಕಾರಾಯ ಮಾನಿತ ಗುಣಾಯ ॥
ಸಾರ್ವಭೌಮಾಯ ಪೋಷಿತ **ತ್ಯಾಗರಾಜಾ**ಯ ।
ನಿರ್ವಾಣ ಫಲದಾಯ ನಿರ್ಮಲಾಂಗಾಯ ॥ 3 ॥

****

190. ಗಂಧಮು ಪುಯ್ಯರುಗಾ ಪನ್ನೀರು

ರಾಗ: ಪುನ್ನಾಗವರಾಳಿ **ತಾಳ: ಆದಿ**

ಗಂಧಮು ಪುಯ್ಯರುಗಾ ಪನ್ನೀರು ॥ ಪ ॥
ಅಂದಮ್ಮೈನ ಯದು ನಂದತನಯುಪೈ ।
ಕುಂದರದನ ಅರವಿಂದಗ ಪರಿಮಳ ॥ ಅ.ಪ ॥

ತಿಲಕಮು ತಿದ್ದರುಗಾ ಕಸ್ತೂರಿ ತಿಲಕಮು ತಿದ್ದರುಗಾ ।
ಕಲಕಲ ಮನುಮುಖ ಕೆಳಗ ನಿ ಸೊಕ್ಕುಚು ಬಲುಕುಲ ।
ನಮೃತಮು ಲೊಳಿಕೆಡು ಸ್ವಾಮಿಕಿ ॥ 1 ॥

ಪೂಜಲು ಸೇಯರುಗಾ ಮನಸಾರ ಪೂಜಲು ಸೇಯರುಗಾ ।
ಜಾಜಲು ಮರಿವಿರಿ ಜಾಜುಲು ದವನಮು ।
ರಾಜಿತ **ತ್ಯಾಗರಾಜ**ನುತುನಿಕಿ ॥ 2 ॥

****

191. ಸೀತಾ ಕಲ್ಯಾಣ ವೈಭೋಗಮೇ

ರಾಗ: ಕುರಂಜಿ **ತಾಳ: ತ್ರಿಶ್ರ**

ಸೀತಾಕಲ್ಯಾಣ ವೈಭೋಗಮೇ ।
ರಾಮಕಲ್ಯಾಣ ವೈಭೋಗಮೇ ॥ ಪ ॥

ಪವನಜ ಸ್ತುತಿಪಾತ್ರ ಪಾವನಚರಿತ್ರ ।
ರವಿ ಸೋಮವರನೇತ್ರ ರಮಣೀಯಗಾತ್ರ ॥ 1 ॥

ಭಕ್ತಜನಪರಿಪಾಲ ಭರಿತಶರಜಾಲ ।
ಭುಕ್ತಿಮುಕ್ತಿದಲೀಲ ಭೂದೇವಪಾಲ ॥ 2 ॥

ಪಾಮರಾಸುರ ಭೀಮ ಪರಿಪೂರ್ಣಕಾಮ ।
ಶ್ಯಾಮ ಜಗದಭಿರಾಮ ಸಾಕೇತಧಾಮ ॥ 3 ॥

ಸರ್ವಲೋಕಾಧಾರ ಸಮರೈಕಧೀರ ।
ಗರ್ವಮಾನಸದೂರ ಕನಕಾಂಗಧೀರ ॥ 4 ॥

ಪರಮೇಶ ನುತಗೀತ ಭವಜಲಧಿ ಪೋತ ।
ತರಣಿ ಕುಲಸಂಜಾತ **ತ್ಯಾಗರಾಜ**ನುತ ॥ 5 ॥

****

192. ಜಾನಕೀರಮಣ ಭಕ್ತ

ರಾಗ: ಶುದ್ಧ ಸೀಮಂತಿನಿ **ತಾಳ: ಆದಿ**

ಜಾನಕೀರಮಣ ಭಕ್ತ ।
ಪಾರಿಜಾತಪಾಹಿ ಸಕಲಲೋಕಶರಣ ॥
ಗಾನಲೋಲ ಘನತಮಾಲ ನೀಲ ।
ಕರುಣಾಲವಾಲ ಸುಗುಣಶೀಲ॥

ರಕ್ತನಳಿನದಳನಯನ ನೃಪಾಲ ।
ರಮಣಿ ಯಾನನ ಮುಖುರಕಪೋಲ ॥
ಭಕ್ತಿಹೀನಜನ ಮದಗಜಜಾಲ ।
ಪಂಚವದನ **ತ್ಯಾಗರಾಜ**ಪಾಲ ॥

****

193. ಮೇಲುಕೋವಯ್ಯ ಮಮ್ಮೇಲುಕೋ

ರಾಗ: ಭೌಳಿ　　　　　　　　　　　　　　ತಾಳ: ಖಂಡ ಛಾಪು

ಮೇಲುಕೋವಯ್ಯ ಮಮ್ಮೇಲುಕೋ ರಾಮ ।
ಮೇಲೈನ ಸೀತಾಸಮೇತ ನಾ ಭಾಗ್ಯಮ ॥ ಪ ॥

ನಾರದಾದುಲು ನಿನ್ನ ಕೋರಿನೀ ಮಹಿಮಲ ವಾರಿಗಾ ।
ಪಾಡುಚುನ್ನಾರಿಪುಡುಕೆಲ್ಲ ವಾರಿಗಾ ವಚ್ಚಿನದಿ ಶ್ರೀರಾಮ ।
ನವನೀತ ಕ್ಷೀರಮುಲು ಬಾಗುಗ ನಾರಗಿಂಪನು ವೇಗ ॥ 1 ॥

ರಾಜರಾಜೇಶ್ವರ ಇಭರಾಜ ಮುಖ ಸಾಕೇತರಾಜ ।
ಸದ್ಗುಣ **ತ್ಯಾಗರಾಜ**ನುತ ಚರಣ ರಾಜನ್ಯ ವಿಭುದಗಣ ।
ರಾಜಾದುದೆಲ್ಲ ನಿನು ಪೂಜಿಂಪ ಕಾಚಿನ ಈ ಜಗಮು ಪಾಲಿಂಪ ॥2॥

****

194. ಪಾಹಿಮಾಂ ಶ್ರೀರಾಮಚಂದ್ರ

ರಾಗ: ಕಾಪಿ　　　　　　　　　　　　　　ತಾಳ: ಅದಿ

ಪಾಹಿಮಾಂ ಶ್ರೀರಾಮಚಂದ್ರ ।
ಪಾಹಿಮಾಂ ಶ್ರೀರಾಮ ರಾಮ ॥

ದಿಕ್ಕು ನೀ ವೈಯುಂಡಗಾನು ।
ಗ್ರಕ್ಕನವೇಡುಕೊನ್ನಾನು ॥

ಮಿಕ್ಕುವ ತೋರಾಮ ನೀವು ।
ಎಕ್ಕುವ ಜೇಸಿ ನನ್ನು ಬ್ರೋವು ॥

ಮನ್ಮನ ಜೇಸೇವಯ್ಯ ಆಪನ್ನ ರಕ್ಷಕ ರಾಮಯ್ಯ
ಪನ್ನಗ ಶ್ರೀ **ತ್ಯಾಗರಾಜ** ಸನ್ನುತ ಭಾಸ್ಕರ ತೇಜ ॥

****

195. ದಶರಥನಂದನ ದಾನವಮರ್ದನ

ರಾಗ: ಅಸಾವೇರಿ   ತಾಳ: ಆದಿ

ದಶರಥನಂದನ ದಾನವ ಮರ್ದನ ।
ದಯಯಾ ಮಾಂ ಪಾಹಿ ॥

ಚಾಲನುಮಾಯಾ ಜಾಲಮುಚೇಯ ।
ಜಾಲನು ತೋಯ ಜಾಲಯ ರಾಯ ॥

ಮನಸುನ ನಾರಿ ಮಣುಲನು ಕೋರಿ ।
ಜನುಲತೊಜೇರಿ ಜೆಪ್ಪ ನೀ ದಾರಿ ॥

ಧನಿಕುನಿನೆಂಚಿ ತನುವುನಿಪೆಂಚಿ ।
ವನಿತಲಗಾಂಚಿ ವದರುದುಪೊಂಚಿ ॥

ನೇಪರದೇಶಿ ನೇರ್ಪುನಗಾಸಿ ।
ಬಾಪವೆಡಾಸಿ, ಪಾವನುಜೇಸಿ ॥

ಸರ್ವಮು ನೀವು ಸಾರೆಕುರಾವು ।
ಗರ್ವಮುಲೇವು ಗ್ರಕ್ಕನಬ್ರೋವು ॥

ವಲಚಿತ ನೀಲ ವರ್ಣಸುಶೀಲ ।
ಚಲಮಿಕ ನೇಲ ಸ್ವಾಮಿನೇತಾಳ ॥

ಸಾಗರಶಯನ ಸಾರಸನಯನ ।
ತ್ಯಾಗರಾಜಾನನ ತಾರಕಸುಗುಣ ॥

****

196. ಶ್ರೀರಾಮ ಶ್ರೀರಾಮ ಶ್ರೀ ಮನೋಹರಮ

ರಾಗ: ಶಹನ   ತಾಳ: ಆದಿ

ಶ್ರೀರಾಮ ಶ್ರೀರಾಮ ಶ್ರೀ ಮನೋಹರಮ ॥ ಪ ॥

ಏಲರಾ ನೀದಯ ಇಂತೈನರಾದಯಾ ।
ಚಾಲದಾ ಸದಯ ಸ್ವಾಮಿ ತಾಳದಯಾ ॥ ಅ.ಪ ॥

ಇಪ್ಪುಡೇ ಲೇದಟ ಇಕನು ಬ್ರೋತುವಟ ।
ಎಪ್ಪುಡು ಕಟಕಟ ಇಕದಯಾಳುವಟ ॥ 1 ॥

ಇಂಕಯಿ ಮರ್ಮಮಾ ಇದಿ ನೀಕು ಧರ್ಮಮಾ ।
ಪಂಕಜ ವದನಮಾ ಬಾಗುಗಾ ಜೂಡುಮಾ ॥ 2 ॥

ಏಜನ್ಮ ಪಾಪಮೋ ಎವ್ವರಿ ಶಾಪಮೋ ।
ಏನಾಟಿ ಕೋಪಮೋ ನೇರಿಯನಾ ತಾಪಮೋ ॥ 3 ॥

ಎನ್ನಾಳೀ ದೀನತ ಇದಿ ನೀಕು ಯೋಗ್ಯತ ।
ಪಲಿಕಿ ಬೊಂಕವಟ ಪರಮ ಶಾಂತುಡಟ ॥ 4 ॥

ಭಕ್ತ ಕಾಂತುಡಟ ಪದ್ಮನೇತ್ರು ಡಟ ।
ಸರ್ವಮು ನೀವಟ ಸತ್ಯರೂಪುಡಟ ।
ರಾಗ ವಿರಹಿತ **ತ್ಯಾಗರಾಜ**ನುತ ॥ 5 ॥

****

197. ಕರುಣಾಜಲದೇ ದಾಶರಥೇ

ರಾಗ: ನಾದನಾಮಕ್ರಿಯ **ತಾಳ: ಆದಿ**

ಕರುಣಾಜಲಧೇ ದಾಶರಥೇ ।
ಕಮನೀಯಾನನ ಸುಗುಣನಿಧೇ ॥ ಪ ॥

ನಿಜದಾಸುಲಯನು ಭವಮೊಕಟೆ ।
ನಿನ್ನು ತೆಲಿಯನಿ ಜನಮತಮೊಕಟೆ ॥ 1 ॥

ಸುಕೃತಮುಲೊಪ್ಪಗಿಂತುರೇನಿ ।
ಪ್ರಕೃತಿನಿ ಕೆಲಿಸಿಯೇಗಿಂತುರೇ ॥ 2 ॥

ಮನಸಾರಗ ಪೂಜಿಂಪುರೇನಿನು ।
ಮಾಟಿ ಮಾಟಿಕಿ ಯೋಜಿಂತುರೇ ॥ 3 ॥

ಭಾಗವತ ಪ್ರಹ್ಲಾದಹಿತರಾಮ ಭಾವುಕ **ತ್ಯಾಗರಾಜ**॥

****

198. ಜೋ ಜೋ ರಾಮ

ರಾಗ: ರೀತಿಗೌಳ ತಾಳ: ಆದಿ

ಜೋ ಜೋ ರಾಮ ಆನಂದ ಘನ ।
ಜೋ ಜೋ ರಾಮಾ ॥ ಪ ॥

ಜೋ ಜೋ ದಶರಥಬಾಲಾ ರಾಮಾ ।
ಜೋ ಜೋ ಪೂಜಾಲೋಲ ರಾಮಾ ॥ 1 ॥

ಜೋ ಜೋ ನಿರ್ಗುಣರೂಪ ರಾಮಾ
ಜೋ ಜೋ ಸುಗುಣಕಲಾಪ ರಾಮಾ ॥ 2 ॥

ಜೋ ಜೋ ಮೃದುತರಭಾಷಾ ರಾಮಾ ।
ಜೋ ಜೋ ಮಂಜುಳ ವೇಷಾ ರಾಮಾ ॥ 3 ॥

ಜೋ ಜೋ ತ್ಯಾಗರಾಜಾರ್ಚಿತ ರಾಮಾ
ಜೋ ಜೋ ಭಕ್ತ ಸಮಾಜ ರಾಮಾ ॥ 4 ॥

****

ಕೀರ್ತನೆಗಳು

199. ಮರುಗೇಲರಾ ಓ ರಾಘವಾ

ರಾಗ: ಜಯಂತಶ್ರೀ ತಾಳ: ಆದಿ

ಮರುಗೇಲರಾ ಓ ರಾಘವಾ ॥ ಪ ॥

ಮರುಗೇಲ ಚರಾಚರ ರೂಪ ।
ಪರಾತ್ಪರ ಸೂರ್ಯ ಸುಧಾಕರ ಲೋಚನಾ ॥ ಅ.ಪ ॥

ಅನ್ನಿ ನೀವನುಚು ।
ಅಂತರಂಗಮುನ ತಿನ್ನಗಾ ವೆದಿಕಿ ॥
ತೆಲಿಸಿಕೊಂಟಿನಯ್ಯ ।
ನಿನ್ನೆ ಗಾನಿಮದಿನಿ ॥
ನೆನ್ನ ಜಾಲ ನೊರುಲಾ ।
ನನ್ನು ಬ್ರೋವವಯ್ಯ ತ್ಯಾಗರಾಜನುತ ॥

200. ಶೋಬಿಲ್ಲು ಸಪ್ತಸ್ವರ

ರಾಗ: ಜಗನ್ಮೋಹಿನಿ **ತಾಳ: ರೂಪಕ**

ಶೋಬಿಲ್ಲು ಸಪ್ತಸ್ವರ ಸುಂದರುಲ ಭಜಿಂಪವೆ ಮನಸಾ ।
ನಾಭಿ ಹೃತ್ಕಂಠ ರಸನ ನಾಸಾದುಲ ಎಂದು ॥ ಪ ॥
ಧರಋುಕ್ ಸಾಮಾದುಲಲೊ ।
ವರಗಾಯತ್ರಿ ಹೃದಯ ಮುನ ॥
ಸುರಭೂಸುರ ಮಾನಸ ಮುನ ।
ಶುಭ **ತ್ಯಾಗರಾಜು** ನೀ ಎಡ ॥

201. ವೈಕುಂಠ ವರ್ಣನೆ

ರಾಗ: ಅರಭಿರಾಗ

ಜಯತು ಜಯತು ಸಕಲ ನಿಗಮಾಗಮ ।
ಸಕಲ ಕಿನ್ನರ ಕಿಂಪುರುಷ ಸಿದ್ಧ ವಿದ್ಯಾಧರ ಗೇಯಮಾನ ॥
ಬಹು ಜಗತುದಯ ರಕ್ಷಣಾ ನಿಲಯ
ಹೇತುಭೂತ ಚತುರಾನನ ಹರಿಹರ ಪ್ರಭೃತಿ
ಚಿಂತಯಮಾನ ಮಣಿದ್ವೀಪೇ ಜಿತಸಾಧುಹೃತ್ತಾಪೇ ॥
ಸಕಲ ಸುರಮುನಿ ನಿಕರ ಭಕ್ತಜನ ನಿಶ್ಚಯಹೃದಯಕಾಮಿತ
ಸಂತಾನ ಸೌಭಾಗ್ಯ ಧನಕನಕ ವಾಹನ ಅಷ್ಟೈಶ್ವರ್ಯದಾಯಕ,
ಚಿಂತಾಮಣಿ ಮಯ ಮಹಾ ವೈಕುಂಠನಗರೇ ನೇತ್ರಾನಂದಕರೇ ।
ಚಂಡ ಮಾರ್ತಾಂಡ ವಿಲಸಿತ ಸಪ್ತಹೇಮಪ್ರಾಕಾರ
ಶೋಭಾಯಮಾನ, ಭಾನುಕೋಟಿಸಮಾನ,
ವಜ್ರಸ್ತಂಭಾಯುತಸಹಿತ ಸ್ವರ್ಣಮಂಟಪಾಂತರೇ ಶುಭಕರೇ

ನವರತ್ನಖಚಿತ ಕನಕಮಯ ಹಂಸತೂಲಿಕಾ ತಲ್ಪ
ಶರಚಂದ್ರ ಕೋಟಿನಿಭಶೇಷತಲ್ಪೆ ।
ಸುರನಾಯಕ ಅಷ್ಟದಿಕ್ಪಾಲಾಮಕುಟ,
ಮಣಿಗಣನೀರಾಜಿತ ಪಾದಾರವಿಂದ ಜಗದಾನಂದ
ಉಭಯಪಾರ್ಶ್ವೋಜ್ವಲಿತ ಕರ್ಣಕುಂಡಲಃ
ನಿಂದಿತ ಚಂದ್ರಮಂಡಲಃ ಸೇವಿತ ಮುನಿಮಂಡಲಃ
ಭಕ್ತತ್ರಾಣಪರಾಯಣಃ ಶ್ರೀಮನ್ನಾರಾಯಣಃ
ಲಕ್ಷ್ಮೀರಮಣೋ ಭಗವಾನ್

202. ಅನುರಾಗ ಮುಲೇನಿ ಮನಸುನ

ರಾಗ: ಸರಸ್ವತಿ **ತಾಳ: ರೂಪಕ**

ಅನುರಾಗಮುಲೇನಿ ಮನಸುನ ಸುಜ್ಞಾನನಮುರಾದು ॥ ಪ ॥

ಘನುಲೈನ ಅಂತರ ಜ್ಞಾನುಲಕೆರು ಕೇಗಾನಿ ॥ ಅ.ಪ ॥

ವಗವಗಗಾ ಭುಜಿಯಿಂಚೇ ವಾರಿಕಿ ತೃಪ್ತಿಯೌ ನಾ ರೀತಿ
ಸುಗುಣಜ್ಯಾನಮು ಪೈನಿಸೌಖ್ಯಮು **ತ್ಯಾಗರಾಜ**ನುತ ॥

203. ಕಂಟಜೂಡುಮಿ ಒಕ ಪಾರಿ

ರಾಗ: ವಾಚಸ್ಪತಿ **ತಾಳ: ಆದಿ**

ಕಂಟಜೂಡುಮಿ ಒಕ ಪಾರಿ ಕ್ರಿಕಂಟ ಜೂಡುಮಿ ॥ಪ॥

ಬಂಟುಡೈ ವೆಲಯು ಬಾಗುಗಾನಿ ।
ತಪ್ಪು ತಂಟಲೆಲ್ಲ ಮನು ಕೊನ್ನನನ್ನು ॥ ಅ.ಪ ॥

ಅಲನಾಡು ಸೌಮಿತ್ರಿ ಪಾದಸೇವ ।
ಚಲರೇಗಿ ಸೇಯು ವೆಲಸೀತತೊ ॥
ಬಲ್ಕಿ ಚೂಸಿನಂತ ಪುಲಂಕಾಕಿತುಡೈ ।
ಬರಗೀನಯೆಟು **ತ್ಯಾಗರಾಜು**ನೀ ॥

****

204. ಶಂಭೋ ಮಹಾದೇವ

ರಾಗ: ಕಾಮವರ್ಧಿನಿ **ತಾಳ: ರೂಪಕ**

ಶಂಭೋ ಮಹಾದೇವ ಶಂಕರ ಗಿರಿಜಾ ರಮಣ ॥ ಪ ॥

ಶರಣಾಗತ ಜನರಕ್ಷಕ ಅಂಭೋರುಹ ಲೋಚನ ।
ತವ ಪಾದಾಂಬುಜಮ್ ಭಕ್ತಿಂ ದೇಹಿ ॥ ಅ.ಪ ॥

ಪರಮದಯಾಕರ ಮೃಗಧರ ।
ವರ ಗಂಗಾಧರ ಧರಣಿಸುರಭೂಷಣ ।
ತ್ಯಾಗರಾಜ ವರಹೃದಯ ನಿವಾಸ ॥ 1 ॥

ಸುರಬೃಂದ ಕಿರೀಟಮಣಿ ।
ವರನೀರಾಜಿತಪದ ಗೋಪುರವಾಸ ।
ಸುಂದರೇಶ ಗಿರೀಶ ಪರಾತ್ಪರ ಶುಭಕರ ॥ 2 ॥

****

205. ನಾದ ತನುಮನಿಶಂ ಶಂಕರಂ

ರಾಗ: ಚಿತ್ತರಂಜನಿ **ತಾಳ: ಆದಿ**

ನಾದತನುಮನಿಶಂ ಶಂಕರಂ ।
ನಮಾಮಿ ಮೇ ಮನಸಾ ಶಿರಸಾ ॥ ಪ ॥

ಮೋದಕರಂ ನಿಗಮೋತ್ತಮ ।
ಸಾಮವೇದಸಾರಂ ವಾರಂ ವಾರಂ ॥ ಅ.ಪ ॥

ಸದ್ಯೋಜಾತ್ಯಾದಿ ಪಂಚವಕ್ತ್ರಜಂ ।
ಸರಿಗಮ ಪದನೀ ವರ ಸಪ್ತಸ್ವರಂ ॥
ವಿದ್ಯಾಲೋಲಂ ವಿಗಳಿತಕಾಲಂ ।
ವಿಮಲಹೃದಯ **ತ್ಯಾಗರಾಜ**ಪಾಲಂ ॥

****

ಪದಾರಂಭದ ಅಕಾರಾದಿ

ಪದಾರಂಭದ ಅಕಾರಾದಿ

ಪದಾರಂಭದ ಅಕಾರಾದಿ


ಪದಾರಂಭದ ಅಕಾರಾದಿ

ಪದಾರಂಭದ ಅಕಾರಾದಿ

ಪದಾರಂಭದ ಅಕಾರಾದಿ

ಪದಾರಂಭದ ಅಕಾರಾದಿ

ದೇವಸ್ಥಾನದ ಮೇಲ್ಛಾವಣಿಯಲ್ಲಿರುವ ಶಿಲಾಶಾಸನ



ಹಾಡುವಸಿವನಯ್ಯನುಮುದಿಗೆರೆಯ ತಿರುವೆಂಗಡನಾಥನ ಬೃತ್ಯನು

ಶ್ರೀ ರಂಗನಾಥಸ್ವಾಮಿ ದೇವಸ್ಥಾನ ದೊಡ್ಡಮುದಿಗೆರೆ



ದಾಸಗಾನಸೌರಭ

ಕನ್ನಡನಾಡಿನಲ್ಲಿ ಸಂಪ್ರದಾಯಸ್ಥಮಹಿಳೆಯರು, ದೈವಭಕ್ತರು, ಪೂಜಾವೇಳೆಯಲ್ಲಿ, ಭಜನಮಂದಿರಗಳಲ್ಲಿ ಮನೆಗಳಲ್ಲಿ ಹಬ್ಬಹರಿದಿನಗಳಲ್ಲಿ ದಾಸರಕೀರ್ತನೆಗಳನ್ನು ಹಾಡಿಕೊಳ್ಳುತ್ತಾರೆ ಮಕ್ಕಳಿಗೆ ಇತರರಿಗೆ ಹೇಳಿಕೊಡುತ್ತಾರೆ, ಹೀಗಾಗಿ ಕೀರ್ತನಸಾಹಿತ್ಯ ನಮ್ಮಲ್ಲಿ ಪರಂಪರಾಗತವಾಗಿ ಉಳಿದುಬಂದಿದೆ. ಅನಕ್ಷರಸ್ಥರು ಮೌಖಿಕದಜತೆಗೆ ಬರಹದಲ್ಲೂ ಉಳಿಸಿಕೊಂಡು ಬಂದಿದ್ದಾರೆ ಹೀಗೆ ತಾವು ಕಲಿತುಕೊಂಡು ಉಳಿದವರಿಗೆ ಹೇಳಿಕೊಟ್ಟ ಕೀರ್ತನೆಗಳನ್ನು ಸಂಗ್ರಹಿಸಿರುವವರಲ್ಲಿ ಶ್ರೀಮತಿ ರಮಾಕೇಶವಮೂರ್ತಿ ಒಬ್ಬರು. ಈ ಅಮೂಲ್ಯ ಕೀರ್ತನಸಂಗ್ರಹವನ್ನು ಶ್ರೀಯುತ ಶಿವಶಂಕರ್ ಮತ್ತು ಭಾಸ್ಕರ ಸಹೋದರರ ಕುಟುಂಬದವರು ಶಾಸ್ತ್ರದಾನವಾಗಿ ಭಕ್ತರಿಗಾಗಿ, ಗಾನಾಸಕ್ತರಿಗಾಗಿ ಉಪಯೋಗವಾಗಲಿ ಎಂದು ಅಚ್ಚುಕಟ್ಟಾಗಿ ಪ್ರಕಟಿಸಿದ್ದಾರೆ. ಪೊ॥ ಜಿ. ಅಶ್ವತ್ಥನಾರಾಯಣರು ಸಂಪಾದಕರಾಗಿ ಪರಿಷ್ಕರಿಸಿ ಕೊಟ್ಟಿದ್ದಾರೆ. ಕನ್ನಡದಲ್ಲಿ ಇದುವರೆಗೆ ಪ್ರಕಟವಾದ ಭಜನಕೀರ್ತನಗಳ ಸಂಗ್ರಹದಲ್ಲಿ ದಾಸಗಾನಸೌರಭ ಒಂದು ಉತ್ತಮ ಕೀರ್ತನಸಂಗ್ರಹಗ್ರಂಥವಾಗಿ ಕನ್ನಡಕ್ಕೆ ಕೊಡುಗೆ ಆಗಿದೆ.

ಪ್ರಕಾಶಕರು:
ಶ್ರೀ ರಂಗನಾಥ ಪ್ರಕಾಶನ
ಹಿ. ಭಾಸ್ಕರ
001, ಉದಯ್ ರೆಸಿಡೆನ್ಸಿ
#255, ಅಂಕಪ್ಪ ಲೇಔಟ್, ಉತ್ತರಹಳ್ಳಿ ಮುಖ್ಯರಸ್ತೆ
ಬೆಂಗಳೂರು - 560061
ದೂ: 080-26666176, 9008018330